ಆಯುರ್ವೇದದಲ್ಲಿ ನಾಡೀವಿಜ್ಞಾನ

ಸಂಪಾದಕರು : ವಿದ್ಯಾಲಂಕಾರ /ಸಾ. ಕೃ. ರಾಮಚಂದ್ರರಾವ್



ಆಯುರ್ವೇದದಲ್ಲಿ ನಾಡೀವಿಜ್ಞಾನ

ಸಂಪಾದಕರು
ವಿದ್ಯಾಲಂಕಾರ ಪ್ರೊ॥ ಸಾ. ಕೃ. ರಾಮಚಂದ್ರರಾವ್

ಐಬಿಎಚ್ ಪ್ರಕಾಶನ
ಗಾಂಧಿನಗರ, ಬೆಂಗಳೂರು 560 009

AYURVEDADALLI NADIVIGNANA – an Ayurvedic system of Pulse-examination edited by Prof. S. K. Ramachandra Rao and published by G.K. Ananthram for IBH Prakashana Gandhinagar Bangalore–560 009.

© ಲೇಖಕರದು 1984

ಬೆಲೆ : ಎಂಟು ರೂಪಾಯಿಗಳು

ಮೊದಲನೆಯ ಮುದ್ರಣ : 1984. ಪ್ರಕಾಶಕರು : ಐಬಿಎಚ್ ಪ್ರಕಾಶನ ಇವರ ಪರವಾಗಿ ಜಿ. ಕೆ. ಅನಂತರಾಮ್, ಐದನೆಯ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು–560 009 ಮುದ್ರಕರು : ಎಚ್. ಎಸ್. ಎನ್. ರಾವ್, ಐಬಿಎಚ್ ಪ್ರಕಾಶನ ಪ್ರಿಂಟರಿ, ಬೆಂಗಳೂರು 560 054.

'ಆಯುರ್ವೇದ ವಿಶ್ವಕೋಶ'ದ

ಸಂಪುಟಗಳ ಪ್ರಕಟಣೆಗೆ
ಕಾರಣರಾದ

ಡಾ॥ ವಿ. ಪರಮೇಶ್ವರ

ಅವರಿಗೆ
ಸಮರ್ಪಣೆ

ಸಂಪಾದಕನ ಅರಿಕೆ

ಆಯುರ್ವೇದದಲ್ಲಿ ರೋಗವನ್ನು ಗುರುತಿಸಲು, ರೋಗದ ಕಾರಣವನ್ನು ಕಂಡುಹಿಡಿಯಲು, ಚಿಕಿತ್ಸೆಯ ಬಗೆಯನ್ನು ನಿರ್ಧರಿಸಲು ಅಷ್ಟಸ್ಥಾನ ಪರೀಕ್ಷೆಯೆಂಬ ಪದ್ಧತಿಯನ್ನು ಬಳಸುತ್ತಾರೆ. ಅಷ್ಟಸ್ಥಾನವೆಂದರೆ ರೋಗ ಸ್ಪಷ್ಟವಾಗಿ ಕಾಣಿಸಿಕೊಳ್ಳುವ ಎಂಟು ಎಡೆಗಳು—ನಾಡಿ, ನಾಲಗೆ, ನೋಟ, ಸ್ವರ, ಸ್ಪರ್ಶ, ಆಕೃತಿ, ಮೂತ್ರ ಮತ್ತು ಮಲ. ಇವುಗಳಲ್ಲಿ ನಾಡೀ ಪರೀಕ್ಷೆಯೇ ತುಂಬ ಮುಖ್ಯವಾದುದು. ನಾಡಿಯನ್ನು ಚೆನ್ನಾಗಿ ನೋಡಲು ಬಲ್ಲವನಿಗೆ ಉಳಿದ ಪರೀಕ್ಷೆಗಳ ಅಗತ್ಯವೇ ಇಲ್ಲವೆಂದೂ ಹೇಳುವರು. ರೋಗಿಯ ಶರೀರದಲ್ಲಿ ವಾತ, ಪಿತ್ತ, ಶ್ಲೇಷ್ಮಗಳೆಂಬ ಮೂರು ದೋಷಗಳ ಸ್ಥಿತಿಗತಿಗಳು ನಾಡೀಪರೀಕ್ಷೆಯಲ್ಲಿ ತಿಳಿದುಬಂದು ರೋಗದ ಸ್ವರೂಪ, ಕಾರಣ, ತೀವ್ರತೆ, ಚಿಕಿತ್ಸೆಯ ಸಾಧ್ಯತೆ ಇವೆಲ್ಲವೂ ವೈದ್ಯನಿಗೆ ಮನದಟ್ಟಾಗಬೇಕು.

ನಾಡೀಪರೀಕ್ಷೆಯು ಅಚ್ಚುಕಟ್ಟಾದ ಶಾಸ್ತ್ರವೊಂದರ ಆಧಾರದ ಮೇಲೆ ನಿಂತಿದೆ. ನಾಡೀವಿಜ್ಞಾನದಲ್ಲಿ ದೇಹದ ರಚನೆ, ಸ್ವಭಾವ, ಪ್ರವೃತ್ತಿ, ವಿಕೃತಿಗಳನ್ನೆಲ್ಲ ಕೂಲಂಕಷವಾಗಿ ವಿಚಾರ ಮಾಡಿದ್ದಾರೆ. ಅನುಭವದಿಂದ ಹಲವಾರು ವಿವರಗಳು ಸ್ಪಷ್ಟವಾಗಿವೆ. ತ್ರಿದೋಷ ಸಿದ್ಧಾಂತದ ಮೇಲೆ ನಾಡೀವಿಜ್ಞಾನವು ಬೆಳೆದಿದೆಯಾದರೂ ಶಾರೀರ ವಿಶ್ಲೇಷಣೆ, ರೋಗನಿದಾನ, ಸ್ವಸ್ಥವೃತ್ತ, ಆತುರವೃತ್ತ ಮೊದಲಾದ ವಿಭಾಗಗಳ ಪ್ರಭಾವವನ್ನು ಅಳವಡಿಸಿಕೊಂಡಿದೆ. ಹೀಗಾಗಿ ನಾಡೀಪರೀಕ್ಷೆ ಆಯುರ್ವೇದ ವೈದ್ಯಶಾಸ್ತ್ರದಲ್ಲಿ ಪ್ರಮುಖವಾದ ಅಂಗವಾಗಿ ಮೈದಳೆಯಿತು.

ಆದರೆ ಆಯುರ್ವೇದದ ತೀರ ಪ್ರಾಚೀನ ಸ್ತರಗಳಲ್ಲಿ ನಾಡೀಪರೀಕ್ಷೆಯ ಪರಿಚಯ ಕಾಣಸಿಗುವುದಿಲ್ಲ. ನಾಡಿಯೆಂಬ ಮಾತೇನೋ ಋಗ್ವೇದದ ಮಂತ್ರಗಳಷ್ಟು ಹಳೆಯದು, ನಾಡಿಯ ವರ್ಣನೆ ಅಥರ್ವವೇದದಲ್ಲೇ ದೊರೆಯುತ್ತದೆ. ಆದರೆ ಪರೀಕ್ಷೆಗೆ ಸಿಗುವ ನಾಡಿಯ ವಿಚಾರ ಅಲ್ಲಾಗಲೀ ಚರಕ, ಸುಶ್ರುತ, ವಾಗ್ಭಟ ಇವರ ಸಂಹಿತೆಗಳಲ್ಲಾಗಲೀ ಸಿಗದಿರುವುದು ಸೋಜಿಗದ

ಹಲವಾರು ಸಂಸ್ಕೃತ, ಕನ್ನಡ ಗ್ರಂಥಗಳು ಅಲ್ಲಿವೆ; ಕೆಲವು ನೂರು ವರ್ಷಗಳ ಹಿಂದೆ ಅಚ್ಚಾದುವು, ಹಲವು ಕೈಬರಹದವು, ಕೆಲವು ಓಲೆಗರಿಯಲ್ಲಿರುವುವು. ನನ್ನ ಮಾನ್ಯಮಿತ್ರರಾದ ಡಾ॥ ಎಚ್.ಪಿ. ಮಲ್ಲೇದೇವರು ಈ ಸಂಸ್ಥೆಯ ನಿರ್ದೇಶಕರಾಗಿ ನೇಮಕಗೊಂಡುದು ನನ್ನ ಪುಣ್ಯ. ಅವರ ಔದಾರ್ಯದಿಂದ ಹಲವು ಪ್ರಾಚೀನ ವೈದ್ಯ ಗ್ರಂಥಗಳನ್ನು ಸಾವಕಾಶವಾಗಿ ನೋಡುವು ದಾಯಿತು.

ಅವುಗಳಲ್ಲಿ ಒಂದು 'ನಾಡೀವಿಜ್ಞಾನ ಪ್ರಕಾಶಿಕೆ'ಯೆಂಬುದು. "ವೈದ್ಯ ಶಾಸ್ತ್ರಾಭ್ಯಾಸಿಗಳಿಗೆ ಅತ್ಯಂತೋಪಯುಕ್ತವಾದ" ಈ ಗ್ರಂಥವು ಸಂಸ್ಕೃತ ಮೂಲ ಶ್ಲೋಕಗಳನ್ನೊಳಗೊಂಡಿದ್ದು, "ಕನ್ನಡ ತಾತ್ಪರ್ಯದೊಂದಿಗೆ ಪಂಡಿತರಿಂದ ಶೋಧಿಸಲ್ಪಟ್ಟು" "ಬಿ. ಸೋಮಸುಂದರ ಶೆಟ್ಟ್ರ ಸ್ವಕೀಯ ಶಾರದಾ ಮುದ್ರಾಕ್ಷರ ಶಾಲೆಯಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು." ಇದು ಅಚ್ಚಾದದ್ದು ಮದರಾಸಿನಲ್ಲಿ; ೧೮೯೩ರಲ್ಲಿ. ನಾನು ಪರಿಶೀಲಿಸಿದ ಹಲವು ನಾಡೀಗ್ರಂಥಗಳಲ್ಲಿ ಇದು ಸಮಗ್ರವಾಗಿಯೂ ಸ್ವಾರಸ್ಯವಾಗಿಯೂ ಉಪ ಯುಕ್ತವಾಗಿಯೂ ಇರುವಂತೆ ಕಂಡಿತು. ಅದರ ಪುನರ್ಮುದ್ರಣವಾದರೆ ಆಯುರ್ವೇದದ ಬಗ್ಗೆ ದಿಟವಾದ ಆಸಕ್ತಿಯಿರುವ ಆಯುರ್ವೇದ ವಿದ್ಯಾರ್ಥಿ ಗಳಿಗೆ ಪ್ರಯೋಜನವಾದೀತೆಂದು ಬಗೆದು ಅದರ ಪ್ರತಿಯೊಂದನ್ನು ಮಾಡಿ ಸಿದೆ. ಮಾಡಿಸುವಾಗ ಅಚ್ಚಿನಲ್ಲಿ, ಭಾಷೆಯಲ್ಲಿ ಇದ್ದ ತಪ್ಪುಗಳನ್ನು ತಿದ್ದಿದೆ; ಅರ್ಥ ಎಡವಿರುವಲ್ಲಿ ನೇರಮಾಡಿದೆ. ಅಲ್ಲದೆ ಈ ಪುಸ್ತಕದಲ್ಲಿ ಸಂಗ್ರಹೀತವಾದ ಶ್ಲೋಕಗಳ ಜೊತೆಗೆ ಇತರ ಕೆಲವು ಗ್ರಂಥಗಳಿಂದ ಪ್ರಸಕ್ತ ವಾದ, ಪೂರಕವಾದ ಭಾಗಗಳನ್ನೂ ಕೊಟ್ಟರೆ ಹೆಚ್ಚು ಪ್ರಯೋಜನವಾದೀ ತೆಂದು ಬಗೆದು ನಾಡೀವಿಜ್ಞಾನ, ನಾಡೀದರ್ಪಣ, ಯೋಗರತ್ನಾಕರ, ನಾಡೀ ನಿರ್ಣಯ, ಮೊದಲಾದ ಗ್ರಂಥಗಳಿಂದ ಶ್ಲೋಕಗಳನ್ನು ಆಯ್ದು ಸಂದರ್ಭಕ್ಕೆ ಉಚಿತವಾಗಿ ಜೋಡಿಸಿದ್ದೇನೆ. ಆದರೆ ನಾನು ಜೋಡಿಸಿರುವ ಭಾಗವನ್ನು ಕಂಸಗಳಲ್ಲಿ ಅಚ್ಚುಮಾಡಿಸಿರುವುದರಿಂದ ಮೂಲದ ಒಕ್ಕಣೆಗೆ ಭಂಗ ಬರಲಾರದು.

ನಾಡೀವಿಜ್ಞಾನವು ಉತ್ಸುಕರಲ್ಲಿ ವಿರಳವಾಗಿರುವುದರಿಂದ, ಐದು ಅನುಬಂಧಗಳನ್ನೂ ಸೇರಿಸಿದ್ದೇನೆ. ಇಲ್ಲಿ ಬಂದಿರುವ ವಿವರಗಳು 'ನಾಡೀ ಜ್ಞಾನ ಪ್ರಕಾಶಿಕೆ'ಗೆ ಪೂರಕವಾಗಿವೆ. ಮೊದಲ ಅನುಬಂಧ 'ಆಯುರ್ವೇದ ಸಂಗ್ರಹ'ವೆಂಬ ಗ್ರಂಥದಿಂದ ಆಯ್ದುಕೊಂಡ ಭಾಗ. ಓರಗಂಟಿ ಸುಬ್ರಹ್ಮಣ್ಯ

ಶಾಸ್ತ್ರಿಗಳೆಂಬುವರು ಬರೆದು ೧೮೭೦ರಷ್ಟು ಹಿಂದೆ ಅಚ್ಚಾದ ಈ ಪುಸ್ತಕವು ಇಂದು ಜನರಿಗೆ ದೊರಕುವುದಿರಲಿ, ಜನರ ನೆನಪಿನಲ್ಲೇ ಇಲ್ಲ! ಈ ಗ್ರಂಥದ ಪ್ರತಿಯೊಂದು ಸುದೈವದಿಂದ ನನ್ನ ಹಿರಿಯರ ಸಂಗ್ರಹದಲ್ಲಿತ್ತು. ದೇಶದಲ್ಲೆಲ್ಲಾ ಆಯುರ್ವೇದವೊಂದೇ ವೈದ್ಯಪದ್ಧತಿಯಾಗಿದ್ದಾಗ, ಪಾಶ್ಚಾತ್ಯ ವೈದ್ಯ ಆಗತಾನೆ ಸಂಕೋಚದಿಂದ ದೇಶವನ್ನು ಪ್ರವೇಶಿಸುತ್ತಿದ್ದಾಗ ಬರೆದದ್ದು ಈ ಪುಸ್ತಕ.

ಪಾಶ್ಚಾತ್ಯವೈದ್ಯವೇ ಮುಖ್ಯ ವೈದ್ಯಪದ್ಧತಿಯಾಗಿ, ಆಯುರ್ವೇದ ಸಂಕೋಚದಿಂದ ಮೂಲೆಯಲ್ಲಿ ಒರಗುತ್ತಲಿರುವ ನಮ್ಮ ಈ ಕಾಲದಲ್ಲಿಯೂ ಪ್ರಸಕ್ತವಾಗುವ ಇನ್ನೊಂದು ಪುಸ್ತಕ ಅಷ್ಟೇ ಹಿಂದೆ ಅಚ್ಚಾದುದು; ಹೊಸ ಪಂಡಿತ ಭೀಮರಾಯರ 'ವೈದ್ಯಸಂಗ್ರಹ'. ಇದರಿಂದ ಆಯ್ದ ಭಾಗಗಳನ್ನು ಮೂರನೆಯ ಅನುಬಂಧದಲ್ಲಿ ಕೊಟ್ಟಿದೆ. ಮೈಸೂರು ಅರಮನೆಯ ವೈದ್ಯರಾಗಿದ್ದು ನಾಡಿನಲ್ಲೆಲ್ಲ ನಾಡೀಪರೀಕ್ಷೆಯ ಹೆಗ್ಗಳಿಕೆಯನ್ನು ಹರಡಿದ ಭೀಮರಾಯರ ಪುಸ್ತಕವು ಅಚ್ಚಾದದ್ದು ೧೮೮೫ರಲ್ಲಿ.

ಎರಡನೆಯ ಅನುಬಂಧ ನೇರವಾಗಿ ನಾಡೀಪರೀಕ್ಷೆಗೆ ಸಂಬಂಧಿಸಿದುದಲ್ಲ. ಆದರೆ ನಾಡೀವಿಜ್ಞಾನದ ತಾಂತ್ರಿಕ ಹಿನ್ನೆಲೆಯನ್ನು ಕೊಂಚಮಟ್ಟಿಗಾದರೂ ಕಾಣಿಸಬೇಕೆಂದು ಸೇರಿಸಿದ ಭಾಗ ಇದು. ತಾಂತ್ರಿಕಪ್ರಕ್ರಿಯೆಗಳಲ್ಲಿ ನಾಡೀಜ್ಞಾನದ ಪ್ರಸ್ತುತತೆಯ ಅರಿವು ನನಗೆ ಮೊಟ್ಟಮೊದಲು ಆದುದು ವಿಜಯದಾಸರ ಹರಿಕಥಾಮೃತಸಾರವನ್ನು ಓದಿದಾಗ. ೧೭೨೮ ರಿಂದ ೧೮೮೯ರ ವರೆಗೆ ಬದುಕಿದ್ದ ವಿಜಯದಾಸರ ಈ ಕಾವ್ಯಗ್ರಂಥಕ್ಕೆ ಸಂಕರ್ಷಣ ಒಡೆಯರ (೧೮೧೦-೧೮೭೭) ಟೀಕೆಯಿದೆ, ಪದ್ಮನಾಭ ತೀರ್ಥರ ಭಾವಪ್ರಕಾಶಿಕೆಯೆಂಬ ವ್ಯಾಖ್ಯಾನವಿದೆ. ಈ ಎಲ್ಲ ಪ್ರಕರಣಗಳಲ್ಲಿ ವೈಷ್ಣವತಂತ್ರಸಾರವನ್ನನುಸರಿಸಿ ನಾಡಿಯನ್ನು ಕುರಿತು ವಿಪುಲವಾಗಿ ವಿವರಗಳಿವೆ. ಇವನ್ನು ಇಲ್ಲಿ ಅಷ್ಟಿಷ್ಟು ಸಂಗ್ರಹಿಸಿದ್ದೇನೆ. ಇವುಗಳಿಗೆ ಒಪ್ಪುವ ಪ್ರಪಂಚಸಾರವೇ ಮೊದಲಾದ ಇತರ ತಾಂತ್ರಿಕ ಗ್ರಂಥಗಳಿಂದಲೂ, ಯೋಗೋಪನಿಷತ್ತುಗಳಿಂದಲೂ ವಿವರಗಳನ್ನು ಸಂಗ್ರಹಿಸಿ ಕೊಟ್ಟಿದ್ದೇನೆ. ಈ ಭಾಗವನ್ನು ವಿಸ್ತರಿಸಿ ಬೇರೆ ಪುಸ್ತಕವೊಂದನ್ನೇ ಬರೆಯುವ ಯೋಜನೆಯಿದೆಯಾಗಿ ಇಲ್ಲಿ ಸ್ಥೂಲವಾದ ನಿರೂಪಣೆಯಷ್ಟೇ ಇದೆ.

ನಾಲ್ಕನೆಯ ಅನುಬಂಧ ತಮಿಳುನಾಡಿನಲ್ಲಿ ನಾಡವೈದ್ಯವಾದ ಸಿದ್ಧ ಪದ್ಧತಿಯನ್ನು ಕುರಿತದ್ದು. ಈ ಪದ್ಧತಿಯಲ್ಲಿ ಇಂದಿಗೂ ನಾಡೀಪರೀಕ್ಷೆಗೆ

ಹೀಗೆ ನಿಶ್ಶೇಷವಾಗಿ ವಿಚಾರಿಸದೆ ಇರೋಣದರ ದೆಶೆಯಿಂದ ಅನ್ಯಾಸಕ್ತರಾದಂಥಾ ನಮ್ಮ ಜನಗಳು ಅವರಲ್ಲಿ ಎಷ್ಟು ಪ್ರೀತಿವುಳ್ಳಂಥವರಾದಾಗ್ಯೂ ಸ್ವಶಾಸ್ತ್ರಜ್ಞಾನ ಸ್ವಲ್ಪವೂ ಇಲ್ಲದವರೆಂದು ಆ ಇಂಗ್ಲೀಷ್ ಜನಗಳಿಂದ ತಾವೇನೆ ದೂಷಿತರಾದರು. ಇನ್ನು ನಮ್ಮವರ ಮಾತು ಯಾತಕ್ಕೆ ?

ಆದ್ದರಿಂದ ನಮ್ಮವರು ಸ್ವವೈದ್ಯಶಾಸ್ತ್ರವನ್ನೂ ತದಭಿಜ್ಞರನ್ನೂ ತಮ್ಮ ಶಕ್ತಿಯಿದ್ದಷ್ಟು ಆದರಿಸಿ, ಸ್ವದೇಶ ಶಾಸ್ತ್ರಾಭಿಮಾನವಾನಿನೀಯರೆಂದು ಎಲ್ಲಾ ಜನಗಳಿಂದಲೂ ಪದೆಪದೆ ಪ್ರಶಂಸಿಸಲ್ಪಡುವುದು ಯುಕ್ತವು"

(ಹೊಸ ಪಂಡಿತ ಭೀಮರಾಯರ 'ವೈದ್ಯಸಂಗ್ರಹ', 1885)

॥ ಶ್ರೀರಸ್ತು ॥

॥ ಶ್ರೀ ಧನ್ವಂತರಯೇ ನಮಃ ॥

ನಾಡೀಜ್ಞಾನ ಪ್ರಕಾಶಿಕಾ

ಯೋ ವೈ ಯಾವದ್ವಿಕಾರಾಃ ಪ್ರಕೃತಿವಿಕೃತಯೋ ಯಾಶ್ಚ
ತೇಷಾಂ ಜನಿತ್ರೀ ।
ಯೋ ದೇವಾಶ್ಚಕ್ಷುರಾದೇರಥ ಸಕಲಮಿದಂ ಯತ್ಸಮೂಹೈ
ರ್ವಿಸೃಷ್ಟಂ ॥
ಯತ್ಸಂಕ್ಷೋಭಾತ್ತ್ರಿ ಮೂರ್ತಿಃ ಪ್ರಥಿತಮಿಹ ಯತಃ ಪಾಲನಾದಿ
ಪ್ರಸಿದ್ಧಾ ।
ಸಾ ಮೂಲಾಖ್ಯಾ ಜನೇಭ್ಯೋ ವಿತರತು ಸುಸುಖಂ ಮುಕ್ತಯೋ
ನಶ್ಚ ಭೂಯಾತ್ ॥

(ವಾಕ್ಯಂ) ಆದ್ಯಂ ತಾವನ್ನಾಡಿಕಾವಿಜ್ಞಾನಾದೇವ ವಾತಪ್ರಭೃತಿಜಾನಿ ತಾಸಾವಾಮಯಾನಾಂ ಸಾಧ್ಯಾಸಾಧ್ಯಸಭೇದಕಜ್ಞಾನಂ ಪ್ರಾಪ್ಯತೇ, ಅತ ಏವ ತನ್ನಿರೂಪ್ಯ ಇತಿ ॥

ವೈದ್ಯನು ಪ್ರಥಮತಃ ವಾತಪಿತ್ತಾದಿ ವೈಷಮ್ಯಗಳಿಂದ ಹುಟ್ಟುವ ರೋಗಗಳ ಸಾಧ್ಯಾಸಾಧ್ಯಗಳನ್ನೂ ಆಯಾ ರೋಗಭೇದಗಳನ್ನೂ ತಿಳಿದು ಕೊಳ್ಳುವದಕ್ಕೆ ನಾಡೀಜ್ಞಾನವೇ ಮೂಲಕಾರಣವಾಗಿರ್ಪುದು. ಅಂಥಾ ನಾಡೀಗತಿವಿಶೇಷಜ್ಞಾನವುಂಟಾದರೆ ರೋಗಸ್ವರೂಪವಂ ತಿಳಿದುಕೊಂಡು ತಕ್ಕ ಚಿಕಿತ್ಸೆಯಂ ಮಾಡಬಹುದು. ಆದುದರಿಂದ ಆ ನಾಡಿಗಳ ಸ್ವರೂಪವು ತಿಳಿಸಲ್ಪಡುವದು.

ನಾಡ್ಯುತ್ಪತ್ತಿ ಪ್ರಕರಣವು

ಕಂದಮಧ್ಯೆ ಸ್ಥಿತಾ ನಾಡೀ ಸುಷುಮ್ನೇತಿ ಪ್ರಕೀರ್ತಿತಾ ।
ತಿಷ್ಠಂತೇ ಪರಿತಸ್ಸರ್ವಾಶ್ಚಕ್ರೇಸ್ಮಿನ್ನಾಡಿಕಾಸ್ತತಃ ॥ ೧ ॥*

ಶರೀರದಲ್ಲಿ ಮೂಲಾಧಾರಮಧ್ಯದೊಳು ಸುಷುಮ್ನೆಯೆಂಬುದೊಂದು ನಾಡಿಯಿರ್ಪುದು. ಮತ್ತು ಮುಂದೆ ಹೇಳಲ್ಪಡುವ ಇಳಾ ಪಿಂಗಳಾ ನಾಡಿಗಳು ಈ ಸುಷುಮ್ನೆಯಂ ಸುತ್ತಿಕೊಂಡಿರುವವು.

ಸಾರ್ಧತ್ರಿಕೋಟ್ಯೋ ನಾಡ್ಯೋ ಹಿ ಸ್ಥೂಲಾಸ್ಸೂಕ್ಷ್ಮಾಶ್ಚ ದೇಹಿನಾಂ ।
ನಾಭಿಕನ್ದನಿಬದ್ಧಾಸ್ತಾಸ್ತಿರ್ಯಗೂರ್ಧ್ವಮಧಸ್ಸ್ಥಿತಾಃ ॥ ೨ ॥

ಮನುಷ್ಯರ ದೇಹದಲ್ಲಿ ಸ್ಥೂಲಸೂಕ್ಷ್ಮಗಳಾದ ಮೂರೂವರೆ ಕೋಟಿ ನಾಡಿಗಳಿವೆ.[1] ಆ ನಾಡಿಗಳು ಮೂಲಾಧಾರವನ್ನು ಆಶ್ರಯಿಸಿ ಕೆಲವು ಊರ್ಧ್ವಭಾಗದಲ್ಲಿಯೂ, ಕೆಲವು ಅಧೋಭಾಗದಲ್ಲಿಯೂ, ಮತ್ತೆ ಕೆಲವು ತಿರ್ಯಗ್ಭಾಗದಲ್ಲಿಯೂ ವ್ಯಾಪಿಸಿಕೊಂಡಿವೆ.

ತಿಸ್ರಃ ಕೋಟ್ಯೋರ್ಧಕೋಟೀ ಚ ಯಾನಿ ಲೋಮಾನಿ ಮಾನುಷೇ ।
ನಾಡೀಮುಖಾನಿ ಸರ್ವಾಣಿ ಘರ್ಮಬಿಂದೂ[2] ಕ್ಷರಂತಿ ಚ ॥ ೩ ॥

ಮತ್ತು ಊರ್ಧ್ವನಾಡಿಗಳನ್ನು ಆಶ್ರಯಿಸಿ ಮೂರೂವರೆ ಕೋಟಿ ರೋಮಗಳಿವೆ. ಆ ರೋಮಗಳೇ ನಾಡಿಗಳಿಗೆ ಮುಖಗಳೆನ್ನಲ್ಪಡುವವು. ಅದರಿಂದಲೇ ಬೆವರು ಸೋರುವದು.

---

* ಇಲ್ಲಿ ಇನ್ನೊಂದು ಶ್ಲೋಕವೂ ನಾಡೀದರ್ಪಣದಲ್ಲಿದೆ—
ನಾಭಿಮಧ್ಯೇ ಸ್ಥಿತಾ ನಾಡೀ ಗೋಪುಚ್ಛಾಕೃತಿಸರ್ವತಃ ।
ತಿಷ್ಠಂತೇ ಪರಿತಃ ಸರ್ವಾಸ್ತಾಭಿರ್ವ್ಯಾಪ್ತಮಿದಂ ವಪುಃ ॥ ೩೯ ॥
(ಹೊಕ್ಕಳ ನಡುವೆ ಇರುವ ನಾಡಿಯು ಹಸುವಿನ ಬಾಲದ ಆಕಾರದಲ್ಲಿ ಎಲ್ಲೆಡೆಗಳಲ್ಲೂ ಹರಡಿಕೊಂಡಿದೆ, ಎಂದರೆ ಹಸುವಿನ ಬಾಲವು ಹೇಗೆ ಮೇಲ್ಭಾಗದಲ್ಲಿ ದಪ್ಪನಾಗಿದ್ದು ಬರುಬರುತ್ತ ಕೆಳಗೆ ಸಣ್ಣಗಾಗುವುದೋ ಹಾಗೆ. ಈ ಶರೀರವು ಇಂಥ ನಾಡಿಗಳಿಂದೇ ವ್ಯಾಪ್ತವಾಗಿವೆ.)

1. ಎಂದರೆ 35000000
2. ಘರ್ಮಬಿಂದೂನ್ (ನಾಡೀದರ್ಪಣ)

ನಾನಾ ನಾಡೀಪ್ರಸವಗಂ ಸರ್ವಭೂತಾನ್ತರಾತ್ಮನಿ ।
ಊರ್ಧ್ವಮೂಲಮಧಶ್ಶಾಖಂ ವಾಯುಮಾರ್ಗೇಣ ಸರ್ವಗಂ ॥ ೪ ॥

ಮನುಷ್ಯರ ದೇಹದಲ್ಲಿ ಮೇಲೆ ಹೇಳಿದ ನಾಡಿಗಳಿಗಾಧಾರಭೂತವಾಗಿ ಪರಬ್ರಹ್ಮಸ್ವರೂಪವಾದ ಒಂದು ಸೂಕ್ಷ್ಮವಾಯುವುಂಟು. ಅದು ಪ್ರಾಣಾದಿ ವಾಯುಗಳ ದ್ವಾರಾ ದೇಹವೆಲ್ಲವನ್ನೂ ವ್ಯಾಪಿಸುತ್ತಿರುವದು.

ದ್ವಿಸಪ್ತತಿಸಹಸ್ರಾಣಿ ನಾಡ್ಯಸ್ಸ್ಯುರ್ವಾಯುಗೋಚರಾಃ ।
ಕರ್ಮಮಾರ್ಗೇಣ ಸುಷಿರಾ ತಿರ್ಯಂಚ ಸುಷಿರಾತ್ಮಿಕಾ ॥ ೫ ॥

ಮೇಲೆ ಹೇಳಿದ ನಾಡಿಗಳಲ್ಲಿ ಯೆಪ್ಪತ್ತೆರಡು ಸಾವಿರ ನಾಡಿಗಳು ವಾಯುಸಂಚಾರಯೋಗ್ಯಂಗಳು. ಮತ್ತು ಆ ನಾಡಿಗಳು ವಾಯುಮಾರ್ಗ ದ್ವಾರಾ ಪುನರಾವೃತ್ತಿಪ್ರಾಪಕ ಕರ್ಮರೂಪಛಿದ್ರವಿಶಿಷ್ಟಗಳಾಗಿ ತಿರ್ಯಗ್ಗತ ರಂಧ್ರ ಪ್ರಧಾನ ಭೂತಂಗಳಾಗಿರ್ಪವು.

ತರ್ಪಯಂತಿ ರಸೈರ್ದ್ದೇಹಂ ನದ್ಯಸ್ತ್ರೋಯೈರಿವಾರ್ಣವಂ ।
ದ್ವಿಸಪ್ತತಿಸಹಸ್ರಂ ತು ತಾಸಾಂ ಸ್ಥೂಲಾಃ ಪ್ರಕೀರ್ತ್ತಿತಾಃ ॥ ೬ ॥

ನದಿಗಳು ತಮ್ಮ ನೀರುಗಳಿಂದ ಕಡಲಂ ಸಮೃದ್ಧಿಗೊಳಿಸುವಂತೆ ನಾಡಿಗಳು ದೇಹಿಗಳು ತಿನ್ನುವ ಅನ್ನಪಾನಾದಿಗಳ ರಸದಿಂದ ದೇಹವನ್ನು ವೃದ್ಧಿಗೊಳಿಸುತ್ತಿವೆ. ಅಲ್ಲಿ ಸಾವಿರದಯೊಳನೂರಯೆರಡು ನಾಡಿಗಳು ಸ್ಥೂಲಗಳಾಗಿರುವವು.

ದೇಹೇ ಧಮನ್ಯೋ ಧನ್ಯಾಸ್ತಾಃ ಪಂಚೇಂದ್ರಿಯಗುಣಾವಹಾಃ ।
ನಾಭಿಕಂದಸ್ಥಿತಾಸ್ತಾಸ್ತು ನಾಭೌ ಚಕ್ರೇ ಪ್ರವೇಷ್ಟಿತಾಃ ॥ ೭ ॥

ಮೇಲೆ ಹೇಳಿದ ನಾಡಿಗಳಲ್ಲಿ ಶಬ್ದ–ಸ್ಪರ್ಶ–ರೂಪ–ರಸ–ಗಂಧಾತ್ಮಕ ಪಂಚೇಂದ್ರಿಯ ಗುಣಗ್ರಾಹಕಂಗಳಾದ ನಾಡಿಗಳೇ ಬಹಳ ಶ್ರೇಷ್ಠಗಳಾಗಿರುವವು. ಆ ಯೈದುನಾಡಿಗಳು ಮೂಲಾಧಾರವನ್ನು ಆಶ್ರಯಿಸಿ ನಾಭೀಚಕ್ರದೊಳು ಪ್ರವೇಶಿಸಿಯಿರುವವು.

ತಾಸ್ತಾಂ ಚ ಸೂಕ್ಷ್ಮಸುಷಿರಾಣಿ ಶತಾನಿ ಸಪ್ತ
ಸ್ವಚ್ಛಾನಿ ಯೈರಸಕೃದನ್ನರಸಂ ವಹದ್ಭಿಃ ।
ಆಪ್ಯಾಯತೇ ವಪುರಿದಂ ಹಿ ನೃಣಾಮಮೀಷಾ
ಮಮ್ಬುಸ್ಸ್ರವದ್ಭಿರಿವ ಸಿಂಧುಶತೈಃ ಸಮುದ್ರಂ ॥ ೮ ॥

ಮೇಲೆ ಹೇಳಲ್ಪಟ್ಟ ಸ್ಥೂಲನಾಡಿಗಳನ್ನು ಆಶ್ರಯಿಸಿ ನಿರ್ಮಲವಾದ ಯೇಳುನೂರು ಪ್ರಧಾನ ನಾಡಿಗಳು ಸೂಕ್ಷ್ಮವಾದ ಛಿದ್ರಗಳೊಂದಿಗೆ ಕೂಡಿರುವವು. ಇವು ಪ್ರತಿದಿನವೂ ಮನುಷ್ಯರು ಭುಜಿಸುವ ಅನ್ನಪಾನಾದಿಗಳ ರಸವನ್ನು ವಹಿಸುತ್ತ ನಾನಾವಿಧ ನದಿಗಳಿಂದ ಆಪ್ಯಾಯನಗೊಂಬುವ ಸಮುದ್ರದಂತೆ ಶರೀರವನ್ನು ವೃದ್ಧಿಮಾಡುತ್ತಿವೆ.

ಆಪಾದತಃ ಪ್ರಭೃತಿ ಗಾತ್ರಮಶೇಷಮಾಸಾ
ಮಾಮಸ್ತಕಾದಪಿ ಚ ನಾಭಿಪುರಸ್ಥಿತೇನ ।
ಏತನ್ಮೃದಂಗ ಇವ ಚರ್ಮಚಯೇನ ಬದ್ಧಂ
ಕಾಯಂ ನೃಣಾಮಿಹ ಸಿರಾಶತಸಪ್ತಕೇನ ॥ ೯ ॥

ಮೂಲಾಧಾರವನ್ನು ಆಶ್ರಯಿಸಿ ಪಾದಗಳು ಮೊದಲು ತಲೆ ಪರ್ಯಂತವೂ ವ್ಯಾಪಿಸಿಯಿರುವ ಯೇಳುನೂರನಾಡಿಗಳಿಂದ ಮನುಷ್ಯ ದೇಹವು ಚರ್ಮದಿಂದ ಕಟ್ಟಲ್ಪಟ್ಟ ಮದ್ದಳೆಯಂತೆ ಬಂಧಿಸಲ್ಪಟ್ಟಿದೆ.

[* ಮೇಲೆ ಹೇಳಿದ ಏಳುನೂರು ನಾಡಿಗಳಲ್ಲಿ ಇಪ್ಪತ್ತುನಾಲ್ಕು ಸ್ಫುಟವಾಗಿರುವುವೆಂದೂ, ಅವುಗಳಲ್ಲಿ ಮುಖ್ಯವಾದ ಒಂದು ಬಲಗೈ ಮತ್ತು ಕಾಲುಗಳಲ್ಲಿರುವುದೆಂದೂ ನಾಡೀದರ್ಪಣದಲ್ಲಿರುವ ಈ ಶ್ಲೋಕ ಹೇಳುತ್ತದೆ—

ಸಪ್ತಶತನಾಂ ಮಧ್ಯೇ ಚತುರಧಿಕಾ ವಿಂಶತಿಃ ಸ್ಫುಟಾಸ್ತಾಸಾಂ ।
ಏಕಾ ಪರೀಕ್ಷಣೀಯಂ ದಕ್ಷಿಣಕರಚರಣವಿನ್ಯಸ್ತಾ ॥

ಈ ಶ್ಲೋಕ ಕಣಾದಕೃತ ನಾಡೀವಿಜ್ಞಾನದಿಂದ ಎತ್ತಿಕೊಂಡದ್ದು. ಅಲ್ಲಿ ವ್ಯಾಖ್ಯಾನಕಾರನು 'ದಕ್ಷಿಣಕರಚರಣವಿನ್ಯಸ್ತಾ' ಎನ್ನುವುದಕ್ಕೆ ಬಲಗೈ

ಯಿಂದ ಮೊದಲಾಗಿ ಬಲಗಾಲವರೆಗೆ ಹರಡಿಕೊಂಡಿರುವ ನಾಡಿಯೆಂದು ಅರ್ಥ ಮಾಡಿದ್ದಾನೆ. ಇದು ಗಂಡಸರಲ್ಲಿ ನೋಡಬೇಕಾದ ನಾಡಿ ; ಇದೇ ನಾಡಿ ಹೆಂಗಸರಲ್ಲಿ ಎಡಭಾಗದಲ್ಲಿರುತ್ತದೆ. — ಸಂ.]

ಇಳಾ ಚ ಪಿಂಗಳಾ ಚೈವ ಸುಷುಮ್ನಾ ಚ ಸರಸ್ವತೀ ।
ವಾರುಣೀ ಚೈವ ಪೂಷಾ ಚ ಹಸ್ತಿಜಿಹ್ವಾ ಯಶಸ್ವಿನೀ ॥ ೧೦ ॥
ವಿಶ್ವೋದರೀ ಕುಹೂಶ್ಚೈವ ಶಂಖಿನೀ ಚ ಪಯಸ್ವಿನೀ ।
ಅಲಂಬುಸಾ ಚ ಗಾಂಧಾರೀ ಮುಖ್ಯಾಶ್ಚೈತಾಶ್ಚತುರ್ದಶ ॥ ೧೧ ॥

ಮೇಲೆ ಹೇಳಲ್ಪಟ್ಟ ನಾಡಿಗಳಲ್ಲಿ ಇಳೆ, ಪಿಂಗಳೆ, ಸುಷುಮ್ನೆ, ಸರಸ್ವತಿ, ವಾರುಣಿ, ಪೂಷಾ, ಹಸ್ತಿಜಿಹ್ವಾ, ಯಶಸ್ವಿನೀ, ವಿಶ್ವೋದರೀ, ಕುಹು, ಶಂಖಿನೀ, ಪಯಸ್ವಿನೀ, ಅಲಂಬುಸಾ, ಗಾಂಧಾರೀ, ಯೆಂಬೀ ಹದಿನಾಲ್ಕು ನಾಡಿಗಳು ಮುಖ್ಯಂಗಳು.

ಇಳಾ ಚ ಪಿಂಗಳಾ ಚೈವ ಸುಷುಮ್ನಾ ಚ ಸರಸ್ವತೀ ।
ಗಾಂಧಾರೀ ಹಸ್ತಿಜಿಹ್ವಾ ಚ ಕುಹೂಃ ಪೂಷಾ ಯಶಸ್ವಿನೀ ॥ ೧೨ ॥
ಚಾರಣಾಲಂಬುಸಾ ವಿಶ್ವಾ ಶಂಖಿನೀ ಚ ಪಯಸ್ವಿನೀ ।
ಏತಾಃ ಪ್ರಾಣವಹಾ ನಾಡ್ಯೋ ಜೀವಕೋಶೇ ಪ್ರತಿಷ್ಠಿತಾಃ ॥ ೧೩ ॥

ಇಳಾ, ಪಿಂಗಳಾ, ಸುಷುಮ್ನಾ, ಸರಸ್ವತಿ, ಗಾಂಧಾರೀ, ಹಸ್ತಿಜಿಹ್ವಾ, ಕೂಹೂ, ಪೂಷಾ, ಯಶಸ್ವಿನೀ, ಚಾರಣಾ, ಆಲಂಬುಸಾ, ವಿಶ್ವಾ, ಶಂಖಿನೀ, ಪಯಸ್ವಿನೀ ಎಂಬೀ ನಾಡಿಗಳು ಪ್ರಾಣವಾಹಿನಿಗಳಾಗಿ ಜೀವಕೋಶದಲ್ಲಿ ಪ್ರತಿಷ್ಠಿಸಲ್ಪಟ್ಟು ಇವೆ.

ತತ್ರ ಪ್ರಧಾನಾ ನಾಡ್ಯಸ್ತು ದಶವಾಯುಪ್ರವಾಹಿಕಾಃ ।

ಮೇಲೆ ಹೇಳಲ್ಪಟ್ಟ ಹದಿನಾಲ್ಕು ನಾಡಿಗಳಲ್ಲಿ ಹತ್ತು ನಾಡಿಗಳು ಪ್ರಾಣಾದಿ ವಾಯುವಾಹಿನಿಗಳಾಗಿರುವದರಿಂದ ಅವು ಬಹಳ ಮುಖ್ಯಗಳಾಗಿರುವವು.

ಇಳಾಪಿಂಗಳಯೋಶ್ಚೈವ ಸುಷುಮ್ನಾ ಚೋರ್ಧ್ವಗಾಮಿನೀ ॥ ೧೩ ॥

ಗಾಂಧಾರೀ ಹಸ್ತಿಜಿಹ್ವಾ ಚ ಪ್ರಸಾರಗಮನೇ ಸ್ಥಿತಾ ।
ಅಲಂಬುಸಾ ಯಶಸ್ವಿನ್ಯೌ ದಕ್ಷಿಣಾಂಗೇ ಸಮನ್ವಿತೇ ॥ ೧೪ ॥

ಕುಹೂಶ್ಚ ಶಂಖಿನೀ ಚೈವ ವಾಮಾಂಗೇ ಚಾವಲಂಬಿತಾ ।
ಏತಾಸು ದಶನಾಡೀಷು ನಾನಾಕಾರ್ಯಪ್ರಸೂತಿಕಾ ॥ ೧೫ ॥

ಇಳಾ, ಪಿಂಗಳಾ, ಸುಷುಮ್ನಾ ಈ ಮೂರು ನಾಡಿಗಳು ಶರೀರ ದಲ್ಲಿ ಊರ್ಧ್ವಗಾಮಿಗಳಾಗಿರುವವು. ಗಾಂಧಾರೀ, ಹಸ್ತಿಜಿಹ್ವಾ, ಎಂಬೀ ಯೆರಡು ನಾಡಿಗಳು ಕೈಗಳು ಮುಂತಾದುವುಗಳು ಮುದಿರಿಕೊಳ್ಳುವದಕ್ಕೂ ನೀಡುವದಕ್ಕೂ ಉಪಯುಕ್ತಗಳಾಗಿರುವವು. ಅಲಂಬುಸಾ, ಯಶಸ್ವಿನೀ ಎಂಬ ನಾಡಿಗಳೆರಡೂ ದಕ್ಷಿಣಾಂಗದಲ್ಲಿ ಅಂದರೆ ಬಲಪಾರ್ಶ್ವದಲ್ಲಿಯೂ; ಕುಹೂ, ಶಂಖಿನೀ ಎಂಬ ಈ ಯೆರಡು ನಾಡಿಗಳೂ ವಾಮಾಂಗದಲ್ಲಿ ಅಂದರೆ ಎಡಪಾರ್ಶ್ವದಲ್ಲಿಯೂ ವ್ಯಾಪಿಸಿಯಿರುವವು. ಆ ಹತ್ತು ನಾಡಿಗಳಲ್ಲಿ ಮಧ್ಯೆಯಿರುವ ಪೂಷಾಯೆಂಬ ಪ್ರಸೂತಿಕಾನಾಡಿಯು ಸಮಸ್ತ ಕಾರ್ಯಗಳನ್ನೂ ನಡಿಸುತ್ತಿರುವದು.

ಇಳಾ ಚ ವಾಮನಾಸಾಯಾಂ ದಕ್ಷಿಣೇ ಪಿಂಗಳಾ ಮತಾ ।
ಸುಷುಮ್ನಾ ಬ್ರಹ್ಮರಂಧ್ರೇ ಚ ಗಾನ್ಧಾರೀ ವಾಮಚಕ್ಷುಷಿ ॥ ೧೬ ॥

ದಕ್ಷಿಣೆ ಹಸ್ತಿಜಿಹ್ವಾ ಚ ಪೂಷಾ ಕರ್ಣೇಽಥ ದಕ್ಷಿಣೇ ।
ವಾಮೇ ಯಶಸ್ವಿನೀ ಜ್ಞೇಯಾ ಮುಖೇ ಚಾಲಂಬುಸಾ ಮತಾ ॥ ೧೭ ॥

ಕುಹೂಶ್ಚ ಲಿಂಗಮೂಲೇ ಸ್ಯಾಚ್ಛಂಖಿನೀ ಶಿರಸೋಪರಿ ।
ಏವಂ ದ್ವಾರಂ ಸಮಾಶ್ರಿತ್ಯ ತಿಷ್ಠಂತಿ ದಶನಾಡಿಕಾಃ ॥ ೧೮ ॥

ಎಡಮೂಗಿನಲ್ಲಿ ಇಳೆಯೂ, ಬಲಮೂಗಿನಲ್ಲಿ ಪಿಂಗಳೆಯೂ, ಬ್ರಹ್ಮ ರಂಧ್ರದಲ್ಲಿ ಸುಷುಮ್ನೆಯೂ, ಎಡಗಂಣಿನಲ್ಲಿ ಗಾಂಧಾರಿಯೂ ಬಲಗಂಣಿನಲ್ಲಿ ಹಸ್ತಿಜಿಹ್ವೆಯೂ, ಬಲಗಿವಿಯಲ್ಲಿ ಪೂಷೆಯೂ, ಎಡಗಿವಿಯಲ್ಲಿ ಯಶಸ್ವಿನಿಯೂ, ನಾಲಿಗೆಯಲ್ಲಿ ಅಲಂಬುಸೆಯೂ, ಶಿಶ್ನಮೂಲದಲ್ಲಿ ಕುಹೂ ಎಂಬ ನಾಡಿಯೂ, ತಲೆಯಮೇಲೆ ಶಂಖಿನಿಯೂ, ಈ ಪ್ರಕಾರ ಹತ್ತು ನಾಡಿಗಳೂ ದ್ವಾರವನ್ನಾಶ್ರಯಿಸಿಕೊಂಡು ಇರುವವು.

ಹತ್ತುನಾಡಿಗಳನ್ನಾಶ್ರಯಿಸಿರುವ ಹತ್ತುವಾಯುಗಳು

ಪ್ರಾಣೋಽಪಾನಸ್ಸಮಾನಶ್ಚ ಉದಾನೋ ವ್ಯಾನ ಏವ ಚ ।
ನಾಗಃ ಕೂರ್ಮೋಽಥ ಕೃಕರೋ ದೇವದತ್ತೋ ಧನಂಜಯಃ ॥ ೧೯ ॥

ಏತೇ ನಾಡೀಷು ಸರ್ವಾಸು ಚರಂತಿ ದಶ ವಾಯವಃ ।
ಏತೇಷು ವಾಯುವಃ ಪಂಚ ಮುಖ್ಯಾ ಪ್ರಾಣಾದಯಃ ಸ್ಮೃತಾಃ ॥ ೨೦ ॥

ತೇಷು ಮುಖ್ಯತಮಾವೇತೌ ಪ್ರಾಣಾಪಾನೌ ನರೋತ್ತಮೇ ।
ಪ್ರಾಣ ಏವೈತಯೋರ್ಮುಖ್ಯಸ್ಸರ್ವಪ್ರಾಣಭೃತಾಂ ಸದಾ ॥ ೨೧ ॥

ಪ್ರಾಣವು, ಅಪಾನವು, ಸಮಾನವು, ಉದಾನವು, ವ್ಯಾನವು, ನಾಗವು, ಕೂರ್ಮವು, ಕೃಕರವು, ದೇವದತ್ತವು, ಧನಂಜಯುವು, ಎಂಬೀ ಹತ್ತುವಾಯುಗಳು ಸರ್ವನಾಡಿಗಳಲ್ಲಿಯೂ ಸಂಚರಿಸುತ್ತಿರುವವು. ಆದರೆ ಈ ಹತ್ತು ವಾಯುಗಳಲ್ಲಿ ಪ್ರಾಣಾದಿ ಪಂಚವಾಯುಗಳು ಮುಖ್ಯಂಗಳು. ಅವುಗಳಲ್ಲಿ ಪ್ರಾಣಾಪಾನಂಗಳು ಬಹಳ ಮುಖ್ಯಗಳಾಗಿಯೂ, ಅವುಗಳಲ್ಲಿ ಪ್ರಾಣ ವಾಯುವು ಅತ್ಯಂತಮುಖ್ಯವಾಗಿಯೂ ಯಿರುವದು.

ಶಬ್ದಗ್ರಹಾ ಶ್ರುತೌ ನಾಡೀ ರೂಪಂ ಗೃಹ್ಣಾತಿ ಲೋಚನೇ ।
ಗಂಧಗ್ರಹಾ ನಾಸಿಕಾಯಾಂ ರಸನಾಯಾಂ ರಸಾವಹಾ ॥ ೨೨ ॥

ಏವಂ ತ್ವಕ್ಷು ಸ್ಪರ್ಶವಹಾ ಶಬ್ದಕೃದ್ಧೃದಯಾಸ್ಯ ಖೇ ।
ಮನೋಬುಧ್ಯಾದಿಕಂ ಸರ್ವಂ ಹೃದಯೇಷು ಪ್ರತಿಷ್ಠಿತಂ ॥ ೨೩ ॥

ಪುರೀತತ್ಯಾಂ ಮನಃಸ್ಥಿತ್ಯಾ ನಿದ್ರಾ ಸಮುಭಿಜಾಯತೇ ।

ಕಿವಿಗಳಲ್ಲಿ ವ್ಯಾಪಿಸಿಕೊಂಡು ಯಿರುವ ನಾಡಿಗಳು ಶಬ್ದಗ್ರಾಹಕಂಗಳು; ನೇತ್ರಗಳಲ್ಲಿ ವ್ಯಾಪಿಸಿಕೊಂಡಿರುವ ನಾಡಿಗಳು ರೂಪಗ್ರಾಹಕಂಗಳು ; ಮೂಗಿನಲ್ಲಿ ವ್ಯಾಪಿಸಿಕೊಂಡಿರುವ ನಾಡಿಗಳು ಗಂಧಗ್ರಾಹಕಂಗಳು ; ಜಿಹ್ವೆಯಲ್ಲಿ ವ್ಯಾಪಿಸಿಕೊಂಡಿರುವ ನಾಡಿಯು ರಸಗ್ರಾಹಕವು; ಚರ್ಮದಲ್ಲಿ ವ್ಯಾಪಿಸಿಕೊಂಡಿರುವ ನಾಡಿಗಳು ಸ್ಪರ್ಶಗ್ರಾಹಕಂಗಳು ; ಹೃದಯ, ಮುಖ ಇವುಗಳಲ್ಲಿರುವ ನಾಡಿಗಳು ಶಬ್ದೋಚ್ಚಾರಣಂಗಳಿಗು ಪ್ರಯುಕ್ತಂಗಳು ; ಮನಸ್ಸು, ಬುದ್ಧಿ ಇವು ಹೃದಯದೊಳು ಪ್ರತಿಷ್ಠಿಸಲ್ಪಟ್ಟಿವೆ ; ಪುರೀತತಿ ಯೆಂಬ ನಾಡಿಯಲ್ಲಿ ಮನಸ್ಸು ಲೀನವಾದರೆ ನಿದ್ರೆಯುಂಟಾಗುವದು.

(ವಾಕ್ಯಂ ॥) ಅನ್ಯಾಸಾಂ ನಾಮಾನ್ಯಪಿ ಶಾರದಾಯಾಂ ॥

ಮೇಲೆ ಹೇಳಿದ ಹದಿನಾಲ್ಕು ನಾಡಿಗಳ ಹೆಸರುಗಳಲ್ಲದೆ ಇತರ ನಾಡಿಗಳ ಹೆಸರುಗಳು ಶಾರದೆಯೆಂಬ ಗ್ರಂಥದಲ್ಲಿ ಹೇಳಲ್ಪಟ್ಟಿವೆ.

ಗಾಂಧಾರೀ ಹಸ್ತಿಜಿಹ್ವಾಖ್ಯಾ ಸಪೂಷಾಲಂಬುಸಾ ಮತಾ ।
ಯಶಸ್ವಿನೀ ಶಂಖಿನೀ ಚ ಕುಹೂ ಸ್ಯುಸ್ಸಪ್ತನಾಡಿಕಾಃ ॥ ೨೪ ॥
(ವಾಕ್ಯಂ ॥) ತಾಸಾಂ ಸ್ಥಿತಿಸ್ಸ್ವರೂಪಂ ಯೋಗಾರ್ಣವೇ ॥

ಗಾಂಧಾರೀ, ಹಸ್ತಿಜಿಹ್ವಾ, ಪೂಷಾ, ಅಲಂಬುಸಾ, ಯಶಸ್ವಿನೀ, ಶಂಖಿನೀ, ಕುಹೂ ಎಂಬ ಹೆಸರುಗಳುಳ್ಳ ಏಳು ನಾಡಿಗಳ ಸ್ವರೂಪಂಗಳೂ ಸ್ಥಿತಿಯೂ ಯೋಗಾರ್ಣವವೆಂಬ ಗ್ರಂಥದಲ್ಲಿ ಹೇಳಲ್ಪಟ್ಟಿದೆ.

ಇಳಾ ಪೃಷ್ಠೇ ತು ಗಾಂಧಾರೀ ಮಯೂರಗಳಸನ್ನಿಭಾ ।
ಸವ್ಯಪಾದಾದಿ ನೇತ್ರಾಂತಾ ಗಾಂಧಾರೀ ಪರಿಕೀರ್ತಿತಾ ॥ ೨೫ ॥

ಗಾಂಧಾರಿಯೆಂಬ ನಾಡಿಯು ಮಯೂರಕಂಠದ ಬಂಣವುಳ್ಳದ್ದಾಗಿ ಇಳೆಯೆಂಬ ನಾಡಿಗೆ ಪೃಷ್ಠವನ್ನಾಶ್ರಯಿಸಿ ಸವ್ಯಪಾದ ಮೊದಲು ನೇತ್ರಾಂತದವರಿಗೂ ವ್ಯಾಪಿಸಿರುವದು.

ಹಸ್ತಿಜಿಹ್ವೋತ್ಪಲ ಪ್ರೇಕ್ಷಾ ನಾಡೀ ತಸ್ಯಾಃ ಪುರಃಸ್ಥಿತಾ ।
ಸವ್ಯಭಾಗಸ್ಯ ಮೂರ್ಧಾದಿ ಪಾದಾಂಗುಷ್ಠಾಂತಮಾಶ್ರಿತಾ ॥ ೨೬ ॥

ಹಸ್ತಿಜಿಹ್ವೆಯೆಂಬ ನಾಡಿಯು ಕನ್ನೈದಿಲೇ ಹುವ್ವಿನ ಬಂಣವುಳ್ಳದ್ದಾಗಿಯೂ ಇಳೆಯೆಂಬ ನಾಡಿಗೆ ಮುಂಭಾಗವನ್ನು ಆಶ್ರಯಿಸಿಕೊಂಡು ಸವ್ಯಭಾಗದಲ್ಲಿ ಶಿರಸ್ಸು ಮೊದಲು ಪಾದಾಂಗುಷ್ಠದವರಿವಿಗೂ ವ್ಯಾಪಿಸಿಯಿರುವದು.

ಪೂಷಾ ತು ಪಿಂಗಳಾ ಪೃಷ್ಠೇ ನೀಲಜೀಮೂತಸನ್ನಿಭಾ ।
ಯಾಮ್ಯಭಾಗಸ್ಯ ನೇತ್ರಾಂತಾ ಯಾವತ್ಪಾದತಲಂಗತಾ ॥ ೨೭ ॥

ಪೂಷೆಯೆಂಬ ನಾಡಿಯು ಕಾರ್ಮುಗಿಲ ಕಾಂತಿಯುಳ್ಳದ್ದಾಗಿ ಪಿಂಗಳೆಯೆಂಬ ನಾಡಿಗೂ ಪೃಷ್ಠಭಾಗದಿಂದ ದಕ್ಷಿಣಭಾಗದಲ್ಲಿ ಪಾದಾಂಗುಷ್ಠ ಮೊದಲು ಕಡೆಗಂಣವರಿಗೆ ವ್ಯಾಪಿಸಿರುವದು.

ಅಲಂಬುಸಾ ರಕ್ತವರ್ಣಾ ನಾಡೀ ತಸ್ಯಾಃ ಪುರಃಸ್ಥಿತಾ ।
ಪಾದಾಂಗುಷ್ಠಾಂತಮಾರಭ್ಯ ನೇತ್ರಾಂತಂ ದಕ್ಷಿಣೇ ಶ್ರಿತಾ ॥ ೨೮ ॥

ಅಲಂಬುಸೆಯೆಂಬ ನಾಡಿಯು ರಕ್ತವರ್ಣವುಳ್ಳದ್ದಾಗಿ ಪಿಂಗಳೆಯೆಂಬ ನಾಡಿಗೆ ಮುಂಭಾಗವನ್ನಾಶ್ರಯಿಸಿಕ್ಕೊಂಡು ಬಲಪಾದಾಂಗುಷ್ಠವು ಮೊದಲು ನೇತ್ರಾಂತದವರಿಗೂ ವ್ಯಾಪಿಸಿಯಿರುವದು.

ಯಶಸ್ವಿನೀ ಶಂಖವರ್ಣಾ ಪಿಂಗಳಾ ಪೂರ್ವದೇಶಗಾ ।
ಪಾದಾಂಗುಷ್ಠಾಂತಮಾರಭ್ಯ ದಕ್ಷಮೂರ್ಧಾಂತಮಾಶ್ರಿತಾ ॥ ೨೯ ॥

ಯಶಸ್ವಿನಿಯೆಂಬ ನಾಡಿಯು ಶಂಖವರ್ಣವುಳ್ಳದ್ದಾಗಿ ಪಿಂಗಳೆಯೆಂಬ ನಾಡಿಗೆ ಪೂರ್ವಭಾಗವನ್ನಾಶ್ರಯಿಸಿಕೊಂಡು ದಕ್ಷಿಣಭಾಗದಲ್ಲಿ ಪಾದಾಂಗುಷ್ಠಾಂತ ಮೊದಲು ಶಿರಸ್ಸುವರಿಗೂ ವ್ಯಾಪಿಸಿಯಿರುವದು.

ಗಾಂಧಾರ್ಯಾಶ್ಚ ಸರಸ್ವತ್ಯಾ ಮಧ್ಯಸ್ಥಾ ಶಂಖಿನೀ ಮತಾ ।
ಸುವರ್ಣವರ್ಣಾ ಪಾದಾದಿ ಕರ್ಣಾಂತಾ ಸವ್ಯಭಾಗಕೇ ॥ ೩೦ ॥

ಶಂಖಿನಿಯೆಂಬ ನಾಡಿಯು ಮಿಸುನಿಯ ಬಂಣವುಳ್ಳದ್ದಾಗಿ ಗಾಂಧಾರೀ, ಸರಸ್ವತೀ, ನಾಡಿಗಳ ಮಧ್ಯವನ್ನಾಶ್ರಯಿಸಿ ಸವ್ಯಪಾದ ಮೊದಲು ಕರ್ಣಾಂತದವರಿಗೂ ವ್ಯಾಪಿಸಿರುವದು.

ಕುಹೂಃ ಪ್ರೋಕ್ತಾ ಶ್ವೇತವರ್ಣಾ ವಾರುಣೀ ಪೂಷ ಮಧ್ಯಗಾ ।
ಪಾದಾಂಗುಷ್ಠಾದಿ ಮೂರ್ಧಾಂತಾ ಯಾಮ್ಯ ಭಾಗೇ
ಕುಹೂರ್ಮತಾ ॥ ೩೧ ॥

ಕುಹೂಯೆಂಬ ನಾಡಿಯು ಶ್ವೇತವರ್ಣವುಳ್ಳದ್ದಾಗಿ ವಾರುಣೀ ಪೂಷೆಗಳೆಂಬ ನಾಡಿಗಳನ್ನಾಶ್ರಯಿಸಿಕೊಂಡು ಯಾಮ್ಯ ಪಾದಾಂಗುಷ್ಠಮೊದಲು ಶಿರಸ್ಸುವರೆಗೆ ವ್ಯಾಪಿಸಿಯಿರುವದು.

ವಿಶ್ವೋದರೀ ಶಂಖಿನೀ ಚ ರಾವನಾ ಚ ಸರಸ್ವತೀ ।
ಏತಾಶ್ಚತುರ್ನಾಡ್ಯ ಉಕ್ತಾಃ ಪ್ರಧಾನತ್ವೇನ ಪಂಡಿತೈಃ ॥ ೩೨ ॥

ವಿಶ್ವೋದರೀ, ಶಂಖಿನೀ, ರಾವನಾ, ಸರಸ್ವತೀ, ಎಂಬ ಈ ನಾಲ್ಕು ನಾಡಿಗಳೂ ಪಂಡಿತರಿಂದ ಮುಖ್ಯವಾಗಿ ಹೇಳಲ್ಪಟ್ಟಿವೆ.

ಮುಕ್ತಿಮಾರ್ಗೇ ಸುಷುಮ್ನಾ ಸಾ ಬ್ರಹ್ಮರಂಧ್ರೇತಿ ಕೀರ್ತಿತಾ ।
ಅವ್ಯಕ್ತಾ ಸಾ ಚ ವಿಜ್ಞೇಯಾ ಸುಷುಮ್ನಾ ವೈಷ್ಣವೀ ಸ್ಥಿತಾ ॥ ೩೩ ॥

ಸುಷುಮ್ನೆಯೆಂಬ ನಾಡಿಯು ಮುಕ್ತಿಮಾರ್ಗದಲ್ಲಿರುವದರಿಂದ ಬ್ರಹ್ಮರಂಧ್ರವೆಂದು ಹೇಳಲ್ಪಡುವದು. ಆ ನಾಡಿಯು ವಿಷ್ಣುದೇವತಾಕ ವಾಗಿ ವ್ಯಕ್ತವಾಗಿರುವದು.

ತಾಸಾಂ ತಿಸ್ರಃ ಪ್ರಧಾನಾಸ್ತು ತಿಸೃಷ್ವೇಕೋತ್ತಮಾ ಮತಾ ।
ಇಳಾ ಚ ಪಿಂಗಳಾ ಚೈವ ಸುಷುಮ್ನಾ ಚ ತೃತೀಯಕಾ ॥ ೩೪ ॥

ಮೇಲೆ ಹೇಳಲ್ಪಟ್ಟ ಹತ್ತು ನಾಡಿಗಳಲ್ಲಿ ಇಳೆ, ಪಿಂಗಳೆ, ಸುಷುಮ್ನೆ ಯೆಂಬ ಮೂರು ನಾಡಿಗಳೇ ಮುಖ್ಯಂಗಳಾದವುಗಳು. ಅವುಗಳೊಳು ಸುಷುಮ್ನೆಯೆಂಬ ನಾಡಿಯು ಸರ್ವೋತ್ತಮವಾಗಿರ್ಪುದು.

ತತ್ರೈಕಾ ವಾಮತೋ ಯಾತಿ ದ್ವಿತೀಯಾ ದಕ್ಷಿಣೇ ತಥಾ ।
ಮಧ್ಯೇ ವಾಯುಪಥಂ ವಿದ್ಯಾತ್ತ್ರಿಭಿಸ್ತುಲ್ಯಂ ಗತಾಗತಂ ॥ ೩೫ ॥

ಇಳೆಯೆಂಬ ನಾಡಿಯು ಎಡಗಡೆಯಲ್ಲಿಯೂ ಪಿಂಗಳೆಯೆಂಬ ನಾಡಿಯು ಬಲಗಡೆಯಲ್ಲಿಯೂ ಸುಷುಮ್ನೆಯೆಂಬ ನಾಡಿಯು ಅವೆರಡರ ಮಧ್ಯ ದಲ್ಲಿಯೂ ಇರುವದೇ ಅಲ್ಲದೆ ಈ ಮೂರು ನಾಡಿಗಳಲ್ಲಿಯೂ ಸಮಾನವಾಗಿ ಸಂಚರಿಸುವ ವಾಯುಮಾರ್ಗಗಳೂ ವುಂಟು.

ಇಳಾಪಿಂಗಳಾನಾಡೀಸ್ವರೂಪವು

ಇಳಾ ಚ ಶಂಖಚಂದ್ರಾಭಾ ತಸ್ಯಾ ವಾಮೇವಸ್ಥಿತಿಃ ।
ಪಿಂಗಳಾ ಸಿತರಕ್ತಾಭಾ ದಕ್ಷಿಣಂ ಪಾರ್ಶ್ವಮಾಶ್ರಿತಾ ॥ ೩೬ ॥

ಪಿಂಗಳೆಯೆಂಬ ನಾಡಿಯು ಶಂಖದಂತೆಯೂ ಚಂದ್ರನಂತೆಯೂ ಪ್ರಕಾಶಿಸುತ್ತ ಸುಷುಮ್ನೆಯೆಂಬ ನಾಡಿಗೆ ವಾಮಭಾಗದಲ್ಲಿರುವದು.

ಪಿಂಗಳೆಯೆಂಬ ನಾಡಿಯು ಕಪ್ಪು ಕೆಂಪು ಬೆರೆತ ಮಿಶ್ರವರ್ಣವುಳ್ಳದ್ದಾಗಿ ಪ್ರಕಾಶಿಸುತ್ತಾ ಸುಷುಮ್ನಾನಾಡಿಗೆ ದಕ್ಷಿಣಭಾಗವನ್ನಾಶ್ರಯಿಸಿರುವದು.

ಚಂದ್ರಃ ಸೂರ್ಯೋ ಮರುಚ್ಚೈವ ತ್ರಯಂ ತಿಸೃಷ್ವವಸ್ಥಿತಾ ।
ತಥಾ ರಜಸ್ತಮಸ್ಸತ್ತ್ವಂ ರಾತ್ರ್ಯಹಃಕಾಲ ಏವ ಚ ॥ ೩೭ ॥

ಇಳೆಯೆಂಬ ನಾಡಿಯು ಚಂದ್ರದೇವತಾಕವಾಗಿ ರಜೋಗುಣ ಪ್ರಧಾನ ವಾಗಿರುವದೇ ಅಲ್ಲದೆ, ರಾತ್ರಿರೂಪ ಖಂಡಕಾಲಯುಕ್ತವಾಗಿರುವದು. ಪಿಂಗಳೆಯೆಂಬ ನಾಡಿಯು ಸೂರ್ಯದೇವತಾಕವಾಗಿ ತಮೋಗುಣ ಪ್ರಧಾನ ವಾಗಿರುವದೇ ಅಲ್ಲದೆ, ಅಹಃಕಾಲರೂಪಖಂಡಯುಕ್ತವಾಗಿರುವದು. ಸುಷುಮ್ನೆಯೆಂಬ ನಾಡಿಯು ವಾಯುದೇವತಾಕವಾಗಿ ಸತ್ವಗುಣಪ್ರಧಾನ ವಾಗಿರುವದೇ ಅಲ್ಲದೆ, ಅಖಂಡಕಾಲಸಂಯುಕ್ತವಾಗಿರುವದು.

ಇಳಾ ದೋಷಮಯೀ ಪ್ರೋಕ್ತಾ ಪಿಂಗಳಾ ವಹ್ನಿರೂಪಿಣೀ ।
ವಾಯ್ವಾಗ್ನೇಯೀ ಸುಷುಮ್ನಾ ಚ ಬ್ರಹ್ಮದ್ವಾರಪಥಾನುಗಾ ॥ ೩೮ ॥

ದೋಷರೂಪವಾದ ಇಳೆಯೆಂಬ ನಾಡಿಯೂ, ತೇಜೋರೂಪವಾದ ಪಿಂಗಳೆಯೆಂಬ ನಾಡಿಯೂ, ವಾಯ್ವಗ್ನಿರೂಪವಾದ ಸುಷುಮ್ನೆಯೆಂಬ ನಾಡಿಯೂ ಬ್ರಹ್ಮದ್ವಾರವನ್ನಾಶ್ರಯಿಸಿಕೊಂಡಿರುವದು.

ಪದ್ಮಕೋಶಪ್ರತೀಕಾಶಂ ಸುಷಿರೈಶ್ಚ ವಿಭೂಷಿತಂ ।
ಹೃದಯಂ ತದ್ವಿಜಾನೀಯಾದ್ವಿಶ್ವಸ್ಯಾಯತನಂ ಹಿ ತತ್ ॥ ೩೯ ॥

ತಾವರೆಮೊಗ್ಗಿನಂತೆ ಅಗ್ರದಲ್ಲಿ ರಂಧ್ರವುಂಟಾಗಿ ಅಧೋಮುಖವಾಗಿ ನಾಭೇರೂರ್ಧ್ವಭಾಗದಲ್ಲಿರುವ ಹೃತ್ಪುಂಡರೀಕವು ಬ್ರಹ್ಮನಿಗೆ ನಿವಾಸಸ್ಥಾನ ವಾಗಿ ಇರುವದು.

ದಕ್ಷಿಣಾ ಪಿಂಗಳಾ ನಾಡೀ ವಹ್ನಿಮಂಡಲಗೋಚರಾ ।
ದೇವಯಾನಮಿತಿ ಜ್ಞೇಯಾ ಪುಣ್ಯಕರ್ಮಾನುಸಾರಿಣೀ ॥ ೪೦ ॥

ಪಿಂಗಳೆಯೆಂಬ ನಾಡಿಯು ಮೂಲಾಧಾರದಿಂದ ಹೊರಟು ಹೃತ್ಪುಂಡ ರೀಕ ದಕ್ಷಿಣಭಾಗವಾಗಿ, ಶಿರಸ್ಸಿನಲ್ಲಿರುವ ಸಹಸ್ರಾರವೆಂಬ ಚಕ್ರವನ್ನು ಆಧಾರ

ಪಡಿಸಿಕೊಂಡು ವಹ್ನಿಮಂಡಲದ ಪರ್ಯಂತ ವ್ಯಾಪಿಸಿ ಯಜ್ಞಾದಿಪುಣ್ಯಕರ್ಮಗಳಂ ಮಾಡಿದವರನ್ನು ಅರ್ಚಿರಾದಿ ಮಾರ್ಗವಾಗಿ ದೇವಲೋಕವನ್ನು ಹೊಂದುವಂತೆ ಮಾಡುವದು.

ಇಳಾ ಚ ವಾಮನಿಶ್ವಾಸಾ ಸೋಮಮಂಡಲಗೋಚರಾ ।
ಪಿತೃಯಾನಮಿತಿ ಜ್ಞೇಯಾ ವಾಮಮಾಶ್ರಿತ್ಯ ತಿಷ್ಠತಿ ॥ ೪೧ ॥

ಇಳೆಯೆಂಬ ನಾಡಿಯು ಮೂಲಾಧಾರದಿಂದ ಹೊರಟು ಹೃತ್ಪುಂಡರೀಕ ವಾಮಭಾಗವಾಗಿ ಶಿರಸ್ಸಿನಲ್ಲಿರುವ ಸಹಸ್ರಾರಚಕ್ರವನ್ನು ಆಧಾರಮಾಡಿಕೊಂಡು ಚಂದ್ರಮಂಡಲದವರೆಗೆ ವ್ಯಾಪಿಸಿ ಪಿತೃಲೋಕಪ್ರಾಪ್ತಿ ಹೇತುಭೂತವಾದ ಸತ್ಕರ್ಮಂಗಳು ಮಾಡಿದವರನ್ನು ಧೂಮಾದಿ ಮಾರ್ಗವಾಗಿ ಪಿತೃಲೋಕವನ್ನು ಹೊಂದುವಂತೆ ಮಾಡುವದು. ಈ ಯಿಳೆ-ಪಿಂಗಳೆಯೆಂಬ ನಾಡಿಗಳೇ ಉಚ್ಛ್ವಾಸ ನಿಶ್ವಾಸಗಳಿಂಗಾಧಾರಭೂತಂಗಳಾಗಿರುವವು.

ಗುದಸ್ಯ ಪೃಷ್ಟಭಾಗೇಸ್ಮಿನ್ ವೀಣಾದಂಡಸ್ಯ ದೇಹಭೃತ್ ।
ದೀರ್ಘಾಸ್ಥಿಮೂರ್ಧಪರ್ಯಂತಂ ಬ್ರಹ್ಮದಂಡೇತಿ ಕಥ್ಯತೇ ॥ ೪೨ ॥

ಗುದಸ್ಥಾನ ಮೊದಲು ಶಿರಸ್ಸುವರಿಗೆ ವ್ಯಾಪಿಸಿ ವೀಣಾದಂಡಾಕಾರವಾಗಿರುವ ಅಸ್ಥಿಯು ಬ್ರಹ್ಮಲೋಕಪ್ರಾಪ್ತಿಗೆ ಹೇತುಭೂತವಾದ ಸುಷುಮ್ನಾನಾಡಿಗಾಧಾರವಾದುದರಿಂದ ಬ್ರಹ್ಮದಂಡವೆನ್ನಲ್ಪಡುವದು.

ತಸ್ಯಾಂತೇ ಸುಷಿರಂ ಸೂಕ್ಷ್ಮಂ ಬ್ರಹ್ಮನಾಡೀತಿ ಸೂರಿಭಿಃ ।
ಇಳಾಪಿಂಗಳಯೋರ್ಮಧ್ಯೆ ಸುಷುಮ್ನಾ ಸೂಕ್ಷ್ಮರೂಪಿಣೀ ॥ ೪೩ ॥

ಸೂಕ್ಷ್ಮರೂಪಿಯಾದ ಸುಷುಮ್ನಾನಾಡಿಯು ಮೂಲಾಧಾರದಿಂದ ಇಳೆಪಿಂಗಳೆ ಯೆಂಬ ನಾಡಿಗಳ ಮಧ್ಯದಲ್ಲಿ ಹೊರಟು ಸೂಕ್ಷ್ಮರೂಪವಾಗಿ ವೀಣಾದಂಡಾಕಾರವಾಗಿರುವ ಬೆನ್ನಮೂಳೆಯ ದ್ವಾರದಲ್ಲಿ ಹೊಕ್ಕು, ಸಹಸ್ರಾರಚಕ್ರವನ್ನು ಬ್ರಹ್ಮರಂಧ್ರಮೂಲವಾಗಿ ಸೂರ್ಯಮಂಡಲದವರಿಗೆ ವ್ಯಾಪಿಸಿ ಬ್ರಹ್ಮಲೋಕಪ್ರಾಪ್ತಿಹೇತುಭೂತವಾದ ದಹರಾದ್ಯುಪಾಸನೆಯಂ ಮಾಡಿದವರಿಗೆ ಬ್ರಹ್ಮಲೋಕವನ್ನುಂಟುಮಾಡುವದು.

ಸರ್ವಂ ಪ್ರತಿಷ್ಠಿತಂ ಯಸ್ಮಿನ್ ಸರ್ವಗಂ ಸರ್ವತೋಮುಖಂ ।
ತಸ್ಯಾಮಧ್ಯಗತಾಸ್ಸೂರ್ಯಸೋಮಾಗ್ನಿಪರಮೇಶ್ವರಾಃ ॥ ೪೪ ॥

ಭೂತಾ ಲೋಕಾ ದಿಶಃ ಕ್ಷೇತ್ರಂ ಸಮುದ್ರಾಃಪರ್ವತಾಶ್ಶಿಲಾಃ ।
ದ್ವೀಪಾಶ್ಚ ನಿಮ್ನಗಾ ವೇದಶ್ಶಾಸ್ತ್ರವಿದ್ಯಾ ಕುಲಾಕ್ಷರಾಃ ॥ ೪೫ ॥

ಸರ್ವಮಂತ್ರಪುರಾಣಾನಿ ಗುಣಾಶ್ಚೈತಾನಿ ಸರ್ವಗಃ ।
ಬೀಜಜೀವಾತ್ಮಕಸ್ತೇಷಾಂ ಕ್ಷೇತ್ರಜಾಃ ಪ್ರಾಣವಾಯವಃ ॥ ೪೬ ॥

ಸುಷುಮ್ನಾಂತರ್ಗತಂ ವಿಶ್ವಂ ತಸ್ಮಿಂತ್ಸರ್ವಂ ಪ್ರತಿಷ್ಠಿತಂ ।
ನಾಡ್ಯುತ್ಪತ್ತಿಪ್ರಕರಣಂ ಜ್ಞೇಯಂ ಸರ್ವತ್ರ ಸಾದರಂ ॥ ೪೭ ॥

ಸರ್ವಲೋಕಾತ್ಮಕ ಪರಂಜ್ಯೋತಿಸ್ಸ್ವರೂಪಿಯಾದ ಬ್ರಹ್ಮವು ಈ ಸುಷುಮ್ನಾ ನಾಡಿಯಲ್ಲಿಯೇ ವಾಸವಾಗಿರುವದು. ಮತ್ತು ಯಿ ನಾಡಿಯು ನಾನಾಮಾರ್ಗಗಳುಂಟಾಗಿ ಬಹುಮುಖದಿಂದ ವ್ಯಾಪಿಸುವದು. ಈ ನಾಡಿಯೇ ಶುದ್ಧಬ್ರಹ್ಮಕ್ಕೆ ರೂಪಾಂತರಗಳಾಗಿರುವ ಸೂರ್ಯಚಂದ್ರಾಗ್ನಿ ಪರಮೇಶ್ವರರಿಗೂ ಪೃಥಿವ್ಯಾದಿಪಂಚಭೂತಗಳಿಗೂ ಚತುರ್ದಶಭುವನಗಳಿಗೂ ಪ್ರಾಗಾದಿ ಹತ್ತುದಿಕ್ಕುಗಳಿಗೂ ಕಾಶ್ಯಾದಿಪುಣ್ಯಕ್ಷೇತ್ರಗಳಿಗೂ ಲವಣಾದಿಸಪ್ತಸಮುದ್ರಗಳಿಗೂ ಮೇರ್ವಾದಿ ಪರ್ವತಗಳಿಗೂ ರತ್ನಾದಿ ಶಿಲೆಗಳಿಗೂ ಸಪ್ತದ್ವೀಪಗಳಿಗೂ ಗಂಗಾದಿ ನದಿಗಳಿಗೂ ವೇದಗಳಿಗೂ ಮೀಮಾಂಸಾದಿ ಸಕಲಶಾಸ್ತ್ರಗಳಿಗೂ ಚತುಷ್ಷಷ್ಟಿವಿದ್ಯೆಗಳಿಗೂ ಬ್ರಾಹ್ಮಣಾದಿಜಾತಿಗಳಿಗೂ ಅಕಾರಾದಿವರ್ಣಗಳಿಗೂ ಉದಾತ್ತಾದಿ ಸ್ವರಗಳಿಗೂ ಸಪ್ತಕೋಟಿಮಹಾಮಂತ್ರಗಳಿಗೂ ಬ್ರಾಹ್ಮಾದಿ ಪುರಾಣಗಳಿಗೂ ಸತ್ವರಜಸ್ತಮೋಗುಣಗಳಿಗೂ ಮಹದಾದಿಚತುರ್ವಿಂಶತಿ ತತ್ತ್ವಗಳಿಗೂ ಜೀವನಿಗೂ ಕ್ಷೇತ್ರಜ್ಞನಿಗೂ ಪ್ರಾಣಾದಿಪಂಚವಾಯುಗಳಿಗೂ ನಾಗಾದ್ಯುಪವಾಯುಗಳಿಗೂ ಸಮಸ್ತ ಪ್ರಪಂಚಕ್ಕೂ ಆಧಾರವಾಗಿರುವದು. ಆದುದರಿಂದೀ ನಾಡ್ಯುತ್ಪತ್ತಿಪ್ರಕರಣವನ್ನು ಎಲ್ಲಾ ಕಡೆಯಲ್ಲಿಯೂ ತಿಳಿದು ಕೊಳ್ಳತಕ್ಕದ್ದು.

ಇಂತು ನಾಡ್ಯುತ್ಪತ್ತಿಪ್ರಕರಣವು ಮುಗಿದುದು.

[ಈ ಪ್ರಕರಣವಾದ ಮೇಲೆ ನಾಡೀನಿರ್ಣಯದಲ್ಲಿ 'ಅಷ್ಟಧಾತುಗಳ ಸ್ಥಾನನಿರ್ಣಯ'ವೆಂಬ ಭಾಗ ಆರಂಭವಾಗಿ ಕೆಳಗಿನ ಶ್ಲೋಕಗಳಿವೆ—

(ಆಯುರ್ವೇದೇ) **ಅಥಾನ್ಯತ್ಸಂಪ್ರವಕ್ಷ್ಯಾಮಿ ಸಂಕ್ಷಿಪ್ತಂ ಸೂಕ್ತಮುತ್ತಮಂ ।**
ಆಯುರ್ವೇದೋಪದೇಶೇಽಸ್ಮಿನ್ ಅಷ್ಟಧಾತು ನಿಗದ್ಯತೇ ॥
ನಾಡ್ಯೋಽಷ್ಟೌ ಪಾಣಿಪಾತ್ಕಂಠ ನಾಸೋಪಾಂತಂ ಸಮಾಶ್ರಿತಾಃ ।
ಕರಯೋಃ ಪಾದಯೋಃ ಘ್ರಾಣಮೂಲಯೋಃ ಕಂಠಮೂಲಯೋಃ

ಎರಡು ಕೈಗಳಲ್ಲಿ ಎರಡು, ಎರಡು ಪಾದಗಳಲ್ಲಿ ಎರಡು, ಕತ್ತಿನ ಎರಡು ಭಾಗಗಳಲ್ಲಿ ಎರಡು, ಮೂಗಿನ ಹೊಳ್ಳೆಗಳ ಕೆಳಗೆ ಎರಡು-ಹೀಗೆ ಎಂಟು ಸ್ಥಳಗಳಲ್ಲಿ ಎಂಟು ನಾಡಿಗಳು.

ಪಾದಯೋರ್ನಾಡಿಕಾಸ್ಥಾನಂ ಗುಲ್ಫಸ್ಯಾಂಗುಲಿಕಾತ್ರಯಂ ।
ಹಸ್ತಯೋಸ್ತು ಪ್ರಕೋಷ್ಠಾಂತೇ ಮಣಿಬಂಧೇಽಗುಲಿತ್ರಯಂ ॥
ಕಂಠಮೂಲೇಽಂಗುಲಿದ್ವಂದ್ವಂ ನಾಸಾಮೂಲೇಽಂಗುಲಾಧಿಕಂ ।
ಸ್ಥಾನಾನ್ಯೇತಾನಿ ನಾಡೀನಾಂ ತೇಷು ಪ್ರಾಣೋ ವ್ಯವಸ್ಥಿತಃ ॥

ಪಾದಗತನಾಡಿಗಳು ಎಲ್ಲಿವೆಯೆಂದರೆ, ಗುಲ್ಫಪ್ರದೇಶದ ಕೆಳಗೆ ಮೂರು ಅಂಗುಲದಷ್ಟು ಪರಿಮಿತ ಸ್ಥಾನದಲ್ಲಿ; ಹಸ್ತಗತನಾಡಿಗಳು ಪ್ರಕೋಷ್ಠಾಂತರದಲ್ಲಿ, ಮಣಿಕಟ್ಟಿನ ಕೆಳಗೆ ಮೂರು ಅಂಗುಲ ಪ್ರದೇಶದಲ್ಲಿ ; ಕಂಠಮೂಲಗತನಾಡಿಗಳು ಕುತ್ತಿಗೆಯ ಕೆಳಗೆ ಎರಡು ಅಂಗುಲ ಪ್ರದೇಶಗಳು;ಮತ್ತು ನಾಸಾಮೂಲಗತನಾಡಿಗಳು ಮೂಗಿನ ಹೊಳ್ಳೆಗಳ ಒಂದಂಗುಲ ಪ್ರದೇಶದಲ್ಲಿ. ಇವುಗಳಲ್ಲಿಯೇ ಪ್ರಾಣವು ಉಳಿದುಕೊಂಡಿರುವುದು. — ಸಂ.]

ಅಥ ನಾಡೀಜ್ಞಾನಪ್ರಕಾಶಿಕಾಪ್ರಾರಂಭಃ

ಕ್ವಚಿಚ್ಚಕ್ರಂ ಚ ಕೋಶಶ್ಚ ಕ್ವಚಿಜ್ಜೀವಗೃಹಂ ಸ್ಥಿತಂ ।
ಅಸ್ಮಿಂಶ್ಚಕ್ರೇ ಸ್ಥಿತೋ ಜೀವಃ ಪುಣ್ಯಾಪುಣ್ಯಪ್ರವೇಶತಃ ॥ ೪೮ ॥

ಕೆಲವು ಸ್ಥಳಗಳಲ್ಲಿ ನಾಭ್ಯಾದಿ ಚಕ್ರಾಕಾರವಾಗಿಯೂ, ಕೆಲವು ಸ್ಥಳಗಳಲ್ಲಿ ಆಮಾಶಯಾದಿ ಕೋಶಾಕಾರಗಳಾಗಿಯೂ, ಕೆಲವು ಸ್ಥಳಗಳಲ್ಲಿ ಹೃದಯಾದಿ ಜೀವಗೃಹಗಳಾಗಿಯೂ, ಇರುವ ಈ ಶರೀರದಲ್ಲಿ ಜೀವನು ಪುಣ್ಯ ಪಾಪಗತಿ ವಿಶೇಷದಿಂದ ನಿವಸಿಸುತ್ತಿರುವನು.

ಪ್ರಾಣಾನಿ ಸಮಮಾರೂಢೋ ದೇಹೇ ಭ್ರಮತಿ ಸರ್ವದಾ ।
ತಂತುಪಂಜರಮಧ್ಯಸ್ಥಾ ಯಥಾ ಭ್ರಮತಿ ಲೂತಿಕಾ ॥ ೪೯ ॥

ಜಾಡರಹುಳವು ತಂತುಪಂಜರಮಧ್ಯಭಾಗದಲ್ಲೆಡೆಬಿಡದೆ ಸಂಚರಿಸು ವಂತೆ ಜೀವನು ಶರೀರದಲ್ಲಿ ಪಂಚಪ್ರಾಣಾದಿಗಳೊಂದಿಗೆಡೆಬಿಡದೆ ಸಂಚರಿಸು ತ್ತಿರುವನು.

ಯಸ್ತಮಭ್ಯಸತೇ ನಿತ್ಯಂ ತದ್ಗತೇನಾಂತರಾತ್ಮನಾ ।
ನ ತಸ್ಯ ಜಾಯತೇ ಮೃತ್ಯುರಿತಿ ಸರ್ವಾಗಮೋದಿತಂ ॥ ೫೦ ॥

ಯಾವನು ಮೇಲೆ ಹೇಳಿದ ಜೀವನ ಯೋಗಾಭ್ಯಾಸದಿಂದ ಪರಬ್ರಹ್ಮ ನಿಷ್ಠವಾಗಿ ಮಾಡುತ್ತಿರುವನೋ ಅಂಥವನು ಪೂರ್ಣಾಯುಷ್ಮಂತನಾಗಿರು ವನು.

ನಾಭಿರೋಜೋ ಗುದಂ ಶುಕ್ರಂ ಶೋಣಿತಂ ಶಂಖಕೌ ತಥಾ ।
ಮೂರ್ಧಾ ಸಕಾಂಡಹೃದಯಂ ಪ್ರಾಣಸ್ಯಾಯತನಂ ದಶ ॥ ೫೧ ॥

ನಾಭಿ ಧಾತುವು, ಗುದವು, ವೀರ್ಯವು, ರಕ್ತವು, ಶಂಖಗಳು, ಶಿರಸ್ಸು, ಭುಜಗಳ ಸಂಧಿ, ಹೃದಯ, ಈ ೧೦ ಪ್ರಾಣವಾಯುವಿನ ಸ್ಥಾನವಾಗಿರುವುದು.

ತ್ರಿಂಶದ್ಧಸ್ತಪ್ರಮಾಣಾ ತು ವಿಶ್ವೋದರೀ ದ್ವಯಾಧಿಕಾ ।
ಏಕಹಸ್ತ ಪ್ರಮಾಣಾ ಸ್ಯಾತ್ಕಂಠದೇಶಸ್ಯ ನಾಡಿಕಾ ॥ ೫೨ ॥

ಮುವ್ವತ್ತೆರಡು ಮೊಳಗಳುಳ್ಳ ವಿಶ್ವೋದರಿಯೆಂಬ ನಾಡಿಯು ಉದರದೊಳಗಿರುವದು. ಅದರಲ್ಲಿ ಒಂದು ಮೊಳ ಕಂಠಸ್ಥಾನವನ್ನು ಆಶ್ರಯಿಸಿರುವದು.

ದಶಹಸ್ತಾ ತತಃ ಪಶ್ಚಾದಾಮಾಶಯಾ ಪ್ರಕೀರ್ತಿತಾ ।
ಪಚ್ಯಮಾನಾಶಯಾ ಜ್ಞೇಯಾ ದಶಹಸ್ತಾ ತತಃ ಪರಂ ॥ ೫೩ ॥

ಪಕ್ವಾಶಯಾ ತತಃ ಪಶ್ಚಾತ್ ದಶಹಸ್ತಾ ಪ್ರಕೀರ್ತಿತಾ ।
ಏಕಹಸ್ತಾ ಗುಹ್ಯದೇಶೇ ಶಂಖಾವರ್ತಾ ತು ನಾಡಿಕಾ ॥ ೫೪ ॥

ಕಂಠವನ್ನಾಶ್ರಯಿಸಿಯಿರುವ ಮೇಲಿನ ನಾಡಿಗೆ ಕೆಳಗಡೆ ಹತ್ತು ಮೊಳಗಳಲ್ಲಿ ಆಮಾಶಯುವೂ ಅದಕ್ಕೆ ಹತ್ತು ಮೊಳಗಳಲ್ಲಿ ಪಚ್ಯಮಾನಾಶಯುವೂ ಅದಕ್ಕೆ ಹತ್ತು ಮೊಳಗಳಲ್ಲಿ ಪಕ್ವಾಶಯುವೂ ಯಿರುವದು. ಮಿಕ್ಕ ಒಂದು ಮೊಳವು ಶಂಖಾವರ್ತವಾಗಿ ಗುದಸ್ಥಾನದಲ್ಲಿರುವದು.

ಭುಕ್ತಮಾಮಾಶಯೇ ತಿಷ್ಠೇತ್ಪಚ್ಯಮಾನಾಶಯೇ ಪಚೇತ್ ।
ಪಕ್ವಂ ಪಕ್ವಾಶಯೇ ತಿಷ್ಠೇದ್ವಹ್ನಿಃ ಪಕ್ವಾಶಯೋಪರಿ ॥
ಪಚ್ಯಮಾನಾಶಯೇ ಪಕ್ವಂ ಮತಿಂ ಪಕ್ವಾಶಯೆ ವ್ರಜೇತ್ ॥ ೫೫ ॥

ಮನುಷ್ಯರು ಭುಜಿಸುವ ಆಹಾರವು ಮೊದಲು ಆಮಾಶಯದಲ್ಲಿ ಪ್ರವೇಶಿಸಿ ಅಲ್ಲಿಂದ ಪಚ್ಯಮಾನಾಶಯುವಂ ಸೇರಿ ಅದಕ್ಕೆ ಕೆಳಗಿರುವ ಜಠರಾಗ್ನಿಯಿಂದ ಪಕ್ವವಾಗಿ ಅದರೊಳಗಿನ ಹಿಂಡಿಯು ಪಕ್ವಾಶಯುವಂ ಸೇರುವದು.

ರಸೋ ಭೋಜ್ಯಾದಿಕಾನಾಂ ಚ ನಾಭಿನಾಡ್ಯಾ ಕಳೇಬರಂ ।
ಸಕಲಂ ಯಾತಿ ಮರುತಾ ನೀಯಮಾನಸ್ಸ್ವಮಾಶ್ರಯಾತ್ ॥ ೫೬ ॥

ಮೇಲಿನ ಪಚ್ಯಮಾನಾಶಯದೊಳು ಪಕ್ವವಾದ ಭಕ್ಷಿತ ದ್ರವ್ಯಸಾರವು ನಾಭಿನಾಳದಲ್ಲಿ ಪ್ರವೇಶಿಸಿ ವಾಯುಪ್ರೇರಿತವಾಗಿ ಸಮಸ್ತನಾಡಿಗಳ ದ್ವಾರವಾಗಿ ಶರೀರದೊಳು ವ್ಯಾಪಿಸಿಯಿರುವದು.

ನಾಭಿಸ್ತು ಕೂರ್ಮರೂಪಃಸ್ಯಾನ್ಮಹಾನಾಡ್ಯಷ್ಟಪಾದ್ಭವೇತ್ ।
ಚತಸ್ರಃ ಪೃಷ್ಠದೇಶೇ ಸ್ಯುಶ್ಚತಸ್ರಃ ಕ್ರೋಡದೇಶಗಾಃ ॥ ೫೭ ॥

ಕೂರ್ಮಾಕಾರವಾದ ನಾಭಿಯು ಮಹಾನಾಡಿಗಳನ್ನು ಎಂಟು ಪಾದಂಗಳೊಂದಿಗೂ ಕೂಡಿಯಿರುವದು. ಆ ಯೆಂಟುನಾಡಿಗಳಲ್ಲಿ ನಾಲ್ಕು ಪೃಷ್ಠದೇಶವನ್ನೂ, ನಾಲ್ಕು ವಕ್ಷಸ್ಥಳವನ್ನೂ ಆಶ್ರಯಿಸಿ ಇರುವವು.

ದ್ವೇ ದ್ವೇ ಊರ್ಧ್ವಮಧಶ್ಚಾಪಿ ನಾಡಿಕೇ ಅಂತಗಾಮಿನೀ ॥ ೫೮ ॥
ಊರ್ಧ್ವಗಾ ಗಳದೇಶೆ ತು ಪಲ್ಲವೌ ದ್ವೌ ಪ್ರಕೀರ್ತಿತಾಃ ।
ತದೇಕಾ ಗಳತಃ ಪಂಚಪಲ್ಲವಾ ನಾಡಿಕಾ ಸ್ಮೃತಾಃ ॥ ೫೯ ॥

ಆ ಕೂರ್ಮಾಕಾರವಾದ ನಾಭಿ ಪೃಷ್ಠದೇಶವನ್ನು ಆಶ್ರಯಿಸಿರುವ ಮೇಲಿನ ನಾಲ್ಕು ನಾಡಿಗಳು ಶರೀರೋರ್ಧ್ವಭಾಗವಾಗಿ ಹೊರಟು ಶಿರಸ್ಸಿನ ವರಿಗೂ ವಕ್ಷಃಸ್ಥಲವನ್ನಾಶ್ರಯಿಸಿಯಿರುವ ನಾಲ್ಕು ನಾಡಿಗಳು ಪಾದಾಂತದ ವರಿಗೂ ವ್ಯಾಪಿಸಿಯಿರುವವು. ಮತ್ತು ಊರ್ಧ್ವವಾಗಿ ಹೊರಟ ನಾಲ್ಕು ನಾಡಿಗಳು ಎರಡೆರಡಾಗಿ ಒಡೆದು ಎಂಟಾಗಿ ಪರಿಣಮಿಸಿ ಅದರಲ್ಲೊಂದು ಐದು ನಾಡಿಗಳಾಗಿರುವದು.

ಚಕ್ಷುಷೋರ್ನಾಸಿಕಾರಂಧ್ರೇ ಜಿಹ್ವೋಷ್ಠೇ ಶ್ರವಣಾಧರೇ ।
ಆಕುಂಚನಕರೀ ಖ್ಯಾತಾ ಏವಂ ಪೃಷ್ಠಾತ್ಪ್ರಸಾರಿಣೀ ॥ ೬೦ ॥

ಐದಾಗಿ ಪರಿಣಮಿಸಿದ ಮೇಲೆ ಹೇಳಿದ ನಾಡಿಗಳಲ್ಲಿ ಎರಡು ಕಣ್ಣುಗಳಲ್ಲಿಯೂ, ಎರಡು ನಾಸಿಕಾರಂಧ್ರಗಳಲ್ಲಿಯೂ, ಒಂದು ಜಿಹ್ವೆಯಲ್ಲಿಯೂ, ವ್ಯಾಪಿಸಿತು. ಮಿಕ್ಕ ಎರಡು ನಾಡಿಗಳು ಶ್ರವಣಗಳಲ್ಲಿಯೂ, ಮತ್ತೆರಡು ಊರ್ಧ್ವಾಧರೋಷ್ಠಗಳಲ್ಲಿಯೂ, ವ್ಯಾಪಿಸಿ ಯಿರುವವು. ಈ ಪ್ರಕಾರವೇ ಮತ್ತೊಂದು ನಾಡಿಯು ಮೇಲೆ ಹೊರಟ ಒಂಭತ್ತು ನಾಡಿಗಳಿಗೆ ಸಹಾಯವಾಗಿದ್ದು ಮುಚ್ಚುವದು ತೆಗೆಯುವದು ಮುಂತಾದ ಕಾರ್ಯಗಳನ್ನು ಮಾಡುತ್ತದೆ.

ತದೇಕಾ ಸ್ಕಂಧದೇಶಾತ್ತು ಹಸ್ತಗಾ ಪಂಚಪಲ್ಲವಾ ।
ಅಂಗುಲೀ ಕ್ರೋಡಗಾ ಸೈವ ಅಕುಂಚನಕರೀ ಸ್ಮೃತಾ ॥ ೬೧ ॥
ಏವಂ ಪೃಷ್ಠಾತ್ಸಮಾಗತ್ಯ ಪ್ರಸಾರಣಕರೀ ಸ್ಮೃತಾ ॥

ಶಿರಸ್ಸಿನಲ್ಲಿ ವ್ಯಾಪಿಸಿದಂತೆ ಮೇಲೆ ಹೇಳಿದ ನಾಡಿಗಳಲ್ಲದೆ ಎರಡು ನಾಡಿಗಳು ಹಸ್ತಗಳಲ್ಲಿ ವ್ಯಾಪಿಸಿ ಐದೈದು ಶಾಖೆಗಳಾಗಿ ಸೀಳಿ ಬೆರಳುಗಳಲ್ಲಿ ಹೊಕ್ಕು ಕೈಗಳನ್ನು ನೀಡುವಿಕೆ ಮಡಿಸಿಕೊಳ್ಳುವಿಕೆ ಮುಂತಾದ ಕೃತ್ಯಗಳನ್ನು ಮಾಡುತ್ತಿರುವದು.

ಅಧೋಗಾ ಊರುಸಂಧ್ಯಂತರ್ನಾಡಿಕಾಃ ಪಂಚಪಲ್ಲವಾಃ ॥ ೬೨ ॥
ಪಾದಾಂಗುಳಗತಾ ಸ್ಯೈವ ಆಕುಂಚನಕರೀಃ ಸ್ಮೃತಾ ।
ಏವಂ ಪೃಷ್ಠಾತ್ಸಮಾಗತ್ಯ ಪ್ರಸಾರಣಕರೀ ಸ್ಮೃತಾ ॥ ೬೩ ॥

ಕೂರ್ಮಾಕಾರವಾದ ನಾಭಿಯು ವಕ್ಷಃಸ್ಥಲವನ್ನಾಶ್ರಯಿಸಿದಂತೆ ಮೇಲೆ ಹೇಳಲ್ಪಟ್ಟ ನಾಲ್ಕು ನಾಡಿಗಳಲ್ಲಿ ಎರಡು ನಾಡಿಗಳು ಕಟಿಪ್ರದೇಶದಲ್ಲಿ ಸೇರಿ ಊರುಸಂಧಿಗಳ ಮೂಲವಾಗಿ ಪೂರ್ವಭಾಗವಾಗಿ ಕಾಲಬೆರಳುಗಳವರೆಗೆ ವ್ಯಾಪಿಸಿ ಪಂಚಪಲ್ಲವಗಳುಂಟಾಗಿ ಬೆರಳುಗಳಲ್ಲಿ ಹೊಕ್ಕು ಮಡಿಸಿಕೊಳ್ಳುವಂತೆ ಮಾಡುವದು. ಮತ್ತು ಇತರ ಎರಡು ನಾಡಿಗಳು ಹಿಂದಿನ ಊರುಸಂಧಿಗಳ ದ್ವಾರಾ ಪಾದಾಂತದವರೆಗೂ ವ್ಯಾಪಿಸಿ ನೀಡುವಂತೆ ಮಾಡುತ್ತದೆ.

ಕೂರ್ಮಸ್ಯ ನವಮಃ ಪಾದೋ ಲಿಂಗನಾಡೀತೀರ್ಯತೇ ।
ಮೂತ್ರ ಶುಕ್ರವಹೇ ನಾಡ್ಯೌ ತಸ್ಯಾಃ ಪಲ್ಲವತಃ ಪುನಃ ॥ ೬೪ ॥

ಆ ಕೂರ್ಮನಾಡಿಯಲ್ಲಿ ಒಂಭತ್ತನೇದಾದ ಮತ್ತೊಂದು ಲಿಂಗನಾಡಿ ಯುದ್ಭವಿಸಿ ಲಿಂಗದೊಳು ವ್ಯಾಪಿಸಿ ಅಲ್ಲಿ ಎರಡು ದಳಗಳಾಗಿ ಒಂದು ಮೂತ್ರ ವನ್ನೂ, ಮತ್ತೊಂದು ಶುಕ್ಲವನ್ನೂ ಹೊರಡುವಂತೆ ಮಾಡುವದು.

ತಿರ್ಯಕ್ಕೂರ್ಮೋ ದೇಹಿನಾಂ ನಾಭಿದೇಶೇ ।
ವಾಮೇ ವಕ್ತ್ರಂ ತಸ್ಯ ಪುಚ್ಛಂ ಚ ಯಾಮ್ಯೇ ।

ಊರ್ಧ್ವೇ ಭಾಗೇ ಹಸ್ತಪಾದೌ ಚ ।
ವಾಮೌ ತಸ್ಯಾಧಸ್ತಾದ್ದಕ್ಷಿಣೌ ಸಂಸ್ಥಿತೌ ತೌ ॥ ೬೫ ।

ಮೇಲಿನ ನಾಭಿಕೂರ್ಮವು ಮನುಷ್ಯರ ನಾಭಿಸ್ಥಾನದಲ್ಲಿ ಎಡಭಾಗದೊಳು ಮುಖವೂ ಬಲಭಾಗದೊಳು ಪುಚ್ಛವೂ ವುಳ್ಳದ್ದಾಗಿರುವದೇ ಅಲ್ಲದೇ

ಊರ್ಧ್ವಮುಖಂಗಳಾದ ವಾಮಹಸ್ತಪಾದಗಳುಳ್ಳದ್ದಾಗಿಯೂ ಅಧೋಮುಖಂಗಳಾದ ದಕ್ಷಿಣಹಸ್ತಪಾದಗಳುಳ್ಳದ್ದಾಗಿಯೂ ಇರುವದು.

ವಕ್ತ್ರೇ ನಾಡೀದ್ವಯಂ ತಸ್ಯ ಪುಚ್ಛೇ ನಾಡೀದ್ವಯಂ ತಥಾ ।
ಪಂಚಪಂಚ ಕರೇ ಪಾದೇ ವಾಮದಕ್ಷಿಣಭಾಗಯೋಃ ॥ ೬೬ ॥

ಮತ್ತು ಕೂರ್ಮನಾಡಿಯ ಮುಖದಲ್ಲಿ ಎರಡು ನಾಡಿಗಳೂ, ಪುಚ್ಛದಲ್ಲಿ ಎರಡು ನಾಡಿಗಳೂ, ದಕ್ಷಿಣ ಹಸ್ತದಲ್ಲಿ ಐದುನಾಡಿಗಳೂ, ದಕ್ಷಿಣಪಾದದೊಳಗೈದು ನಾಡಿಗಳೂ, ವಾಮಹಸ್ತದಲ್ಲಿ ಐದುನಾಡಿಗಳೂ, ವಾಮಪಾದದಲ್ಲೈದು ನಾಡಿಗಳೂ ಇವೆ.

ನಾಡಿಸ್ಪರ್ಶನವಿಧಿ (ನಾಡೀನಿದಾನ)

ಸವ್ಯೇನ ರೋಗಧೃತಿಕೂರ್ಪರಭಾಗಮಧ್ಯಂ
ಪೀಡ್ಯಾಥ ದಕ್ಷಿಣ ಕರಾಂಗುಳಿಕಾತ್ರಯೇಣ ।
ಅಂಗುಷ್ಠಮೂಲಮಧಿಪಶ್ಚಿಮ ಭಾಗಮಧ್ಯೇ
ನಾಡೀಪ್ರಭಂಜನಗತಿಂ ಸತತಂ ಪರೀಕ್ಷೇತ್ ॥ ೬೭ ॥ [1]

ವೈದ್ಯನು ರೋಗಿಯ ದಕ್ಷಿಣ ಹಸ್ತವನ್ನು ಮೊಳಕೈ ಮೊದಲ್ಗೊಂಡು ತನ್ನ ವಾಮಹಸ್ತದಿಂದ ಚನ್ನಾಗಿ ಹಿಸಿಕಿ ಆ ಹಸ್ತದಲ್ಲಿರುವ ಅಂಗುಷ್ಠಮೂಲದಲ್ಲಿ ಒಳಭಾಗಮಧ್ಯದೊಳು ತನ್ನ ವಾಮಾಂಗುಳಿ ತ್ರಯದಿಂದ ಸದಾ ವಾತಗತಿಯನ್ನು ಪರೀಕ್ಷಿಸಿ ರೋಗದ ನಿದಾನವನ್ನು ತಿಳಿದುಕೊಳ್ಳಬೇಕು.

[ನಾಡೀನಿರ್ಣಯದಲ್ಲಿ ಮತ್ತು ನಾಡೀದರ್ಪಣದಲ್ಲಿ ಈ ಕೆಳಗಿನ ಶ್ಲೋಕಗಳೂ ಸೇರಿವೆ—

ನಾಡೀಮಂಗುಷ್ಠಮೂಲಾಧಃಸ್ಪೃಶೇದ್ದಕ್ಷಿಣಗೇ ಕರೇ ।
ಜ್ಞಾನಾರ್ಥಂ ರೋಗಿಣೋ ವೈದ್ಯೋ ನಿಜ ದಕ್ಷಿಣಪಾಣಿನಾ ॥

1. ಈ ಶ್ಲೋಕವನ್ನು ನಾಡೀನಿರ್ಣಯದಲ್ಲಿ 'ಗ್ರಂಥಾಂತರೇ' ಎಂದು ಕಾಣಿಸಿದ್ದಾರೆ.

ವೈದ್ಯನು ತನ್ನ ಬಲಗೈಯಿಂದ ರೋಗಿಯ ಬಲಗೈಯ ಹೆಬ್ಬೆರಳ ಕೆಳಗೆ ನಾಡಿಯನ್ನು ಮುಟ್ಟಿ ಪರೀಕ್ಷೆಮಾಡಬೇಕು.

ಸ್ಥಿರಚಿತ್ತಃ ಪ್ರಶಾಂತಾತ್ಮಾ ಮನಸಾ ಚ ವಿಶಾರದಃ ।
ಸ್ಪೃಶೇದಂಗುಲಿರ್ನಾಡೀಂ ಜಾನೀಯಾದ್ದಕ್ಷಿಣೇ ಕರೇ ॥

ವೈದ್ಯನು ನೆಟ್ಟಮನಸ್ಸುಳ್ಳವನಾಗಿಯೂ, ನೆಮ್ಮದಿಯಿಂದಲೂ, ಬುದ್ಧಿವಂತನಾಗಿಯೂ ಇದ್ದು ತನ್ನ ಬಲಗೈ ಬೆರಳುಗಳಿಂದ ರೋಗಿಯ ಬಲಗೈಯಲ್ಲಿ ನಾಡಿಯನ್ನು ತಿಳಿಯಬೇಕು.

ನಾಡೀದರ್ಪಣದಲ್ಲಿ 'ಮೂಢವೈದ್ಯ'ನು ನಾಡಿಯನ್ನು ನೋಡಲಾರನೆಂದು ಹೇಳಿದೆ—

ಪೀತಮದ್ಯಶ್ಚಂಚಲಾತ್ಮಾ ಮಲಮೂತ್ರಾದಿ ವೇಗಯುಕ್ ।
ನಾಡೀಜ್ಞಾನೇಽಸಮರ್ಥಃ ಸ್ಯಾಲ್ಲೋಭಾಕ್ರಾಂತಶ್ಚ ಕಾಮುಕಃ ॥

ಹೆಂಡವನ್ನು ಕುಡಿದವನು, ಚಪಲಚಿತ್ತನಾದವನು, ಮಲಮೂತ್ರಗಳನ್ನು ತಡೆಹಿಡಿದಿರುವವನು, ದುರಾಶೆಯುಳ್ಳವನು, ಕಾಮುಕನಾದವನು–ನಾಡಿಯನ್ನು ನೋಡಲಾರ.

ಹಾಗೆಯೇ ರೋಗಿಯ ವಿಚಾರದಲ್ಲೂ—

ಧೂರ್ತಮಾರ್ಗಸ್ಥ ವಿಶ್ವಾಸರಹಿತಾಜ್ಞಾತಗೋತ್ರಿಣಾ ।
ವಿನಾಭಿಶಂಸನಂ ವೈದ್ಯೋ ನಾಡೀದ್ರಷ್ಟಾ ಚ ಕಿಲ್ಬಿಷೀ ॥

ಧೂರ್ತನಾದವನು, ದಾರಿಯಲ್ಲಿ ನಡೆದುಹೋಗುತ್ತಿರುವವನು, ವೈದ್ಯನಲ್ಲಿ ವಿಶ್ವಾಸವಿಲ್ಲದವನು, ಹಿನ್ನೆಲೆ ತಿಳಿಯದವನು ಇವರ, ಅಥವಾ ರೋಗಿಯಾಗಲೀ ಅವನ ನೆಂಟರಾಗಲೀ ತನ್ನನ್ನು ಚಿಕಿತ್ಸೆಗೆಂದು ಕರೆಯದೆ ಇದ್ದಾಗ, ರೋಗಿಯ ನಾಡಿಯನ್ನು ನೋಡಬಾರದು.

ತ್ಯಕ್ತಮೂತ್ರಪುರೀಷಸ್ಯ ಸುಖಾಸೀನಸ್ಯ ರೋಗಿಣಃ ।
ಅಂತರ್ಜಾನುಕರಸ್ಯಾಪಿ ನಾಡೀ ಸಮ್ಯಕ್ ಪ್ರಬುಧ್ಯತೇ ॥

ರೋಗಿಯು ಮಲಮೂತ್ರಗಳನ್ನು ವಿಸರ್ಜಿಸಿ ಕೈಗಳನ್ನು ಮೊಳಕಾಲ ಮೇಲಿಟ್ಟು ಸುಖವಾಗಿ ಕುಳಿತಿದ್ದಾಗ ಅವನ ನಾಡಿಯು ಚೆನ್ನಾಗಿ ಕಾಣಿಸಿ ಕೊಳ್ಳುತ್ತದೆ.

ನಾಡೀದರ್ಪಣದಲ್ಲಿ ಈ ಶ್ಲೋಕಗಳಿವೆ—

ವಾತೇಽಧಿಕೇ ಭವೇನ್ನಾಡೀ ಪ್ರವ್ಯಕ್ತಾ ತರ್ಜನೀತಲೇ ।
ಪಿತ್ತೇ ವ್ಯಕ್ತಾ ಮಧ್ಯಮಾಯಾಂ ತೃತೀಯಾಂಗುಲಿಗಾ ಕಫೇ ॥

ವಾತದೋಷ ಹೆಚ್ಚಾಗಿರಲು, ಅದು ತೋರುಬೆರಳಿನ ಅಡಿಯಲ್ಲಿ ಕಾಣಿಸಿಕೊಳ್ಳುತ್ತದೆ ; ಪಿತ್ತವಾದರೆ ನಡುಬೆರಳಿನ ಕೆಳಗೆ ; ಕಫವು ಅನಾಮಿಕೆಯ ಕೆಳಗೆ.

ತರ್ಜನೀ ಮಧ್ಯಮಾ ಮಧ್ಯೇ ವಾತಪಿತ್ತಾಧಿಕೇ ಸ್ಫುಟಾ ।
ಅನಾಮಿಕಾಯಾಂ ತರ್ಜನ್ಯಾಂ ವ್ಯಕ್ತಾ ವಾತಕಫೇ ಭವೇತ್ ॥

ವಾತಪಿತ್ತಗಳೆರಡೂ ಹೆಚ್ಚಾದರೆ ತೋರುಬೆರಳು-ನಡುಬೆರಳುಗಳ ನಡುವೆ ಕೆಳಭಾಗದಲ್ಲಿಯೂ, ವಾತ ಕಫಗಳೆರಡೂ ಹೆಚ್ಚಾದರೆ ಅದು ಅನಾಮಿಕೆ ಮತ್ತು ತೋರುಬೆರಳುಗಳ ಕೆಳಗೆ ತಿಳಿದುಬರುತ್ತದೆ.

ಮಾಧ್ಯಮಾನಾಮಿಕಾಮಧ್ಯೇ ಸ್ಫುಟಾ ಪಿತ್ತಕಫೇಽಧಿಕೇ ।
ಅಂಗುಲಿತ್ರಿತಯೇಽಪಿ ಸ್ಯಾತ್ ಪ್ರವೃತ್ತಾ ಸಾನ್ನಿಪಾತತಃ ॥

ಪಿತ್ತಕಫಗಳು ಹೆಚ್ಚಾದರೆ ನಡುಬೆರಳು ಅನಾಮಿಕೆ ಇವುಗಳ ನಡುವೆ ಕೆಳಭಾಗದಲ್ಲಿ ತೋರಿಕೊಳ್ಳುತ್ತದೆ. ಮೂರು ದೋಷಗಳೂ ವಿಕೃತಿಗೊಂಡ ಸನ್ನಿಪಾತನಾಡಿಯ ಲಕ್ಷಣವು ಮೂರು ಬೆರಳುಗಳ ಅಡಿಯಲ್ಲಿಯೂ ಸ್ಪಷ್ಟವಾಗುತ್ತದೆ.

ವಕ್ರಮುತ್ಪ್ಲುತ್ಯ ಚಲತೀ ಧಮನೀ ವಾತಪಿತ್ತತಃ ।
ವಹೇದ್ವಕ್ರಂ ಚ ಮಂದಂ ಚ ವಾತಶ್ಲೇಷ್ಮಾಧಿಕಂ ತ್ವಚಃ ॥

ಉತ್ಪ್ಲುತ್ಯ ಮಂದಂ ಚಲತಿ ನಾಡೀ ಪಿತ್ತಕಫೇಽಧಿಕೇ ।

ವಾತಪಿತ್ತವಿಕಾರವಿದ್ದರೆ ನಾಡಿಯು ಡೊಂಕುಡೊಂಕಾಗಿ, ಕುಪ್ಪಳಿಸಿ ನಡೆಯುತ್ತದೆ; ವಾತಶ್ಲೇಷ್ಮ ವಿಕಾರವಿದ್ದರೆ ನಾಡಿಯು ಡೊಂಕುಡೊಂಕಾಗಿಯೂ, ಮಂದವಾಗಿಯೂ ನಡೆಯುತ್ತದೆ. ಪಿತ್ತಕಫ ವಿಕಾರವಿದ್ದರೆ ನಾಡಿಯು ಕುಪ್ಪಳಿಸಿ, ಮಂದವಾಗಿ ನಡೆಯುತ್ತದೆ.

ಉರಗಾದಿಲಾವಕಾದಿ ಹಂಸಾದೀನಾಂ ಚ ಬಿಭ್ರತೀ ಗಮನಂ ॥
ವಾತಾದೀನಾಂ ಚ ಸಮಂ ಧಮನೀ ಸಂಬಂಧಮಾಧತ್ತೇ ।
ಲಾವತಿತ್ತಿರ ವಾರ್ತಾಕಗಮನಂ ಸಾನ್ನಿಪಾತತಃ ॥

ವಾತಾದಿ ತ್ರಿದೋಷನಾಡಿಗಳು ಹಾವು, ಲಾವಕಪಕ್ಷಿ, ಹಂಸ ವೊದಲಾದವುಗಳ ನಡೆಯನ್ನು ಹೋಲುತ್ತವೆ. ಮೂರೂ ದೋಷಗಳೂ ಕಲೆತಿದ್ದರೆ ಲಾವೆ, ತಿತ್ತಿರ, ವಾರ್ತಾಕ ಇವುಗಳ ನಡೆಯನ್ನು ಅನುಸರಿಸುತ್ತವೆ.

ಕದಾಚಿನ್ಮಂದಗಮನಾ ಕದಾಚಿಚ್ಛೀಘ್ರಗಾ ಭವೇತ್ ।
ತ್ರಿದೋಷಪ್ರಭವೇ ರೋಗೇ ವಿಜ್ಞೇಯಾ ಹಿ ಭಿಷಗ್ವರೈಃ ॥

ಮೂರು ದೋಷಗಳ ವಿಕಾರಗಳಿಂದ ಉಂಟಾದ ರೋಗಗಳಲ್ಲಿ ಕೆಲವೊಮ್ಮೆ ಮಂದವಾಗಿಯೂ ಕೆಲವೊಮ್ಮೆ ವೇಗವಾಗಿಯೂ ನಾಡಿಯು ನಡೆಯುತ್ತದೆ.

ತ್ರಿದೋಷಗಳಲ್ಲಿ ಪಿತ್ತ ಹೆಚ್ಚಾದರೆ ರೋಗವು ಸಾಧ್ಯವಾದುದೆಂದೂ, ಮಧ್ಯಮಪ್ರಮಾಣದಲ್ಲಿದ್ದರೆ ಕಷ್ಟಸಾಧ್ಯವಾದುದೆಂದೂ, ಪಿತ್ತವು ಇರದೇ ಇದ್ದರೆ ರೋಗವು ಅಸಾಧ್ಯವೆಂದೂ ತಿಳಿಯಬೇಕು.

ಯದಾ ಯಂ ಧಾತುಮಾಪ್ನೋತಿ ತದಾ ನಾಡೀ ತಥಾಗತಿಃ ।
ತಥಾ ಹಿ ಸುಖಸಾಧ್ಯತ್ವಂ ನಾಡೀಜ್ಞಾನೇನ ಬುದ್ಧ್ಯತೇ ॥

ನಾಡಿಯು ಆಯಾಕಾಲದಲ್ಲಿ ಆಯಾ ಧಾತುವನ್ನು ಹೊಂದಿ ಮತ್ತು ಅದರ ಗತಿಯು ಪ್ರಕೃತಿಗನುಸಾರವಾಗಿದ್ದರೆ ರೋಗವು ಸುಖಸಾಧ್ಯವೆಂದು ತಿಳಿಯಬೇಕು. — ಸಂ.]

ವೈದ್ಯನ ಕರ್ತವ್ಯವು

ಪ್ರಾತಃ ಕೃತ ಸಮಾಚಾರಃ ಕೃತಾಚಾರಪರಿಗ್ರಹಂ ।
ಸುಖಾಸೀನಃ ಸುಖಾಸೀನಂ ಪರೀಕ್ಷಾರ್ಥಮುಪಾಚರೇತ್ ॥ ೭೮ ॥

ವೈದ್ಯನು ಪ್ರಾತಃಕಾಲದಲ್ಲಿ ಸ್ನಾನಸಂಧ್ಯಾವಂದನಾದಿಕ್ರಿಯೆಗಳನ್ನು ಮಾಡಿಕೊಂಡು, ಪರಿಶುದ್ಧನಾಗಿ ಸುಖಾಸೀನನಾದ ರೋಗಿಯು ಬಳಿಗೈತಂದು ತಾನೂ ಸುಖಾಸೀನನಾಗಿ ರೋಗನಿದಾನವನ್ನು ತಿಳಿದುಕೊಳ್ಳಬೇಕು.

ನಾಡೀಪರೀಕ್ಷಾನಿಷೇಧಕಾಲವು

ತೈಲಾಭ್ಯಂಗೇ ಚ ಸುಪ್ತೌ ಚ ತಥಾ ವೈ ಭೋಜನಾನ್ತರೇ ।
ತದಾ ನ ಜ್ಞಾಯತೇ ನಾಡೀ ಯಥಾ ದುರ್ಗತರಾನದೀ ॥ ೭೯ ॥

ತೈಲಾಭ್ಯಂಗವಂ ಮಾಡಿಕೊಂಡ ಮನುಷ್ಯನಿಗೂ ನಿದ್ರೆಹೋಗಿ ಯೆಚ್ಚರಗೊಂಡವನಿಗೂ, ಊಟಮಾಡಿದವನಿಗೂ, ವೇಗವಾಗಿ ಹರಿಯುವ ನದಿಯಂತೆ ನಾಡಿಯು ಅತಿವೇಗವಾಗಿ ನಡಿಯುತ್ತಿರುವದಾದ್ದರಿಂದ ಅಂಥಾ ಕಾಲದಲ್ಲಿ ನಾಡಿಯನ್ನು ಪರೀಕ್ಷಿಸಕೂಡದು.

[ಯೋಗರತ್ನಾಕರದಲ್ಲಿ ಈ ಶ್ಲೋಕ ಸೇರಿದೆ—

ಸದ್ಯಃಸ್ನಾತಸ್ಯ ಭುಕ್ತಸ್ಯ ತಥಾ ಸ್ನೇಹಾವಗಾಹಿನಃ ।
ಕ್ಷುತ್ತೃಷಾರ್ತಸ್ಯ ಸುಪ್ತಸ್ಯ ನಾಡೀ ಸಮ್ಯಙ್ನ ಬುಧ್ಯತೆ ॥

ಆಗತಾನೇ ಮಿಂದವನ, ಉಂಡವನ, ಎಣ್ಣೆಯೊತ್ತಿಕೊಂಡವನ, ಹಸಿವು – ಬಾಯಾರಿಕೆಗಳಿಂದ ಪೀಡಿತನಾದವನ, ನಿದ್ದೆಮಾಡುವವನ, ನಾಡಿಯು ತಿಳಿಯುವುದಿಲ್ಲ. — ಸಂ.]

ಸ್ತ್ರೀಪುರುಷರ ನಾಡೀಭೇದವು

ವಾಮಭಾಗೇ ಸ್ತ್ರಿಯಾ ಯೋಜ್ಯಾ ನಾಡೀ ಪುಂಸಸ್ತು ದಕ್ಷಿಣೇ ।
ಇತಿ ಪ್ರೋಕ್ತೋ ಮಯಾ ದೇವಿ ಸರ್ವದೇಹೇಷು ದೇಹಿನಾಂ ॥ ೭೦ ॥

ಸ್ತ್ರೀಯರಿಗೆ ವಾಮಹಸ್ತದಲ್ಲಿಯೂ ಪುರುಷರಿಗೆ ದಕ್ಷಿಣಹಸ್ತದಲ್ಲಿಯೂ ನಾಡಿಯನ್ನು ಪರೀಕ್ಷಿಸಬೇಕೆಂದು ಪಾರ್ವತಿಯೊಂದಿಗೆ ಶ್ರೀಪರಮೇಶ್ವರನು ಹೇಳಿಯಿದ್ದಾನೆ.

ಸ್ತ್ರೀಣಾಮೂರ್ಧ್ವಮುಖಃ ಕೂರ್ಮಃ ಪುಂಸಾಂ ಪುನರಧೋಮುಖಃ ।
ಅತಃ ಕೂರ್ಮವ್ಯತಿಕ್ರಾಂತಾತ್ಸರ್ವತ್ರೈಷ ವ್ಯತಿಕ್ರಮಃ ॥ ೭೧ ॥

ಲಕ್ಷ್ಯತೇ ದಕ್ಷಿಣೇ ಪುಂಸಾಂ ಯಾ ಚ ನಾಡೀವಿಚಕ್ಷಣೈಃ ।
ಕೂರ್ಮಭೇದೇನ ವಾಮಾನಾಂ ವಾಮೇ ಚೈವಾವಲೋಕ್ಯತೇ ॥ ೭೨ ॥

ಮೇಲೆ ಹೇಳಿದ ನಾಭಿಕೂರ್ಮವು ಸ್ತ್ರೀಯರಿಗೂರ್ಧ್ವಮುಖವಾಗಿಯೂ, ಪುರುಷರಿಗೆ ಅಧೋಮುಖವಾಗಿಯೂ ಇರುವದರಿಂದಲೂ ಸ್ತ್ರೀಪುರುಷರಿಗೆ ನಾಡಿಗಳು ವ್ಯತ್ಯಸ್ತವಾಗಿರುವದರಿಂದಲೂ ಸ್ತ್ರೀಯರಿಗೆ ವಾಮಹಸ್ತ ದಲ್ಲಿಯೂ ಪುರುಷರಿಗೆ ದಕ್ಷಿಣಹಸ್ತದಲ್ಲಿಯೂ ನಾಡಿಯನ್ನು ಪರೀಕ್ಷಿಸಬೇಕು. ಮತ್ತು ನಪುಂಸಕನಾಗಿದ್ದಲ್ಲಿ ಅಂಥವನ ಸ್ತ್ರೀಪುರುಷ ಭೇದಗಳನ್ನರಿತು ವಾಮ ದಕ್ಷಿಣಕ್ರಮವಾಗಿ ನಾಡಿಯನ್ನು ಪರೀಕ್ಷಿಸಬೇಕು.

[ನಾಡೀನಿರ್ಣಯದಲ್ಲಿ ಇದೊಂದು ಅರ್ಧಶ್ಲೋಕವಿದೆ—

ಸ್ತ್ರೀಣಾಂ ಭಿಷಗ್ವಾಮಹಸ್ತೇ ವಾಮಪಾದೇ ಚ ಯತ್ನತಃ ।

ವೈದ್ಯನು ಹೆಂಗಸರ ನಾಡಿಗಳನ್ನು ಅವರ ಎಡಗೈಯಲ್ಲಿಯೂ ಎಡಗಾಲಿನಲ್ಲಿಯೂ ನೋಡಬೇಕು.

ಅನಂತರ ನಾಡೀಪರೀಕ್ಷೆಯ ಕ್ರಮವನ್ನೂ ಕೌಶಲವನ್ನೂ ಕುರಿತು ಈ ಕೆಳಗಿನ ಮೂರು ಶ್ಲೋಕಗಳಿವೆ—

ವಾರತ್ರಯಂ ಪರೀಕ್ಷೇತ ಧೃತ್ವಾ ಧೃತ್ವಾ ವಿಮುಂಚಯೇತ್ ।
ವಿಮೃಶ್ಯ ಬಹುಧಾ ಬುಧ್ಯಾ ರೋಗವ್ಯಕ್ತಿಂ ವಿನಿರ್ದಿಶೇತ್ ॥

ವೈದ್ಯನು ಮೂರು ಬಾರಿ ನಾಡಿಯನ್ನು ಹಿಡಿದು ಹಿಡಿದು, ಬಿಡಬೇಕು; ಎಚ್ಚರಿಕೆಯಿಂದ ಹಲವಾರು ಬಗೆಗಳಲ್ಲಿ ಪರ್ಯಾಲೋಚಿಸಿ ನಾಡಿಯ ಗತಿಯನ್ನು ಗಮನಿಸಿ ರೋಗದ ಸ್ವರೂಪವನ್ನು ತಿಳಿಯಬೇಕು.

ಅಂಗುಲಿತ್ರಿತಯ್ಯೆಃ ಸ್ಪೃಷ್ಟ್ವಾ ಕ್ರಮಾದ್ದೋಷತ್ರಯೋದ್ಭವೈಃ ।
ಮಂದಾಂ ಮಧ್ಯಗತಾಂ ತೀಕ್ಷ್ಣಾಂ ತ್ರಿಭಿರ್ದೋಷೈಸ್ತು ಲಕ್ಷಯೇತ್ ॥

ವೈದ್ಯನು ತನ್ನ ಮೂರು ಬೆರಳುಗಳಿಂದ ರೋಗಿಯ ನಾಡಿಯನ್ನು ಮುಟ್ಟುತ್ತ, ನಾಡಿಯ ಓಟ ಮಂದವಾಗಿದ್ದರೆ, ಮಧ್ಯವಾಗಿದ್ದರೆ, ತೀವ್ರವಾಗಿದ್ದರೆ ಕ್ರಮವಾಗಿ ವಾತ, ಪಿತ್ತ, ಕಫ ಈ ಮೂರು ದೋಷಗಳ ವಿಕಾರವೆಂದು ತಿಳಿಯಬೇಕು.

ಶಾಸ್ತ್ರೇಣ ಸಂಪ್ರದಾಯೇನ ತಥಾ ಸ್ವಾನುಭವೇನ ವೈ ।
ಪರೀಕ್ಷೇದ್ರತ್ನವಚ್ಚ್ಯಾಸಾವಭ್ಯಾಸಾದೇವ ಜಾಯತೇ ॥

ನಾಡಿಯನ್ನು ಪರೀಕ್ಷೆಮಾಡುವವನು ಶಾಸ್ತ್ರದಿಂದಲೂ, ಸಂಪ್ರದಾಯದಿಂದಲೂ, ತನ್ನ ಅನುಭವದಿಂದಲೂ, ರತ್ನವನ್ನು ಪರೀಕ್ಷೆಮಾಡುವಂತೆ, ಮಾಡಬೇಕು. ನಾಡೀಪರೀಕ್ಷೆಯಲ್ಲಿ ಜಾಣ್ಮೆಯು ಅಭ್ಯಾಸದಿಂದಲೇ ಬರುವದು. — ಸಂ.]

ಜೀವಸಾಕ್ಷಿಣೀನಾಡೀಕಥನವು

ಅಂಗುಷ್ಠಸ್ಯ ತು ಮೂಲೇ ಯಾ ಸಾ ನಾಡೀ ಜೀವಸಾಕ್ಷಿಣೀ ।
ತಸ್ಯಾಃ ಗತಿವಶಾದ್ವಿದ್ಯಾತ್ಸುಖಂ ದುಃಖಂ ಚ ರೋಗಿಣಾಂ ॥ ೭೩ ॥ [1]

1. ಇದಕ್ಕೆ ಪಾಠಾಂತರ ಹೀಗಿದೆ—
ಅಂಗುಷ್ಠಮೂಲಭಾಗೇ ಯಾ ಧಮನೀ ಜೀವಸಾಕ್ಷಿಣೀ ।
ತಚ್ಚೇಷ್ಟಯಾ ಸುಖಂ ದುಃಖಂ ಜ್ಞೇಯಂ ಕಾಯಸ್ಯ ಪಂಡಿತೈಃ ॥

ಅಂಗುಷ್ಠಮೂಲದಲ್ಲಿರುವ ನಾಡಿಯು ಜೀವಸಾಕ್ಷಿಣಿಯೆಂದೆನ್ನಿಸಿಕೊಳ್ಳುವದು. ಅದರ ಗತಿವಿಶೇಷದಿಂದ ರೋಗಿಯ ಸುಖ ದುಃಖಗಳನ್ನು ತಿಳಿದುಕೊಳ್ಳಬೇಕು.

[ನಾಡೀದರ್ಪಣದಲ್ಲಿರುವ ಈ ಶ್ಲೋಕವು ಜೀವನಾಡಿಯು ಮೂಕರ, ಸಣ್ಣಮಕ್ಕಳ, ಅರಿವು ತಪ್ಪಿದವರಲ್ಲಿ ಕೂಡ ದೋಷಗಳ ವಿಕಾರಗಳನ್ನು ವೈದ್ಯನಿಗೆ ದೀಪದ ಬೆಳಕಿನಲ್ಲಿದ್ದಂತೆ ತಿಳಿಸುವುದೆಂದು ಹೇಳುತ್ತದೆ—

ಪ್ರದರ್ಶಯೇದ್ದೋಷನಿಜಸ್ವರೂಪಂ
ವ್ಯಸ್ತಂ ಸಮಸ್ತಂ ಯುಗಲೀಕೃತಂ ಚ ।
ಮೂಕಸ್ಯ ಮುಗ್ಧಸ್ಯ ವಿಮೋಹಿತಸ್ಯ
ದೀಪಪ್ರಭಾವಾ ಇವ ಜೀವನಾಡೀ ॥

ಇಲ್ಲಿ ನಾಡೀನಿರ್ಣಯುವು ಕೈ, ಕಾಲು, ಕತ್ತು, ಮೂಗು ಇಲ್ಲಿರುವ ನಾಡಿಗಳನ್ನೂ ನಾಡಿಗಳ ಕಾಲಭೇದ ಸಂಚಾರಕ್ರಮವನ್ನೂ ಹೇಳುತ್ತದೆ—

ಜೀವಿತಂ ಲಾಘವಂ ಸ್ವಾಸ್ಥ್ಯಂ ಜ್ವರಸ್ಯ ಚ ವಿಮೋಚನಂ ।
ಯಸ್ತು ಸ್ಥಾನಾನ್ನ ಮುಚ್ಯೇತ ಪಾದನಾಡೀಂ ನಿದರ್ಶಯೇತ್ ॥

ಆಯುಸ್ಸು, ಶರೀರಲಾಘವ, ಆರೋಗ್ಯ, ಜ್ವರ ಬಿಡುವುದು ಇವನ್ನು ತಿಳಿಯಬೇಕೆಂದರೆ ಪಾದಗತವಾದ ನಾಡಿಯನ್ನು ಪರೀಕ್ಷೆಮಾಡಬೇಕು.

ತಿರ್ಯಗ್ಯವಪ್ರಮಾಣೇ ನ ಜಹಾತಿ ಚ ನಿಜಂ ಪದಂ ।
ಸೂಚಿತಂ ಜೀವ ನಿರ್ಯಾಣಂ ಹಸ್ತನಾಡೀ ಗಳೇ ಚ ಯಾ ॥

ಯಾವ ಮನುಷ್ಯನ ಹಸ್ತಗತವಾದ ಅಥವಾ ಕಂಠಗತವಾದ ನಾಡಿಯು ತನ್ನ ಸ್ಥಾನವನ್ನು ಬಿಟ್ಟು ತಿರ್ಯಗ್ಯವಪ್ರಮಾಣದಷ್ಟೂ ಕದಲದೋ ಅವನು ಸಾಯುವನೆಂದು ಸೂಚನೆ.

ಅಜೀರ್ಣಮಾಮದೋಷಂ ಚ ಜ್ವರಸ್ಯಾಗಮನಂ ಕ್ಷುಧಾ ।
ವಾತಪಿತ್ತಕಫಾನ್ ದುಷ್ಟಾನ್ ಹಸ್ತನಾಡೀ ನಿದರ್ಶಯೇತ್ ॥

ಹಸ್ತಗತನಾಡಿಯು ಅಜೀರ್ಣ, ಆಮದೋಷ, ಜ್ವರದ ಬರುವಿಕೆ, ಹಸಿವು, ಮೂರು ದೋಷಗಳ ವಿಕಾರ ಇವನ್ನು ತೋರಿಸುತ್ತದೆ.

ಆಗಂತುಕಜ್ವರಂ ತೃಷ್ಣಾಮಾಯಾಸಂ ಮೈಥುನಂ ಕ್ಲಮಂ ।
ಭಯಂ ಶೋಕಂ ಚ ಕೋಪಂ ಚ ಕಂಠನಾಡೀ ನಿದರ್ಶಯೇತ್ ॥

ಆಗಂತುಕಜ್ವರ, ಬಾಯಾರಿಕೆ, ಆಯಾಸ, ಮೈಥುನ, ಬಳಲಿಕೆ, ಹೆದರಿಕೆ, ಶೋಕ, ಸಿಟ್ಟು ಇವನ್ನು ಕಂಠಗತನಾಡಿಯು ತೋರಿಸುತ್ತದೆ.

ಮರಣಂ ಜೀವಿತಂ ಕಾಮಂ ನೇತ್ರರೋಗಂ ಶಿರೋವ್ಯಥಾಂ ।
ಶ್ರಾವಣಾನ್ ಮುಖಜಾನ್ ರೋಗಾನ್ನಾಸಾನಾಡೀ ನಿದರ್ಶಯೇತ್ ॥

ಸಾವು, ಆಯುಸ್ಸು, ಆಸೆಗಳು, ಕಣ್ಣಿನ ಖಾಯಿಲೆ, ತಲೆನೋವು, ಕಿವಿ ಮತ್ತು ಮುಖ ರೋಗಗಳು ಇವನ್ನು ಮೂಗಿನೊಳಗಿನ ನಾಡಿ ತೋರಿಸುತ್ತದೆ.

ನಾಡೀದರ್ಪಣದಲ್ಲಿ ಈ ಶ್ಲೋಕದ ಪಾಠಾಂತರವು ಹೀಗಿದೆ—

ಮರಣಂ ಜೀವಿತಂ ಕಾಮಂ ಕಂಠರೋಗಂ ಶಿರೋರುಜಾಂ ।
ಶ್ರವಣಾನಿಲಜಾನ್ ರೋಗಾನ್ನಾಸಾನಾಡೀ ಪ್ರಕಾರಯೇತ್ ॥

ಇನ್ನು ಕಾಲಭೇದದಿಂದ ನಾಡೀಸಂಚಾರಕ್ರಮ—

ಪ್ರಾತಃ ಶ್ಲೇಷ್ಮಯುತಾ ನಾಡೀ ಮಧ್ಯಾಹ್ನೇ ಚಾಪಿ ಪೈತ್ತಿಕೀ ।
ಅಪರಾಹ್ನೇ ವಾತಕೀ ಪುನಃ ಪಿತ್ತಂ ನಿಶಾರ್ಧಕೇ ॥

ನಾಡಿಯು ಬೆಳಿಗ್ಗೆ ಶ್ಲೇಷ್ಮದಿಂದ ಕೂಡಿಯೂ, ನಡುಹಗಲು ಪಿತ್ತದಿಂದ ಕೂಡಿಯೂ, ಅನಂತರ ವಾತದಿಂದ ಕೂಡಿಯೂ, ನಡುರಾತ್ರಿ ಮತ್ತೆ ಪಿತ್ತದಿಂದ ಕೂಡಿಯೂ ಇರುತ್ತದೆ.

ನಾಡೀದರ್ಪಣದಲ್ಲಿ ಆರು ಬಗೆ ನಾಡಿಗಳಿಂದ ವ್ಯಾಧಿನಿರ್ಣಯವನ್ನು ಹೇಳಿದೆ—

ಅಂಗುಷ್ಠಮೂಲೇ ಕರಯೋಃ ಪಾದಯೋರ್ಗುಲ್ಫದೇಶಯೋಃ ।
ಕಪಾಲ ಪಾರ್ಶ್ವಯೋಃ ಷಡ್ಭ್ಯೋನಾಡಿಭ್ಯೋ ವ್ಯಾಧಿನಿರ್ಣಯಃ ॥

ಕೈಯ ನಾಡಿಯನ್ನು ಹೆಬ್ಬೆರಳ ಅಡಿಯಲ್ಲೂ, ಕಾಲಿನ ನಾಡಿಯನ್ನು ಮಣಿಕಟ್ಟಿನ ಕೆಳಗೂ, ತಲೆಯ ನಾಡಿಯನ್ನು ಕಿವಿಯ ನೆರೆಯಲ್ಲಿಯೂ ನೋಡಿ ವ್ಯಾಧಿಯನ್ನು ಗುರುತಿಸಬೇಕು.

ಅಲ್ಲಿಯೇ ಇರುವ ಮತ್ತೊಂದು ಶ್ಲೋಕ ಪ್ರಾಣಸಂಚಾರವನ್ನು ಹೊಕ್ಕುಳು, ತುಟಿ, ಕೈ, ಕಾಲು, ಕತ್ತು, ಮೂಗಿನ ಹತ್ತಿರ ಇಲ್ಲಿರುವ ನಾಡಿಗಳನ್ನು ಪರೀಕ್ಷಿಸಿ ತಿಳಿಯಬಹುದೆಂದು ಹೇಳುತ್ತದೆ—

ನಾಭ್ಯೋಷ್ಠಪಾಣಿಪಾತ್ಕಂಠನಾಸೋಪಾಂತೇಷು ಯಾ ಸ್ಥಿತಾಃ ।
ತಾಸು ಪ್ರಾಣಸ್ಯ ಸಂಚಾರಂ ಪ್ರಯತ್ನೇನ ವಿಭಾವಯೇತ್ ॥

ಮತ್ತೆ, ಕೈ, ಕಾಲು, ಕತ್ತು, ಮೂಗು, ಕಣ್ಣು, ಕಿವಿ, ನಾಲಗೆಯ ತುದಿ, ಜನನೇಂದ್ರಿಯ ಈ ಅಂಗಗಳ ಎಡ ಬಲ ಭಾಗಗಳಲ್ಲಿರುವ ನಾಡಿಗಳು (ಒಟ್ಟು ಹದಿನಾರು) ಪ್ರಾಣಬೋಧಕಗಳೆಂದು (ಎಂದರೆ ಪ್ರಾಣದ ಸಂಚಾರ ವನ್ನು ತಿಳಿಸುವುವೆಂದು) ಹೇಳಿದೆ—

ಪಾಣಿಪಾತ್ಕಂಠನಾಸಾಕ್ಷಿಕರ್ಣಜಿಹ್ವಾಂತಮೇಢ್ರಗಾಃ ।
ವಾಮದಕ್ಷಿಣತೋ ಲಕ್ಷ್ಯಾಃ ಷೋಡಶ ಪ್ರಾಣಬೋಧಕಾಃ ॥

ಮುಂದೆ ಆಯಾ ಸ್ಥಾನದ ನಾಡಿಗಳ ಪ್ರಮಾಣವನ್ನು ಹೇಳುವ ಶ್ಲೋಕ ಗಳಿವೆ—

ಹಸ್ತಯೋಶ್ಚ ಪ್ರಕೋಷ್ಠಾಂತೇ ಮಣಿಬಂಧೇಽಂಗುಲಿದ್ವಯಂ ।
ಪಾದಯೋರ್ನಾಡಿಕಾಸ್ಥಾನಂ ಗುಲ್ಫಸ್ಯಾಧೋಽಂಗುಲಿದ್ವಯಂ ॥

ಕಂಠಮೂಲೇಽಂಗುಲಿದ್ವಂದ್ವಂ ನಾಸಾಯಾಮಂಗುಲಿದ್ವಯಂ ।
ಏವಮಪ್ಯಂಗುಲಿದ್ವಂದ್ವಮುಗ್ರತಃ ಕರ್ಣರಂಧ್ರಯೋಃ ॥

ಇಲ್ಲಿ ಅಂಗುಲವೆಂದರೆ—

ನಿಸ್ತುಷಯವ ಏಕಸ್ತತ್ ಪ್ರಮಾಣಾಂಗುಲಂ ಸ್ಯಾತ್ ।
ತದುಭಯಮಿತಸದ್ಮನ್ಯೇವ ನಾಡೀಪ್ರಚಾರಃ ॥

ಎಂದು ವಿವರಣೆಯಿದೆ. ಹೊಟ್ಟನ್ನು ತೆಗೆದ ಒಂದು ಯವದ ಪ್ರಮಾಣವೇ ಅಂಗುಲ; ಅಂಥ ಎರಡರಷ್ಟು ಆಕ್ರಮಿಸುವ ಸ್ಥಳದಲ್ಲಿ ನಾಡಿಯ ಸಂಚಾರ. — ಸಂ.]

ನಾಡಿಯ ಹೆಸರುಗಳು

ಸ್ನಾಯುರ್ನಾಡೀ ವಸಾ ಹಿಂಸ್ರಾ ಧಮನೀ ಧಾಮನೀ ಧರಾ ।
ತಂತುಕೀ ಜೀವಿತಜ್ಞಾ ಚ ಸಿರಾ ಪರ್ಯಾಯವಾಚಕಾಃ ॥ ೭೪ ॥

ನಾಡಿಗೆ ಸ್ನಾಯುವೆಂತಲೂ, ವಸೆಯೆಂತಲೂ, ಹಿಂಸ್ರೆಯೆಂತಲೂ, ಧಮನಿಯೆಂತಲೂ, ಧಾಮನಿಯೆಂತಲೂ, ಧರೆಯೆಂತಲೂ, ತಂತುಕಿಯೆಂತಲೂ, ಜೀವಿತಜ್ಞೆಯೆಂತಲೂ, ಸಿರಾಯೆಂತಲೂ, ಪರ್ಯಾಯನಾಮಂಗಳಿಹವು.

[ನಾಡೀನಿರ್ಣಯವು ಇದಾದ ಮೇಲೆ ನಾಡೀದೇವತೆಗಳನ್ನು ಹೇಳುತ್ತದೆ—

ವಾತನಾಡೀ ಭವೇದ್ ಬ್ರಹ್ಮಾ ಪಿತ್ತನಾಡೀ ಚ ಶಂಕರಃ ।
ಶ್ಲೇಷ್ಮನಾಡೀ ಭವೇದ್ ವಿಷ್ಣುಸ್ತ್ರಿದೇವಾ ನಾಡಿದೇವತಾಃ ॥

ವಾತನಾಡಿಗೆ ಬ್ರಹ್ಮನೂ, ಪಿತ್ತನಾಡಿಗೆ ಶಿವನೂ, ಶ್ಲೇಷ್ಮನಾಡಿಗೆ ವಿಷ್ಣುವೂ ದೇವತೆಗಳು.

ಇದಾದ ಮೇಲೆ ವಾತಾದಿ ನಾಡೀ ಸ್ಥಾನಗಳನ್ನು ಹೇಳುವ ಶ್ಲೋಕವಿದೆ—

ಅಗ್ರೇ ವಾತವಹಾ ನಾಡೀ ಮಧ್ಯೇ ವಹತಿ ಪಿತ್ತಲಾ ।
ಅಂತೇ ಶ್ಲೇಷ್ಮವಿಕಾರೇಣ ನಾಡೀ ಜ್ಞೇಯಾ ಬುಧೈಃ ಸದಾ ॥

ಮೊದಲನೆಯದು, ವಾತವನ್ನು ತೋರಿಸುವ ನಾಡಿ; ನಡುವಿನದು, ಪಿತ್ತವನ್ನೂ ಕಡೆಯದು ಶ್ಲೇಷ್ಮವನ್ನೂ ತೋರಿಸುತ್ತವೆ. ಇದನ್ನು ಪಂಡಿತರಿಂದ ಅರಿತುಕೊಳ್ಳಬೇಕು.

ಅನಂತರ ಮೂರು ದೋಷಗಳನ್ನೂ ತಿಳಿದುಕೊಳ್ಳುವ ಬಗೆಯನ್ನು ಹೇಳುವ ಶ್ಲೋಕವಿದೆ—

ವಾತಾದ್ವಕ್ರಗತಿರ್ನಾಡೀ ಪಿತ್ತಾದುತ್ಪ್ಲುತ್ಯಗಾಮಿನೀ ।
ಕಫಾನ್ಮಂದಗತಿರ್ಜ್ಞೇಯಾ ಸನ್ನಿಪಾತಾದತಿದ್ರುತಂ ॥

ವಾತದೋಷ ಹೆಚ್ಚಾದರೆ ಅದರ ನಾಡಿ ಡೊಂಕುಡೊಂಕಾಗಿಯೂ, ಪಿತ್ತದೋಷ ಹೆಚ್ಚಾದರೆ ಕುಪ್ಪಳಿಸಿ ಕುಪ್ಪಳಿಸಿ ಹೋಗುವಂತೆಯೂ, ಕಫದೋಷ ಹೆಚ್ಚಾದರೆ ಮಂದವಾಗಿಯೂ, ಮೂರೂ ದೋಷಗಳು ಕಲೆತಿದ್ದರೆ ತುಂಬ ವೇಗವಾಗಿಯೂ ನಡೆಯುತ್ತದೆ.

ನಾಡೀದರ್ಪಣದಲ್ಲಿ ನಾಡಿಗಳಿಗೆ ಬಣ್ಣಗಳನ್ನೂ, ಮುಟ್ಟುವಾಗ ಆಗುವ ಸ್ಪರ್ಶಾನುಭವವನ್ನೂ, ಕಾಲದಿಂದ ಅವುಗಳ ಸಂಚಾರಕ್ರಮವನ್ನೂ ಹೇಳುವ ಶ್ಲೋಕಗಳಿವೆ—

ವಾತನಾಡೀ ಭವೇನ್ನೀಲಾ ಪಿತ್ತನಾಡೀ ತು ಪಾಂಡುರಾ ।
ಶ್ವೇತಾ ತು ಕಫನಾಡೀ ಸ್ಯಾದೇವಂ ವರ್ಣಾನಿ ಸಂವಿದೇತ್ ॥

ವಾತನಾಡಿಯು ಬಣ್ಣ ನೀಲಿ, ಪಿತ್ತನಾಡಿಯದು ನಸುಗೆಂಪು, ಕಫನಾಡಿಯದು ಬಿಳಿ.

ಪಿತ್ತನಾಡೀ ಭವೇದುಷ್ಣಾ ಕಫನಾಡೀ ತು ಶೀತಲಾ ।
ವಾತನಾಡೀ ಭವೇನ್ಮಧ್ಯಾ ಏವಂ ಸ್ಪರ್ಶವಿನಿರ್ಣಯಃ ॥

ಪಿತ್ತನಾಡಿ ಬೆಚ್ಚಗಿರುತ್ತದೆ, ಕಫನಾಡಿ ತಣ್ಣಗೆ, ವಾತನಾಡಿ ಎರಡರ ನಡುವೆ.

ಪ್ರಾತಃ ಸ್ನಿಗ್ಧಮಯೀ ನಾಡೀ ಮಧ್ಯಾಹ್ನೇ ಚೋಷ್ಣತಾನ್ವಿತಾ ।
ಸಾಯಾಹ್ನೇ ಧಾವಮಾನಾ ಚ ರಾತ್ರೌ ವೇಗವಿವರ್ಜಿತಾ ॥

ಮುಂಜಾನೆ ಜಿಗುಟಾಗಿಯೂ. ಮಧ್ಯಾಹ್ನ ಬಿಸಿಯಾಗಿಯೂ, ಸಂಜೆ ವೇಗವಾಗಿಯೂ, ರಾತ್ರಿ ಮಂದವಾಗಿಯೂ, ಇರುತ್ತದೆ.

ನಾಡೀದರ್ಪಣದಲ್ಲಿರುವ ಒಂದು ಶ್ಲೋಕವು ನಾಡಿಯಿಂದ ಒಂದೊಂದು ದೋಷವನ್ನೂ ಅವುಗಳಲ್ಲೆರಡು ಕಲೆತಿರುವುದನ್ನೂ (ದ್ವಂದ್ವ) ಮೂರೂ ಬೆರೆತಿರುವುದನ್ನೂ (ಸನ್ನಿಪಾತ) ವ್ಯಾಧಿಯ ಸಾಧ್ಯಾಸಾಧ್ಯತೆಯನ್ನೂ ತಿಳಿಯಬಹುದೆನ್ನುತ್ತದೆ.

ವಾತಂ ಪಿತ್ತಂ ಕಫಂ ದ್ವಂದ್ವಂ ಸನ್ನಿಪಾತಂ ತಥೈವ ಚ ।
ಸಾಧ್ಯಾಸಾಧ್ಯವಿವೇಕಂ ಚ ಸರ್ವಂ ನಾಡೀ ಪ್ರಕಾಶಯೇತ್ ॥ —ಸಂ.]

ನಾಡಿಯ ಚಿಹ್ನೆಗಳು

ಆದೌ ಚ ವಹತೇ ವಾತೋ ಮಧ್ಯೇ ಪಿತ್ತಂ ತಥೈವ ಚ ।
ಅಂತೇ ಚ ವಹತೇ ಶ್ಲೇಷ್ಮ ನಾಡಿಕಾತ್ರಯಲಕ್ಷಣಂ ॥ ೭೫ ॥

ರೋಗಿಯ ಮಣಿಬಂಧದಲ್ಲಿ ವೈದ್ಯನು ಧಾತುವನ್ನು ಪರೀಕ್ಷಿಸುವಾಗ ತನ್ನ ತರ್ಜನಿಗೆ ಸ್ಪೃಶಿಸುವ ನಾಡಿಯು ವಾತವೆಂತಲೂ, ಮಧ್ಯಮಕ್ಕೆ ಸ್ಪೃಶಿಸುವ ನಾಡಿಯು ಪಿತ್ತವೆಂತಲೂ, ಅನಾಮಿಕಾಂಗುಳಕ್ಕೆ ಸ್ಪೃಶಿಸುವ ನಾಡಿಯು ಶ್ಲೇಷ್ಮವೆಂತಲೂ ತಿಳಿಯತಕ್ಕದ್ದು.

ವಾತಾಧಿಕಾ ವಹೇನ್ಮಧ್ಯೇ ತ್ವಗ್ರೆ ವಹತಿ ಪಿತ್ತಲಾ ।
ಅಂತೇ ಚ ವಹತೇ ಶ್ಲೇಷ್ಮ ಮಿಶ್ರಿತೇ ಮಿಶ್ರಿತಾ ಭವೇತ್ ॥ ೭೬ ॥

ಮಧ್ಯಮಾಂಗಳಿಯಲ್ಲಿ ನಾಡಿಯು ಅತಿವೇಗವಾಗಿ ನಡಿಯುತ್ತಿದ್ದರೆ ವಾತರೋಗವೆಂತಲೂ, ತರ್ಜನಿಯಲ್ಲಿ ನಾಡಿಯು ಅತಿವೇಗವಾಗಿ ನಡಿಯುತ್ತಿದ್ದರೆ ಪಿತ್ತರೋಗವೆಂತಲೂ, ಅನಾಮಿಕೆಯಲ್ಲಿ ನಾಡಿಯು ಅತಿವೇಗವಾಗಿ ನಡಿಯುತ್ತಿದ್ದರೆ ಶ್ಲೇಷ್ಮ ರೋಗವೆಂತಲೂ, ಮಧ್ಯಮಾತರ್ಜನಿಗಳಲ್ಲಿ

ನಾಡಿಯು ಮಿಶ್ರವಾಗಿ ಅತಿವೇಗದಿಂದ ನಡಿಯುತ್ತಿದ್ದರೆ ಪಿತ್ತವಾತವೆಂತಲೂ, ಮಧ್ಯಮಾನಾಮಿಕಗಳಲ್ಲಿ ನಾಡಿಯು ಮಿಶ್ರವಾಗಿ ಅತಿವೇಗದಿಂದ ನಡಿಯುತ್ತಿದ್ದರೆ ವಾತಶೀತವೆಂತಲೂ, ಮಧ್ಯಮಾಂಗುಳಿನಾಡಿಯು ಕ್ಷೀಣಿಸಿ ಅನಾಮಿಕಾತರ್ಜಿನೀನಾಡಿಗಳು ಮಿಶ್ರವಾಗಿ ಅತಿವೇಗದಿಂದ ನಡಿಯುತ್ತಿದ್ದರೆ ಪಿತ್ತಶೀತವೆಂತಲೂ, ವಾತಪಿತ್ತಶ್ಲೇಷ್ಮಗಳು ಮೂರೂ ಕಲೆತುಯಿದ್ದರೆ ತ್ರಿದೋಷವೆಂತಲೂ ತಿಳಿಯತಕ್ಕದ್ದು.

ತೃಣಂ ಪುರಸ್ಸರಂ ಕೃತ್ವಾ ಯಥಾ ವಾತೋ ವಹೇದ್ಬಲೀ ।
ಶೇಷಸ್ಥಂ ತೃಣಮಾದಾಯ ಪೃಥಿವ್ಯಾಂ ವಕ್ರಗಾ ಯಥಾ ॥ ೭೭ ॥

ತಥಾ ಮಧ್ಯಗತೋ ವಾಯುಃ ಕೃತ್ವಾ ಪಿತ್ತಂ ಪುರಸ್ಸರಂ ।
ಶೇಷಸ್ಥಂ ಕಫಮಾದಾಯ ನಾಡ್ಯಾಂ ವಹತಿ ಸರ್ವದಾ ॥ ೭೮ ॥

ಗತಿಃ ಪಿತ್ತಸ್ಯಾತ ಏವ ಚಂಚಲೇತ್ಯನಿಲಾಗ್ರತಃ ।
ಕಫಸ್ಯ ಮಂದಾ ಗತಿರ್ವಾ ವಾಯೋಃ ಪೃಷ್ಠತ್ವಸಂಭವಾತ್ ॥ ೭೯ ॥

ಗಾಳಿಯು ಬೀಸುವಾಗ ಅದಕ್ಕಭಿಮುಖವಾಗಿರುವ ತೃಣವು ವಿಶೇಷವಾಗಿಯೂ, ಹಿಂದೆಯಿರುವ ತೃಣವು ಮಂದವಾಗಿಯೂ ಚಲಿಸುವಂತೆ, ಮಧ್ಯದಲ್ಲಿರುವ ವಾತವು ಎದುರಿಗಿರುವ ಪಿತ್ತವನ್ನು ಅಧಿಕವಾಗಿ ಚಲಿಸುವಂತೆಯೂ ಹಿಂದೆಯಿರುವ ಶ್ಲೇಷ್ಮವನ್ನು ಮಂದವಾಗಿ ಚಲಿಸುವಂತೆಯೂ ಮಾಡುವದು.

[ನಾಡೀನಿರ್ಣಯದಲ್ಲಿ ಈ ಶ್ಲೋಕವನ್ನು 'ಗ್ರಂಥಾಂತರೇ' ಎಂದು ಕಾಣಿಸಿ ಅದಕ್ಕೆ ಮೊದಲು ಕೆಳಗಿನ ಶ್ಲೋಕವನ್ನು ಕೊಟ್ಟಿದೆ.

ವಾತೇ ವಕ್ರಾ ತದನು ಚಪಲಾ ಶ್ಲೇಷ್ಮರೋಗೇ ಸ್ಥಿರಾ ಸ್ಯಾ-
ತ್ಸರ್ಪಾಕಾರಾ ಪ್ರಭವತಿ ತದಾ ವಾತಪಿತ್ತಪ್ರಭಾವೇ ।
ನಾಡೀ ಹಂಸೀ ಕಫಪರ್ವಯೋರ್ದರ್ದುರಾ ಶ್ಲೇಷ್ಮಪಿತ್ತೇ
ಭಿನ್ನಾ ಸೂಕ್ಷ್ಮಾಽಪಿ ಚ ವಿಷಮಗತೇ ಸನ್ನಿಪಾತೇ ತ್ವಲಕ್ಷ್ಯಾ ॥

ವಾತರೋಗದಲ್ಲಿ ನಾಡಿಯು ಡೊಂಕುಡೊಂಕಾಗಿ, ಪಿತ್ತರೋಗದಲ್ಲಿ ಚಪಲವಾಗಿ, ಶ್ಲೇಷ್ಮರೋಗದಲ್ಲಿ ಸ್ಥಿರವಾಗಿ ಇರುತ್ತದೆ ವಾತಪಿತ್ತಗಳೆರಡೂ ಕೆರಳಿದ್ದಾಗ ಹಾವಿನಂತೆ ನಡೆಯುತ್ತದೆ; ಶ್ಲೇಷ್ಮವಾತಗಳ ಹೆಚ್ಚಳದಲ್ಲಿ ಹಂಸದಂತೆನಡಿಗೆ ; ಶ್ಲೇಷ್ಮಪಿತ್ತಗಳೆರಡೂ ಹೆಚ್ಚಿದಾಗ ಕಪ್ಪೆಯಂತೆ ಹಾರಾಟ; ವಿಷಮಜ್ವರವಿರಲು ಕಡಿದುಹೋದಂತೆ, ತಿಳಿವಿಗೆ ಸಿಗದಂತೆ ಇರುತ್ತದೆ; ಮೂರೂ ದೋಷಗಳು ಹೆಚ್ಚಾಗಿದ್ದರೆ ನಾಡಿ ಸಿಗುವುದೇ ಕಷ್ಟವಾಗುತ್ತದೆ. — ಸಂ.]

(ಅನ್ಯಚ್ಚ)

ಪಿತ್ತಶ್ಲೇಷ್ಮಗತಿರ್ನಾಸ್ತಿ ವಾತಸ್ಯ ಗಮನೇ ಗತಿಃ ।
ತಸ್ಮಾತ್ತ್ವಗ್ರೇ ವಹೇದ್ವಾಯುರ್ಜಲೂಕಾ ವಕ್ರಗಾ ಯಥಾ ॥ ೮೦ ॥

ಪಿತ್ತಶ್ಲೇಷ್ಮನಾಡಿಗಳು ಸ್ವತಂತ್ರರಹಿತಗಳಾಗಿರುವವು. ವಾತನಾಡಿಯು ಗಮನವನ್ನನುಸರಿಸಿಯೇ ಪಿತ್ತಶ್ಲೇಷ್ಮಗಳಿಗೂ ಗಮನವುಂಟಾಗಿರುವದು. ಆದುದರಿಂದ ವಕ್ರವಾಗಿ ಸಂಚರಿಸುವ ಜಲೂಕದಂತೆ (ಜಿಗಣೆ) ನಾಡಿಗಳಿಗೆ ಅಗ್ರಭಾಗದಲ್ಲಿರುವ ವಾತನಾಡಿಯು ಚಲಿಸಿದರೆ ಪಿತ್ತಶ್ಲೇಷ್ಮಗಳೂ ಚಲಿಸುವವು.

ಸ್ವಸ್ಥನಾಡೀಲಕ್ಷಣವು

ಭೂಲತಾ ಭುಜಗಪ್ರಾಯಾ ಸ್ವಚ್ಛಾ ಸ್ವಾಸ್ಥ್ಯಮಯೀ ಸಿರಾ ।
ಸುಖಿತಸ್ಯ ಸ್ಥಿತಾ ಜ್ಞೇಯಾ ತಥಾ ಬಲವತೀ ಮತಾ ॥ ೮೧ ॥

ರೋಗರಹಿತನಾದ ಮನುಷ್ಯನ ನಾಡಿಯು ಭೂತಲವೆನ್ನಲ್ಪಡುವದು.[1] ಆ ನಾಡಿಯು ಅಂಥವನಿಗೆ ಹಾವು ಚಲಿಸುವಂತೆ ಸ್ಥಿರವಾಗಿಯೂ ಬಲಿಷ್ಠವಾಗಿಯೂ ಚಲಿಸುವದು.

1. ಇಲ್ಲಿ ಅನುವಾದಕರು ಶ್ಲೋಕದ ಮೊದಲ ಮಾತನ್ನು 'ಭೂತಲ' ಎಂದು ಓದಿಕೊಂಡು ಎಡವಿದ್ದಾರೆ. 'ಭೂಲತಾ' ಎಂದರೆ ನೆಲದ ಮೇಲೇ ಹರಿದಾಡುವ ಬಳ್ಳಿ; ನೆಲದ ಆಸರೆಯಿರುವುದರಿಂದ ಅದು ಸ್ಥಿರ. ಭೂಲತಾ ಎನ್ನುವುದು ಹಾವಿನ ಆಕಾರದ ನಾಡಿಯ ಹೆಸರು.

[ಈ ಶ್ಲೋಕಕ್ಕೆ ಮೊದಲು ನಾಡೀನಿರ್ಣಯಲ್ಲಿ ಇದೊಂದು 'ಆರೋಗ್ಯ ನಾಡೀಲಕ್ಷಣ' ವೆನಿಸಿಕೊಂಡ ಶ್ಲೋಕವಿದೆ—

ಹಂಸಗಾ ಚೈವ ಯಾ ನಾಡೀ ತಥೈವ ಗಜಗಾಮಿನೀ ।
ಮುಖಂ ಪ್ರಶಸ್ತಂ ಚ ಭವೇತ್ತಸ್ಯಾರೋಗ್ಯಂ ಭವೇತ್ಸದಾ ॥

ಯಾವನ ನಾಡಿಯು ಹಂಸದಂತೆ ನಡಿಗೆಯುಳ್ಳದ್ದೋ, ಆನೆಯಂತೆ ನಡಿಗೆಯುಳ್ಳದ್ದೋ, ಮತ್ತು ಯಾವನ ಮುಖವು ಪ್ರಸನ್ನವಾಗಿರುವುದೋ ಅವನು ಆರೋಗ್ಯಶಾಲಿಯೆಂದು ತಿಳಿಯಬೇಕು.

ಮತ್ತೊಂದು ಶ್ಲೋಕವನ್ನು 'ಮತಾಂತರೆ' ಎಂದು ಕಾಣಿಸಿ ಕೊಟ್ಟಿದೆ—

ಯೋ ರೋಗಿಣಃ ಕರಂ ಸ್ಪೃಷ್ಟ್ವಾ ಸ್ವಕರಂ ಕ್ಷಾಲಯೇದ್ಯದಿ ।
ರೋಗಾಸ್ತಸ್ಯ ವಿನಶ್ಯಂತಿ ಪಂಕಪ್ರಕ್ಷಾಲನಾದ್ಯಥಾ ॥

ವೈದ್ಯನು ರೋಗಿಯ ನಾಡಿಯನ್ನು ನೋಡಿದ ಮೇಲೆ ತನ್ನ ಕೈಯನ್ನು ತೊಳೆದುಕೊಂಡರೆ, ರೋಗಿಯ ರೋಗಗಳು, ಕೊಳೆಯನ್ನು ತೊಳೆದುಕೊಂಡಂತೆ, ನಾಶವಾಗುತ್ತವೆ. — ಸಂ.]

(ಅನ್ಯಚ್ಚ)

ಪ್ರಾತಃಸ್ನಿಗ್ಧಮಯೀ ನಾಡೀ ಮಧ್ಯಾಹ್ನೇಪ್ಯುಷ್ಣತಾನ್ವಿತಾ ।
ಸಾಯಾಹ್ನೇ ಧಾವಮಾನಾ ಚ ಚಿರಾದ್ರೋಗ ವಿವರ್ಜಿತಾ ॥ ೮೨ ॥

ಚಿರಕಾಲದಿಂದ ರೋಗವಿಲ್ಲದೇಯಿರುವವನ ನಾಡಿಯು ಪ್ರಾತಃಕಾಲ ದಲ್ಲಿ ರೂಕ್ಷರಹಿತವಾಗಿಯೂ, ಮಧ್ಯಾಹ್ನದೊಳಗುಷ್ಣ ಪ್ರಕೋಪವಾಗಿಯೂ, ಸಾಯಾಹ್ನದೊಳು ತೀವ್ರವಾಗಿಯೂ ನಡಿಯುತ್ತಿರುವದು.

[ಆರೋಗ್ಯವಂತನ ನಾಡಿಯನ್ನು ಪರೀಕ್ಷೆಮಾಡಿದರೆ ಮುಂದೊದಗ ಬಹುದಾದ ರೋಗಗಳನ್ನೂ ತಿಳಿಯಬಹುದೆಂದು ನಾಡೀದರ್ಪಣದಲ್ಲಿರುವ ಈ ಶ್ಲೋಕಾರ್ಥವು ತಿಳಿಸುತ್ತದೆ—

ಭಾವಿರೋಗಾವಬೋಧಾಯ ಸುಸ್ಥನಾಡೀಪರೀಕ್ಷಣಂ ॥

ಆರೋಗ್ಯವಂತರ ನಾಡಿಗಳನ್ನು ಮುಟ್ಟಿ, ನೋಡಿ ಅಭ್ಯಾಸ ಪಡೆದರೇ ನಾಡೀ ಜ್ಞಾನವಾಗುವುದು, ಎಂದು ಅಲ್ಲಿಯೇ ಇರುವ ಈ ಶ್ಲೋಕದ ಅರ್ಥ—

ಸ್ಪರ್ಶನಾದಿಭಿರಭ್ಯಾಸಾನ್ನಾಡೀಜ್ಞೋ ಜಾಯತೇ ಭಿಷಕ್ ।
ತಸ್ಮಾತ್ ಪರಾಮೃಶೇನ್ನಾಡೀಂ ಸುಸ್ಥಾನಾಮಪಿ ದೇಹಿನಾಂ ॥

ನಾಡೀಜ್ಞಾನವನ್ನು ಪಡೆಯಲು, ಆರೋಗ್ಯವಂತರ ನಾಡಿಯನ್ನು ಮುಟ್ಟಿ, ಹಿಸುಕಿ, ತಟ್ಟಿ, ಹಿಂಡಿ ಆಯಾ ಸ್ಥಿತಿಗಳಲ್ಲಿ ಪ್ರಾಣಸಂಚಾರದ ಕ್ರಮು ವನ್ನು ಪ್ರಯತ್ನದಿಂದ ತಿಳಿದುಕೊಳ್ಳಬೇಕೆಂದು ಈ ಶ್ಲೋಕವಿದೆ—

ಸ್ಪರ್ಶನಾತ್ ಪೀಡನಾದ್ ಘಾತಾದ್ವೇದನಾನ್ಮರ್ದನಾದಪಿ ।
ತಾಸು ಜೀವಸ್ಯ ಸಂಚಾರಂ ಪ್ರಯತ್ನೇನ ನಿರೂಪಯೇತ್ ॥

ಆರೋಗ್ಯವಂತರ ನಾಡಿಯಲ್ಲಿ ಪ್ರಾಣಸಂಚಾರವನ್ನು ಶಾಸ್ತ್ರದಿಂದ ತಿಳಿದುಕೊಂಡು, ತಾನೇ ನೋಡಿ, ಗುರುಗಳ ಉಪದೇಶವನ್ನು ನೆನಪಿಗೆ ತಂದುಕೊಂಡು ಮತ್ತೆ ಮತ್ತೆ ಪರೀಕ್ಷೆ ಮಾಡಿದರೇ ನಾಡೀಜ್ಞಾನವಾದೀತೆಂದು ಈ ಶ್ಲೋಕ—

ನಾಡೀಂ ವಾಯುಪ್ರವಾಹೇನ ಶಾಸ್ತ್ರಂ ದೃಷ್ಟ್ವಾ ಚ ಬುದ್ಧಿಮಾನ್ ।
ಗುರೂಪದೇಶಂ ಸಂಸ್ಮೃತ್ಯ ಪರೀಕ್ಷೇತ ಮುಹುರ್ಮುಹುಃ ॥ —ಸಂ·]

ದೋಷನಾಡೀಲಕ್ಷಣವು

ವಾತಾದ್ವಕ್ರಗತಾ ನಾಡೀ ಚಪಲಾ ಪಿತ್ತವಾಹಿನೀ ।
ಸ್ಥಿರಾ ಶ್ಲೇಷ್ಮವತೀ ಜ್ಞೇಯಾ ಮಿಶ್ರಿತೇ ಮಿಶ್ರಿತಾ ಭವೇತ್ ॥ ೮೩ ॥

ನಾಡಿಯು ವಾತರೋಗದಲ್ಲಿ ವಕ್ರವಾಗಿಯೂ, ಪಿತ್ತರೋಗದಲ್ಲಿ ಚಂಚಲ ವಾಗಿಯೂ, ಶ್ಲೇಷ್ಮ ರೋಗದಲ್ಲಿ ಸ್ಥಿರವಾಗಿಯೂ, ದ್ವಂದ್ವರೋಗದಲ್ಲಿ ಮಿಶ್ರವಾಗಿಯೂ ಚಲಿಸುವದು.

ವಾತಪಿತ್ತರೋಗನಾಡೀಲಕ್ಷಣವು

ಸರ್ಪಜಲೌಕಾದಿ ಗತಿಂ ವದಂತಿ ವಿದ್ವಾಂಸಃ ಪ್ರಭಂಜನೇ ನಾಡೀಂ ।
ಪಿತ್ತೇ ಚ ಕಾಕಲಾವಕಭೇಕಾದಿಗತಿಂ ವಿದುಃ ಸುಧಿಯಃ ॥ ೮೫ ॥

ವಾತರೋಗದಲ್ಲಿ ನಾಡಿಯು ಹಾವು ಜಿಗಣೆ ಇವುಗಳಂತೆಯೂ, ಪಿತ್ತ ರೋಗದಲ್ಲಿ ನಾಡಿಯು ಕಾಗೆ ಲಾವಕ್ಕಿ ಕಪ್ಪೆ ಇವುಗಳಂತೆಯೂ ನಡಿಯುವದು.

[ನಾಡೀನಿರ್ಣಯದಲ್ಲಿರುವ ಪಾಠ ಕೊಂಚ ಬೇರೆಯಾಗಿದೆ —

ಸರ್ಪಜಲೂಕಾದಿಗತಿಂ ವಿದಂತಿ ವಿಬುಧಾಃ ಪ್ರಭಂಜನೇ ನಾಡಿಂ ।
ಪಿತ್ತೇ ಚ ಕಾಕಲಾವುಕಮಂಡೂಕಾದೇಸ್ತಥಾ ಚಪಲಾಂ ॥ — ಸಂ.]

ಶ್ಲೇಷ್ಮರೋಗನಾಡೀಲಕ್ಷಣವು

ರಾಜಹಂಸಮಯೂರಾಣಾಂ ಪಾರಾವತಕಪೋತಯೋಃ ।
ಕುಕ್ಕುಟಾದಿ ಗತಿಂ ದತ್ತೆ ಧಮನೀ ಕಫಸಂವೃತಾ ॥ ೮೬ ॥

[ಶ್ಲೋಕದ ಉತ್ತರಾರ್ಧ ನಾಡೀನಿರ್ಣಯದಲ್ಲಿ ಹೀಗಿದೆ —

ಕುಕ್ಕುಟಸ್ಯ ಗತಿಂ ಧತ್ತೇ ಧಮನೀ ಕಫಸಂಗಿನೀ ॥ — ಸಂ.]

ಶ್ಲೇಷ್ಮರೋಗದಲ್ಲಿ ನಾಡಿಯು ಹಂಸೆ ನವಿಲು ಪಾರಿವಾಳ ಗುಬ್ಬಚಿ ಕೋಳಿ ಇವುಗಳಂತೆ ನಡಿಯುವದು.

ವಾತಪಿತ್ತರೋಗನಾಡೀಲಕ್ಷಣವು

ಮುಹುಸ್ಸರ್ಪಗತಿರ್ನಾಡೀ ಮುಹುರ್ಭೇಕಗತಿಸ್ತಥಾ ।
ವಾತಪಿತ್ತದ್ವಯೋದ್ಭೂತಾಂ ಪ್ರವದಂತಿ ವಿಚಕ್ಷಣಾಃ ॥ ೮೭ ॥

ವಾತಪಿತ್ತರೋಗದಲ್ಲಿ ನಾಡಿಯು ಅನೇಕಸಾರಿ ಸರ್ಪಗತಿಯುಳ್ಳದ್ದಾಗಿಯೂ, ಬಾರಿಬಾರಿಗೂ ಕಪ್ಪೆಯಂತೆಯೂ ನಡಿಯುವದು.

[ನಾಡೀನಿರ್ಣಯದಲ್ಲಿರುವ ಶ್ಲೋಕ ಇನ್ನಷ್ಟು ಸ್ಪಷ್ಟವಾಗಿದೆ —

ಮುಹುಃಸರ್ಪಗತಿಂ ನಾಡೀ ಮುಹುರ್ಭೇಕಗತಿಂ ತಥಾ ।
ತರ್ಜನೀ ಮಧ್ಯಮಂ ಮಧ್ಯೇ ವಾತಪಿತ್ತೇಽಧಿಕೇ ಸ್ಫುಟಾ ।

ವಕ್ರಮುತ್ಪ್ಲುತ್ಯ ಚಲತಿ ಧಮನೀ ವಾತಪಿತ್ತತಃ ॥ — ಸಂ,]

ವಾತಶ್ಲೇಷ್ಮನಾಡೀಲಕ್ಷಣವು

ಭುಜಗಾದಿಗತಿಸ್ತಸ್ಯಾ ರಾಜಹಂಸಗತಿಸ್ತಥಾ ।
ವಾತಶ್ಲೇಷ್ಮದ್ವಯೋದ್ಭೂತಾಂ ಭಾಷಂತೇ ತದ್ವಿದೋ ಜನಾಃ ॥ ೮೮ ॥

ವಾತಶ್ಲೇಷ್ಮ ನಾಡಿಯು ಹಾವು ರಾಜಹಂಸೆ ಇವುಗಳಂತೆ ನಡಿಯುವದು.

[ನಾಡೀನಿರ್ಣಯದಲ್ಲಿ ಈ ಶ್ಲೋಕವನ್ನು 'ಗ್ರಂಥಾಂತರೇ' ಎಂದು ಕಾಣಿಸಿ ಅದಕ್ಕೆ ಮೊದಲು ಈ ಶ್ಲೋಕವನ್ನು ಕೊಟ್ಟಿದೆ —

ಸರ್ಪ ಹಂಸಗತಿಂ ತದ್ವದ್ವಾತಶ್ಲೇಷ್ಮವತೀಂ ವದೇತ್ ।
ಅನಾಮಿಕಾಯಾಂ ತರ್ಜನ್ಯಾಂ ವ್ಯಕ್ತಾ ವಾತಕಫೇ ಭವೇತ್ ॥

ಅನಾಮಿಕೆ ಮತ್ತು ತರ್ಜನಿ ಎಂಬ ಎರಡು ಬೆರಳುಗಳಿಗೆ ತಿಳಿದು ಬರುವ ನಾಡಿಗಳು ಸರ್ಪದಂತೆ, ಹಂಸದಂತೆ ನಡೆಯುತ್ತಿದ್ದರೆ ಅದು ವಾತ ಮತ್ತು ಶ್ಲೇಷ್ಮಗಳ ವಿಚಾರವನ್ನು ಸೂಚಿಸುವುದೆಂದು ತಿಳಿಯಬೇಕು.—ಸಂ.]

ಪಿತ್ತಶ್ಲೇಷ್ಮನಾಡೀಲಕ್ಷಣವು

ಮಂಡೂಕಾದಿಗತಿಂ ನಾಡೀಂ ಮಯೂರಾದಿಗತಿಂ ತಥಾ ।
ಪಿತ್ತಶ್ಲೇಷ್ಮಸಮುದ್ಭೂತಾಂ ಪ್ರವದಂತಿ ಮನೀಷಿಣಃ

ಸೂಕ್ಷ್ಮಾಶೀತಾ ಸ್ಥಿತಾ ನಾಡೀ ಪಿತ್ತಶ್ಲೇಷ್ಮಸಮುದ್ಭವಾ ॥ ೮೯ ॥

ಪಿತ್ತಶ್ಲೇಷ್ಮ ನಾಡಿಯು ಕಪ್ಪೆ ನವಿಲು ಇವು ಮೊದಲಾದವುಗಳಂತೆ ಚಲಿಸುವದಲ್ಲದೆ ಸೂಕ್ಷ್ಮವಾಗಿಯೂ ಶೀತಳವಾಗಿಯೂ ಇರುವುದು.

[ಮೇಲಿನಂತೆಯೇ, ನಾ ಡೀ ನಿ ರ್ಣ ಯ ವು ಈ ಶ್ಲೋಕವನ್ನು 'ಗ್ರಂಥಾಂತರೇ' ಎಂದು ಕಾಣಿಸಿ, ಅದಕ್ಕೆ ಮುಂಚೆ ಇನ್ನೊಂದು ಶ್ಲೋಕ ವನ್ನು ಕೊಟ್ಟಿದೆ —

ಹರಿಹಂಸ ಗತಿಂ ಧತ್ತೇ ಪಿತ್ತಶ್ಲೇಷ್ಮಾನ್ವಿತಾ ಧರಾ ।
ಮಧ್ಯಮಾನಾಮಿಕಾ ಮಧ್ಯೇ ಸ್ಫುಟಾ ಪಿತ್ತಕಫೇಽಧಿಕೇ ।
ಉತ್ಪ್ಲುತ್ಯ ಮಂದಂ ಚಲತಿ ನಾಡೀ ಪಿತ್ತಕಫೇಽಧಿಕೇ ॥

ಪಿತ್ತ ಮತ್ತು ಕಫಗಳನ್ನು ತಿಳಿಯಲು ಮಧ್ಯಮ ಮತ್ತು ಅನಾಮಿಕೆ ಗಳೆಂಬ ಬೆರಳುಗಳನ್ನು ಬಳಸುವಾಗ ಕುಪ್ಪಳಿಸುವ ಕಪಿಯಂತೆ (ಅಥವಾ ಕಪ್ಪೆಯಂತೆ) ಮತ್ತು ಹಂಸದಂತೆ ಈ ಎರಡು ನಾಡಿಗಳು ನಡೆಯುತ್ತವೆ. ಆದರೆ ಪಿತ್ತಶ್ಲೇಷ್ಮ ವಿಕಾರವಿದ್ದರೆ ಎರಡೂ ಬೆರಳುಗಳ ನಡುವೆ ನಾಡಿಯು ಎಗರಿ ಎಗರಿ ಮಂದವಾಗಿ ನಡೆಯುತ್ತದೆ. — ಸಂ.]

ಪ್ರಕಾರಾಂತರವಾತಶ್ಲೇಷ್ಮನಾಡೀಲಕ್ಷಣವು

ಕಫವಾತೋದ್ಭವಾ ನಾಡೀ ಸರ್ಪಹಂಸಗತಿರ್ಭವೇತ್ ॥ ೯೦ ॥

ವಾತಶ್ಲೇಷ್ಮನಾಡಿಯು ಹಾವು ಅಂಚೆ (ಹಂಸೆ) ಇವುಗಳಂತೆ ನಡಿಯುವದು.

ವಾತಪಿತ್ತಕಫಸನ್ನಿಪಾತನಾಡೀಲಕ್ಷಣವು

ಲಾವತಿತ್ತಿರಿವರ್ತಕಗಮನೇಸನ್ನಿಪಾತಕಃ ।
ಕದಾಚಿನ್ಮಂದಗಾ ನಾಡೀ ಕದಾಚಿಚ್ಛೀಘ್ರಗಾ ಭವೇತ್ ॥
ತ್ರಿದೋಷಪ್ರಭವೇ ರೋಗೇ ವಿಜ್ಞೇಯಾ ಚ ಭಿಷಗ್ವರೈಃ ॥ ೯೧ ॥

ತ್ರಿದೋಷಮಿಶ್ರಿತವಾದ ಸನ್ನಿಪಾತನಾಡಿಯು ಲಾವಗೇಹಕ್ಕಿಯಂತೆಯೂ ತಿತ್ತಿರಿವೇದದ ಪಕ್ಷಿಯಂತ್ಯೆಯೂ ಕೆಂದಲೇ ಹಕ್ಕಿಯುಂತೆಯೂ ಚಲಿಸುವದಲ್ಲದೆ, ಒಂದಾನೊಂದು ಸಮಯದಲ್ಲಿ ಮಂದಗತಿಯಾಗಿಯೂ ಮತ್ತೊಂದುವೇಳೆ ಶೀಘ್ರವಾಗಿಯೂ ನಡಿಯುವದು.

[ಇದನ್ನೂ 'ಗ್ರಂಥಾಂತರೇ' ಎಂದು ಕಾಣಿಸಿ, ನಾಡೀನಿರ್ಣಯವು ಈ ಕೆಳಗಿನ ಶ್ಲೋಕವನ್ನು ಕೊಟ್ಟಿದೆ —

ಕಾಷ್ಠಕುಟ್ಟೋ ಯಥಾ ಕಾಷ್ಠಂ ಕುಟ್ಟತೇ ಚಾತಿವೇಗತಃ ।
ಸ್ಥಿತ್ವಾ ಸ್ಥಿತ್ವಾ ತಥಾ ನಾಡೀ ಸನ್ನಿಪಾತೇ ಭವೇದ್ಧ್ರುವಂ ।
ಅಂಗುಲಿತ್ರಿತಯೇಽಪಿ ಸ್ಯಾತ್ ಪ್ರವ್ಯಕ್ತಾ ಸನ್ನಿಪಾತಕಃ ॥

ಮರಕುಟುಕನಹಕ್ಕಿಯು ಬೇಗ ಬೇಗ, ತಡೆದು ತಡೆದು ಮರವನ್ನು ಕೊಕ್ಕಿನಿಂದ ಕುಟ್ಟುವಂತೆ ನಾಡಿಯು ಮೂರೂ ಬೆರಳುಗಳಿಗೆ ಕಾಣಿಸಿಕೊಂಡರೆ ಅದು ಸನ್ನಿಪಾತದ ಲಕ್ಷಣವೆಂದು ತಿಳಿಯಬೇಕು. — ಸಂ.]

ಅಸಾಧ್ಯರೋಗನಾಡೀಲಕ್ಷಣವು

ಮಂದಂ ಮಂದಂ ಶಿಥಿಲಶಿಥಿಲಂ ವ್ಯಾಕುಲಂ ವ್ಯಾಕುಲಂ ವಾ ।
ಸ್ಥಿತ್ವಾ ಸ್ಥಿತ್ವಾ ವಹತಿ ಧಮನೀ ಯಾತಿ[1] ನಾಶಂ ಚ ಸೂಕ್ಷ್ಮಾ ।
ನಿತ್ಯಂ ತ್ಸ್ವಸ್ಥಾನಾತ್ಸ್ಖಲತಿ[2] ಪುನರಪ್ಯಂಗುಳೀಃ ಸಂಸ್ಪೃಶೇದ್ವಾ ।
ಭಾವೈರೇವಂ ಬಹುವಿಧವಿಧೈ[3] ಸ್ಸನ್ನಿಪಾತೇತ್ವಸಾಧ್ಯಾ ॥ ೯೨ ॥

ಅಸಾಧ್ಯಸನ್ನಿಪಾತದಲ್ಲಿ ನಾಡಿಯು ಅತಿಮಂದವಾಗಿಯೂ ಬಹಳ ಶಿಥಿಲವಾಗಿಯೂ, ಬಹಳ ವ್ಯಾಕುಲವಾಗಿಯೂ, ನಿಂತುನಿಂತು ನಡಿಯುತ್ತಲೂ, ಅತ್ಯಂತಸೂಕ್ಷ್ಮವಾಗಿಯೂ, ನಶಿಸಿದಂತೆಯೂ, ಹಲವು ಸಾರಿ ಸ್ಥಾನಚ್ಯುತಿಯಾಗುತಲೂ, ಅನೇಕಾವರ್ತಿ ಬೆರಳುಗಳಲ್ಲಿಯೂ ಹೀಗೆ ಅನೇಕ ವಿಧವಾಗಿ ನಡಿಯುವದು.

(ಅನ್ಯಚ್ಚ)

ಯಾತ್ಯುಚ್ಚಕಾ ಸ್ಥಿರಾತ್ಯಂತಾ ಚೇಯಂ ಮಾಂಸ ವಾಹಿನೀ ।
ಯಾ ಚ ಸೂಕ್ಷ್ಮಾ ಚ ವಕ್ರಾ ಚ ತಾಮಸಾಧ್ಯಾಂ ವಿದುರ್ಬುಧಾ ॥ ೯೩ ॥

ಅತಿವೇಗವಾಗಿ ಹಾರುತ್ತಲೂ ಬಹಳ ಸ್ಥಿರವಾಗಿಯೂ ಮಾಂಸದಲ್ಲಿ ಸಂಚರಿಸುತ್ತಲೂ ಅತಿಸೂಕ್ಷ್ಮವಾಗಿಯೂ ಅತಿವಕ್ರವಾಗಿಯೂ ಇರುವ ನಾಡಿಯು ಅಸಾಧ್ಯವೆಂದು ತಿಳಿಯಬೇಕು.

(ಅನ್ಯಚ್ಚ)

ಮಹಾದಾಹೇಪಿ ಶೀತತ್ವಂ ಶೀತತ್ವೇ ತಾಪಿತಾ ಸಿರಾ ।
ನಾನಾವಿಧಾ ಗತಿರ್ಯಸ್ಯ ತಸ್ಯ ಮೃತ್ಯುರ್ನಸಂಶಯಃ ॥ ೯೪ ॥

ಯಾವನ ನಾಡಿಯು ಅತ್ಯುಷ್ಣವಾಗಿರುವಾಗ ಅತಿಶೀತಳವಾಗಿಯೂ ಶೀತಳವಾಗಿರುವಾಗ ಅತಿತಾಪವಾಗಿಯೂ ಇರುವದೇ ಅಲ್ಲದೆ ನಾನಾವಿಧ

1. ನಾಡೀನಿರ್ಣಯದ ಪಾಠ 'ಸೂಕ್ಷ್ಮಾ ಚ ಸೂಕ್ಷ್ಮಾ'
2. 'ನಿತ್ಯಂ ಸ್ಪಂದೇತ್ ಸ್ಫುರತಿ' (ಪಾಠಾಂತರ)
3. 'ಬಹುವಿಧತರೈಃ' (ಪಾಠಾಂತರ)

ವಾದ ಗತಿಯುಳ್ಳದ್ದಾಗಿರುವದೋ ಅವನಿಗೆ ಸಂಶಯವಿಲ್ಲದೆ ಮೃತ್ಯುವುಂಟಾಗುವದು.

(ಅನ್ಯಚ್ಚ)

ತ್ರಿದೋಷೇ ಸ್ಪಂದತೇ ನಾಡೀ ಮೃತ್ಯುಕಾಲೇ ಚ ನಿಶ್ಚಲಾ ।
ಜ್ಞೇಯಾ ಸರ್ವವಿಕಾರೇಷು ವೈದ್ಯೈಃ ಕುಶಲಕರ್ಮಭಿಃ ॥ ೯೫ ॥

ನಾಡಿಯು ಸರ್ವದಾ ತ್ರಿದೋಷದಲ್ಲಿ ಚಲಿಸುತ್ತಲೂ ಮೃತ್ಯುಕಾಲವು ಸಮೀಪಿಸಿದಾಗ ನಿಶ್ಚಲನವಾಗಿಯೂ ಇರುವದು. ಇಂಥಾ ಭೇದಗಳನ್ನು ಯೆಲ್ಲಾ ಸನ್ನಿಪಾತಗಳಲ್ಲಿಯೂ ತಿಳಿಯತಕ್ಕದು.

[ಅಸಾಧ್ಯನಾಡಿಯ ಲಕ್ಷಣಗಳನ್ನು ಹೇಳುವ ಮತ್ತೆ ಕೆಲವು ಶ್ಲೋಕಗಳು ನಾಡೀನಿರ್ಣಯದಲ್ಲಿವೆ —

ಸ್ಪಂದತೇ ಚೈಕಮಾನೇನ ತ್ರಿಂಶದ್ವಾರಂ ಯದಾಧರಾ ।
ಸ್ವಸ್ಥಾನೇನ ತದಾ ಯಾನಂ ರೋಗೀ ಜೀವತಿ ನಾನ್ಯದಾ ।
ಸ್ಥಿತ್ವಾ ಸ್ಥಿತ್ವಾ ವಹತಿ ಯಾ ಸಾ ಜ್ಞೇಯಾ ಪ್ರಾಣಘಾತಿನೀ ॥

ಯಾವ ರೋಗಿಯ ನಾಡಿಯು ತೃಟಿಕಾಲದಲ್ಲಿ ಮೂವತ್ತುಬಾರಿ ಒಂದೇ ಗತಿಯಲ್ಲಿ ನಡೆಯುವುದೋ ಆ ರೋಗಿ ಬದುಕುವನು. ಹಾಗಲ್ಲದೆ ನಾಡಿಯು ನಿಂತು ನಿಂತು ಅದೇ ಬಗೆಯಲ್ಲೇ ನಡೆದರೆ ಅದು ಮರಣದ ಸೂಚನೆ.

ಕಂಪತೇ ಸ್ಪಂದತೇಽತ್ಯಂತಂ ಪುನಃಸ್ಪೃಶತಿ ಚಾಂಗುಲೀ ।
ತಾಮಸಾಧ್ಯಾಂ ವಿಜಾನೀಯಾನ್ನಾಡೀಂ ದೂರೇಣ ವರ್ಜಯೇತ್ ॥

ರೋಗಿಯ ನಾಡಿಯು ಒಮ್ಮೊಮ್ಮೆ ನಡುಗುವುದು, ಒಮ್ಮೊಮ್ಮೆ ಜೋರಾಗಿ ಅದುರುವುದು, ಬೆರಳುಗಳಿಗೆ ತಾಕುವುದು ಹೀಗಿದ್ದರೆ ರೋಗವು ಅಸಾಧ್ಯವೆಂದು ತಿಳಿಯಬೇಕು.

ಅತಿಸೂಕ್ಷ್ಮಾತಿವೇಗಾ ಚ ಶೀತಲಾ ಚ ಭವೇದ್ಯದಿ ।
ತದಾ ವೈದ್ಯೋ ವಿಜಾನೀಯಾತ್ ಸ ರೋಗೀ ಕ್ಷಾಯುಷಃಕ್ಷಯೀ ॥

ರೋಗಿಯ ನಾಡಿಯು ತುಂಬ ಸೂಕ್ಷ್ಮವಾಗಿದ್ದರೆ, ತುಂಬ ವೇಗವಾಗಿ ಬಡಿದುಕೊಳ್ಳುತ್ತಿದ್ದರೆ, ತಣ್ಣಗಿದ್ದರೆ, ರೋಗಿಯ ಆಯುಸ್ಸು ಮುಗಿದಿದೆ ಯೆಂದು ವೈದ್ಯನು ತಿಳಿಯಬೇಕು.

ವಿದ್ಯುದ್ವದ್ರೋಗಿಣೋ ನಾಡೀ ದೃಶ್ಯತೇ ನ ಚ ದೃಶ್ಯತೇ ।
ಅಕಾಲವಿದ್ಯುತ್ಪಾತೇವ ಸ ಗಚ್ಛೇದ್ಯಮಸಾದನಂ ॥

ರೋಗಿಯ ನಾಡಿಯು ಮಿಂಚಿನಂತೆ ಒಮ್ಮೆ ಕಂಡು ಮತ್ತೆ ಕಾಣದಾದರೆ, ಅಕಾಲದಲ್ಲಿ ಒದಗುವ ವಿದ್ಯುತ್ಪಾತದಂತೆ, ರೋಗಿಯು ಸಾಯುವನು.

ತಿರ್ಯಗುಷ್ಣಾ ಚ ಯಾ ನಾಡೀ ಸರ್ಪಗಾ ವೇಗವತ್ತರಾ ।
ಕಫಪೂರಿತಕಂಠಸ್ಯ ಜೀವಿತಂ ತಸ್ಯ ದುರ್ಲಭಂ ॥

ಅಡ್ಡಲಾಗಿ ನೋಡಿದಾಗ ನಾಡಿಯು ಬೆಚ್ಚಗಿದ್ದು ಹಾವಿನಂತೆ ಬೇಗ ಬೇಗ ನಡೆಯುತ್ತಿದ್ದರೆ, ಕತ್ತಿನಲ್ಲಿ ಕಫವು ತುಂಬಿಕೊಂಡಿದ್ದರೆ ರೋಗಿಯು ಬದುಕುವುದು ಕಷ್ಟ.

ದೃಶ್ಯತೇ ಚರಣೇ ನಾಡೀ ಕರೇ ನೈವಾಧಿದೃಶ್ಯತೇ ।
ಮುಖಂ ವಿಕಾಸಿತಂ ಯಸ್ಯ ತಂ ದೂರಂ ಪರಿವರ್ಜಯೇತ್ ॥

ನಾಡಿಯು ರೋಗಿಯ ಕಾಲುಗಳಲ್ಲಿ ಕಾಣಿಸಿಕೊಂಡು ಕೈಯಲ್ಲಿ ಕಾಣಿಸದಿದ್ದರೆ, ರೋಗಿಯ ಮುಖವು ಊದಿಕೊಂಡಿದ್ದರೆ ರೋಗಿಯುವ ಸಾಯುನೆಂದು ತಿಳಿಯಬೇಕು. — ಸಂ.]

ಸಾಧ್ಯರೋಗನಾಡೀಲಕ್ಷಣವು

ಪೂರ್ವಂ ಪಿತ್ತಗತಿಂ ಪ್ರಭಂಜನಗತಿಂ ಶ್ಲೇಷ್ಮಾಣಮಾಬಿಭ್ರತೀಂ ।
ಸಂತಾನಭ್ರಮಣಂ[1] ಮುಹುರ್ವಿದಧತೀಂ ಚಕ್ರಾದಿ ರೂಢಾಮಿವ[2] ।

ತ್ರೀತ್ವಂ[3] ದಧತೀ ಕ್ಷಣಾ ಹಿ ಗತಿಕಾಂ ಸೂಕ್ಷ್ಮತ್ವಮಾತನ್ವತೀಂ ।
ನಾಸಾಧ್ಯಾಂ ಧಮನೀಂ ವದಂತಿ ಸುಧಿಯೋ ನಾಡಿಗತಿಜ್ಞಾನಿನಃ ॥೯೬॥

ಗಾಲಿಯ ಮೇಲೆ ಕುಳಿತುಕೊಂಡವನು ಸಂಚರಿಸುವಂತೆ ನಾಡಿಯು ಮೊದಲು ಪಿತ್ತಗತಿಯೂ, ತರುವಾಯ ವಾತಗತಿಯೂ, ಕಡೇಲಿ ಶ್ಲೇಷ್ಮ ಗತಿಯೂ ವುಳ್ಳದ್ದಾಗಿ ಸಂಚರಿಸುತ್ತ, ಸ್ವಲ್ಪ ಹೊತ್ತು ಅತಿತೀವ್ರವಾಗಿಯೂ ಸರ್ಪಗತಿಯುಳ್ಳದ್ದಾಗಿಯೂ ಸ್ವಲ್ಪ ಕಾಲ ಸೂಕ್ಷ್ಮವಾಗಿಯೂ ಚಲಿಸುತ್ತಿದ್ದರೆ ಅಂಥಾ ನಾಡಿಯು ಸಾಧ್ಯನಾಡಿಯೆಂದು ನಾಡೀಜ್ಞಾನವನ್ನರಿತವರು ಪೇಳುವರು.

[ವೈದ್ಯನು ತುಂಬ ಎಚ್ಚರಿಕೆಯಿಂದ, ಕಷ್ಟದಿಂದ ಚಿಕಿತ್ಸೆಮಾಡಬೇಕೆನ್ನುವುದನ್ನೂ, ಹಾಗೆ ಮಾಡಿದರೂ ರೋಗಿಯು ಸಾಯುವ ಸಂಭವವುಂಟೆಂದೂ ಹೇಳುವ ಶ್ಲೋಕ ನಾಡೀನಿರ್ಣಯದಲ್ಲಿದೆ—

ವಾತಪಿತ್ತಕಫಾಶ್ಚಾಪಿ ತ್ರಯೋ ಯಸ್ಯಾಂ ಸಮಾಶ್ರಿತಾಃ ।
ಕೃಚ್ಛ್ರಸಾಧ್ಯಾಂ ಅಸಾಧ್ಯಾಂ ವಾ ಪ್ರಾಹುರ್ವೈದ್ಯವಿಶಾರದಾಃ ॥

---

1. 'ಸ್ವಸ್ಥಾನಾದ್‌ಭ್ರಮಣಂ' ಎಂದಿರಬೇಕು.
2. 'ಚಕ್ರಾಧಿರೂಢೇವ ಯಾ' ಎನ್ನುವುದು ನಾಡೀನಿರ್ಣಯದ ಪಾಠ.
3. ಈ ಪಾದಕ್ಕೆ 'ಭೀಮತ್ವಂ ದಧತೀ ಕದಾಚಿದಪಿ ವಾ ಸೂಕ್ಷ್ಮತ್ವಮಾತನ್ವತೀಂ' ಎಂದು ಪಾಠಾಂತರವಿದೆ.

ತ, ಪಿತ್ತ, ಕಫ ಇದ ರೋಗಿಗೆ ದೇಹದಲ್ಲಿ ತಣಿವಿದ್ದು, ಮುಖದಲ್ಲಿ ಶ್ವಾಸವಿದ್ದು,
ರೋಗವು ಕೃಚ್ಛ್ರಸಾಧ್ಯ ವೇಗಬೇಗ, ದಾಹಯುಕ್ತವಾಗಿ ನಡೆಯುತ್ತಿರುವುದೋ, ಅವನು
ಳುತ್ತಾರೆ. — ಸಂ. ಮಾತ್ರ ಬದುಕುವನೆಂದು ನಾಡಿಯನ್ನು ಬಲ್ಲವರು
. — ಸಂ.]

ನಾಡೀಲಕ್ಷಣವು

ಏಳನೇದಿನ ಮೃತ್ಯುನಾಡೀ ಲಕ್ಷಣವು

ದೇಹಸ್ಯ ಸಂಕ್ರಮಾತ್

ಶಾಂತೇ ಮರಣಂ ಧ್ರುವಗ್ಗಚ್ಛತಿ ವೇಗೇನ ಶಾಂತತಾಂ ಲಭತೇ ಕ್ಷಣಾತ್ ।

ಹಾನ್ಮರಣಂ ತಸ್ಯ ಯದ್ಯಂಗೇ ಶೋಭವರ್ಜಿತಃ ॥ ೯೮ ॥

ಲತೆಯೆಂಬ ನಾಡಿಯ

ರು, ಅಂಥವನು ಮಾವು ಶೋಭೆಯಿಲ್ಲದೆಯಿರುವಾಗಲೇ ನಾಡಿಯು ತನ್ನ ಗತಿತಪ್ಪಿ
ತ್ತು ತೀವ್ರವಾಗಿಯೂ ಸ್ವಲ್ಪ ಹೊತ್ತು ಶಾಂತವಾಗಿಯೂ
ದ್ದರೆ, ಅಂಥಾ ನಾಡಿಯುಳ್ಳವರು ಏಳುದಿನಗಳಲ್ಲಂತಕಾಲಯದ
ವರು.

ರರು ಈ ಶ್ಲೋಕ
ಮ್ಮೆಯೂ, ಹಾವಿನಂ
ಮ್ಮೆಯೂ ನಾಡಿಯನ್ನು ಗ್ರಂಥಾಂತರ ಶ್ಲೋಕವೆಂದು ಕಾಣಿಸಿ, ಅದಕ್ಕೆ ಮೊದಲು
ಯುವನೆಂದು ತಿಳಿಯಶ್ಲೋಕವನ್ನು ನಾಡೀನಿರ್ಣಯ ಕೊಡುತ್ತದೆ—
ಲವಾಗಿ, ಮತ್ತೊಮ್ಮೆ
ಸಾವಿನ ಸೂಚನೆಯೇ ನಾಡೀ ವಹೇತ್ತೀವ್ರಾ ಕದಾಚಿಚ್ಛೀತಲಾ ವಹೇತ್ ।

ತಿ ಪಿಚ್ಛಿಲಸ್ವೇದಃ ಸಪ್ತರಾತ್ರಂ ನ ಜೀವತಿ ॥

ರೋಗಿಯ ವಾತನಾಡಿಯು ತೀವ್ರವಾಗಿ ನಡೆಯುತ್ತ,
ಬಾರಿ ತಣ್ಣಗೆ ಕಾಣಿಸುತ್ತ, ಮೈಯಿಂದ ಬೆವರು ಹರಿಯು
ಕ್ಷಣ'ವೆಂದು ನಾಡೀನಿರೋಗಿಯು ಏಳು ದಿನಗಳೂ ಬದುಕಲಾರ. — ಸಂ.]

ನಾಡೀ ತೀವ್ರಾ, ವಿದಾ

ತೀವಿಜ್ಞಾತೃಭಾಷಿತಂ ॥

ಯಾವ ರೋಗಿಗೆ ದೇಹದಲ್ಲಿ ತಣಿವಿದ್ದು, ಮುಖದಲ್ಲಿ ಶ್ವಾಸವಿದ್ದು, ನಾಡಿಯು ಬೇಗಬೇಗ, ದಾಹಯುಕ್ತವಾಗಿ ನಡೆಯುತ್ತಿರುವುದೋ, ಅವನು ಅರ್ಧತಿಂಗಳು ಮಾತ್ರ ಬದುಕುವನೆಂದು ನಾಡಿಯನ್ನು ಬಲ್ಲವರು ಹೇಳುತ್ತಾರೆ. — ಸಂ.]

ಏಳನೇದಿನ ಮೃತ್ಯುನಾಡೀ ಲಕ್ಷಣವು

ಕ್ಷಣಾದ್ಗಚ್ಛತಿ ವೇಗೇನ ಶಾಂತತಾಂ ಲಭತೇ ಕ್ಷಣಾತ್ ।
ಸಪ್ತಾಹಾನ್ಮರಣಂ ತಸ್ಯ ಯದ್ಯಂಗೇ ಶೋಭವರ್ಜಿತಃ ॥ ೯೮ ॥

ಶರೀರವು ಶೋಭೆಯಿಲ್ಲದೆಯಿರುವಾಗಲೇ ನಾಡಿಯು ತನ್ನ ಗತಿತಪ್ಪಿ ಸ್ವಲ್ಪ ಹೊತ್ತು ತೀವ್ರವಾಗಿಯೂ ಸ್ವಲ್ಪ ಹೊತ್ತು ಶಾಂತವಾಗಿಯೂ ನಡಿಯುತ್ತಿದ್ದರೆ, ಅಂಥಾ ನಾಡಿಯುಳ್ಳವರು ಏಳುದಿನಗಳಲ್ಲಂತಕಾಲಯದ ವೊಕ್ಕಲಾಗುವರು.

[ಇದನ್ನು ಗ್ರಂಥಾಂತರ ಶ್ಲೋಕವೆಂದು ಕಾಣಿಸಿ, ಅದಕ್ಕೆ ಮೊದಲು ಕೆಳಗಿನ ಶ್ಲೋಕವನ್ನು ನಾಡೀನಿರ್ಣಯ ಕೊಡುತ್ತದೆ—

ಮುಖೇ ನಾಡೀ ವಹೇತ್ತೀವ್ರಾ ಕದಾಚಿಚ್ಛೀತಲಾ ವಹೇತ್ ।
ಆಯಾತಿ ಪಿಚ್ಛಿಲಸ್ವೇದಃ ಸಪ್ತರಾತ್ರಂ ನ ಜೀವತಿ ॥

ಯಾವ ರೋಗಿಯ ವಾತನಾಡಿಯು ತೀವ್ರವಾಗಿ ನಡೆಯುತ್ತ, ಒಂದೊಂದು ಬಾರಿ ತಣ್ಣಗೆ ಕಾಣಿಸುತ್ತ, ಮೈಯಿಂದ ಬೆವರು ಹರಿಯುವುದೋ, ಆ ರೋಗಿಯು ಏಳು ದಿನಗಳೂ ಬದುಕಲಾರ. — ಸಂ.]

ನಾಲ್ಕನೆ ದಿನ ಮೃತ್ಯುನಾಡೀ ಲಕ್ಷಣವು

ನಿರೀಕ್ಷ್ಯಾ ದಕ್ಷಿಣೇ ಪಾದೇ ನಾಡೀಮೇಕಾಂ[1] ವಿಶೇಷತಃ ।
ಮುಖೇ ನಾಡೀ ವಹೇನ್ನಿತ್ಯಂ ತದಾ ದಿನಚತುಷ್ಟಯಂ[2] ॥ ೯೯ ॥

ಬಲಗಾಲಿನಲ್ಲೊಂದು ನಾಡಿಯು ಬಹು ತೀವ್ರವಾಗಿ ನಡಿಯುವದೇ ಅಲ್ಲದೆ ಮುಖದಲ್ಲಿಯೂ ನಾಡಿಯು ನಡಿಯುತ್ತಿದ್ದರೆ ಅಂಥವನು ನಾಲ್ಕನೇ ದಿನದಲ್ಲಿ ಮೃತ್ಯುವಶನಾಗುವನು.

[ನಾಡೀನಿರ್ಣಯದಲ್ಲಿ ಇದು 'ಮತಾಂತರ'ವೆಂದು ಸೂಚಿತವಾಗಿ ಅದಕ್ಕೆ ಮೊದಲು ಈ ಶ್ಲೋಕವಿದೆ—

ಪಾದಾಂಗುಳಗತಾ ನಾಡೀ ಕೋಷ್ಣಾ ವೇಗವತೀ ಭವೇತ್ ।
ಚತುರ್ಭಿರ್ದಿವಸೈಸ್ತಸ್ಯ ಮೃತ್ಯುರೇವ ನ ಸಂಶಯಃ ॥

ಯಾವನ ಕಾಲು ಬೆರಳುಗಳಲ್ಲಿರುವ ನಾಡಿಯು ಸ್ವಲ್ಪ ಬೆಚ್ಚಗಿದ್ದು ವೇಗವಾಗಿ ಬಡಿದುಕೊಳ್ಳುತ್ತಿರುವುದೋ ಅವನು ನಾಲ್ಕು ದಿನಗಳಲ್ಲಿ ಸಾಯುವುದು ಖಂಡಿತ. — ಸಂ.]

ಮೂರನೇ ದಿನ ಮೃತ್ಯುನಾಡೀ ಲಕ್ಷಣವು

ಹಿಮವದ್ವಿಶದಾ ನಾಡೀ ಜ್ವರದಾಹೇನ ತಾಪಿನಾಂ ।
ತ್ರಿದೋಷಸ್ಪರ್ಶಭಜತಾಂ ತದಾ ಮೃತ್ಯುರ್ದಿನತ್ರಯಾತ್ ॥ ೧೦೦ ॥

ಬಹಳ ಕ್ರೂರವಾದ ಜ್ವರವುಂಟಾಗಿರುವಾಗ ನಾಡಿಯು ಮಂಜಿನ ಗಡ್ಡೆಯಂತೆ ಶೀತಳವಾಗಿ ಇರುವದೇ ಅಲ್ಲದೆ, ತ್ರಿದೋಷಸ್ಪರ್ಶಸಂಬಂಧವೂ ಉಂಟಾಗಿದ್ದರೆ ಅಂಥವನು ಮೂರನೇ ದಿನದಲ್ಲಿ ಯಮಾಲಯವಂ ಪೊಕ್ಕುವನು.

---

1. 'ಯದಾ ಚೈಷಾ' 2. ತತಸ್ತುದಿನತುರ್ಯಕಂ

[ನಾಡೀನಿರ್ಣಯದಲ್ಲಿರುವ ಶ್ಲೋಕಗಳು ಹೀಗಿವೆ —

ಮುಖೇ ನಾಡೀ ಯದಾ ಸಾಸ್ತಿ ಮಧ್ಯೇ ಶೈತ್ಯಂ ಬಹಿಃ ಕ್ಲಮಃ ।
ಯದಾ ಮಂದಾ ವಹೇನ್ನಾಡೀ ತ್ರಿರಾತ್ರಂ ನೈವ ಜೀವತಿ ॥

ವಾತನಾಡಿಯು ಕದಲದೆ, ಒಳಗೆ ತಣ್ಣಗಿದ್ದು ಹೊರಗೆ ಮಂದವಾಗಿ ನಡೆಯುತ್ತಿದ್ದರೆ, ಆ ರೋಗಿಯು ಮೂರು ದಿನಗಳೂ ಬದುಕಲಾರ.

ಎರಡನೆಯ ದಿನ ಸಾಯುವ ರೋಗಿಯ ನಾಡಿ ಹೇಗಿರುವುದೆಂದು ಇಲ್ಲಿಯೇ ಮೂರು ಶ್ಲೋಕಗಳಿವೆ—

ಶೀಘ್ರಾ ನಾಡೀ ಮಲೋಪೇತಾ ಶೀತಲಾ ವಾಥ ದೃಶ್ಯತೇ ।
ದ್ವಿತೀಯೇ ದಿವಸೇ ಮೃತ್ಯುರ್ನಾಡೀವಿಜ್ಞಾತ್ರ ಭಾಷಿತಂ ॥

ಯಾವನ ನಾಡಿಯು ಬೇಗ ಬೇಗ ನಡೆಯುತ್ತಿದ್ದು, ದೋಷದಿಂದ ಎಂದರೆ ಬೆವರಿನಿಂದ ಕೂಡಿ, ತಣ್ಣಗಿರುವುದೋ ಅಥವಾ ಕಾಣುವುದೇ ಇಲ್ಲವೋ, ಆ ರೋಗಿಯು ಎರಡನೆಯ ದಿನ ಸಾಯುವನು.

ಸ್ಥಿರನಾಡೀ ಭವೇದ್ಯಸ್ಯ ವಿದ್ಯುದ್ಯುತಿರಿವೇಕ್ಷತೇ ।
ದಿನೈಕಂ ಜೀವಿತಂ ತಸ್ಯ ದ್ವಿತೀಯೇ ಮೃತ್ಯುರೇವ ಚ ॥

ಯಾವ ರೋಗಿಯ ನಾಡಿಯು ಬಹುಕಾಲ ಸ್ಥಿರವಾಗಿದ್ದು, ಮಿಂಚಿನಂತೆ ಕಾಣುವುದೋ ಅವನು ಬದುಕುವುದು ಒಂದೇ ದಿನ ; ಮಾರನೆಯ ದಿನ ಅವನು ಸಾಯುವನು.

ಶೀಘ್ರನಾಡೀ ಮಲೋಪೇತಾ ಮಧ್ಯಾಹ್ನೇಽಗ್ನಿಸಮೋ ಜ್ವರಃ ।
ದಿನೈಕಂ ಜೀವಿತಂ ತಸ್ಯ ದ್ವಿತೀಯೇಽಹನಿ ಮ್ರಿಯತೇ ಚ ಸಃ ॥

ಯಾವನ ನಾಡಿಯು ವೇಗವಾಗಿ ಬಡಿದುಕೊಳ್ಳುತ್ತ ಮಲದಿಂದ ಕೂಡಿರುವುದೋ, ಯಾವನಿಗೆ ಮಧ್ಯಾಹ್ನದಂದು ಕೆಂಡದಂಥ ಜ್ವರ ಕಾಯುವುದೋ ಅವನ ಆಯಸ್ಸು ಒಂದೇ ದಿನ. — ಸಂ.]

ಹನ್ನೆರಡು ಝಾವಗಳ ಮೃತ್ಯುನಾಡೀ ಲಕ್ಷಣವು

ಗತಿಂ ಭ್ರಮರಕಸ್ಯೇವಾವಚ್ಛೇದಕದಿನೇನ ತು ।
ಸ್ಕಂಧೇ ಚ ಸ್ಪಂದತೇ ನಿತ್ಯಂ ಪುನರ್ನ್ನಗತಿ ಚಾಂಗುಳೌ[1] ॥ ೧೦೧ ॥

ಮಧ್ಯೇ ದ್ವಾದಶ ಯಾಮಾನಾಂ ಮೃತ್ಯುರೇವ ನ ಸಂಶಯಃ ॥

ನಾಡಿಯು ಝಯ್ಯೆಂತ ಭ್ರಮರದಂತೆ ಓಡುತ್ತಲೂ ಭುಜಗಳೊಳಗೂ ಅಂಗುಳಗಳೊಳಗೂ ಚಲಿಸುತ್ತಲೂ ಯಾರಿಗೆ ಇರುತ್ತದೋ ಅಂಥವರು ಹನ್ನೆರಡು ಝಾವಗಳಲ್ಲಿ ಯಮಾಲಯವನ್ನು ಪ್ರವೇಶಿಸುವರು.

ದಿನಾಂತ ಮೃತ್ಯುನಾಡೀ ಲಕ್ಷಣವು

ಸ್ಥಿತ್ವಾ ನಾಡೀ ಮುಖೇ ಯಸ್ಯ ವಿದ್ಯುಜ್ಯೋತಿರಿವೇಕ್ಷ್ಯತೇ ।
ದಿನೈಕಂ ಜೀವಿತಂ ತಸ್ಯ ದ್ವಿತೀಯೇ ಮರಣಂ ಭವೇತ್ ॥ ೧೦೨ ॥

ಮಳೆಗಾಲದಲ್ಲಿ ಮಿಂಚು ಹೊಳೆಯುವಂತೆ ಮುಖದಲ್ಲಿ ನಾಡಿಯು ನಿಂತು ನಿಂತು ಬಹಳ ತೀವ್ರಗತಿಯುಂಟಾದ್ದಾಗಿದ್ದರೆ ಅಂಥವನು ಒಂದು ದಿನ ಜೀವಂತವಾಗಿದ್ದು ಮಾರನೇದಿನ ಮೃತ್ಯುವಶನಾಗುವನು.

[ದಿನ ಕಳೆಯುವುದರೊಳಗೇ ಸಾವು ಸಂಭವಿಸುವುದನ್ನು ಸೂಚಿಸುವ ನಾಡಿಯನ್ನು ಕುರಿತು ಈ ಶ್ಲೋಕವಿದೆ—

ಮರಣೇ ಡಮರುಕಾಕಾರಾ ಭವೇದೇಕ ದಿನೇನ ಚ ।

ನಾಡಿಯು ಡಮರುವಿನಂತೆ ಬಡಿದುಕೊಳ್ಳುತ್ತಿದ್ದರೆ, ಅವನ ಆಯಸ್ಸು ಒಂದೇ ದಿನ. —ಸಂ.]

---

1. 'ಪುನರ್ಗಚ್ಛತಿ ಚಾಂಗುಳೌ' ಎಂಬ ಪಾಠಾಂತರ (ನಾವಿ);
'ಪುನರ್ನಲಗತಿ ನಾಂಗುಳೌ' ಎಂಬುದಿನ್ನೊಂದು ಪಾಠ (ನಾದ).

ಜ್ವಾಲಾವಧಿ ಮೃತ್ಯು ಲಕ್ಷಣವು

ಸ್ವಸ್ಥಾನವಿಚ್ಯುತಾ ನಾಡೀ ಯದಾ ವಹತಿ ವಾ ನವಾ ।
ಜ್ವಾಲಾ ಚ ಹೃದಯೇ ತೀವ್ರಂ ತದಾ ಜ್ವಾಲಾವಧಿಸ್ಥಿತಿಃ ॥ ೧೦೪ ॥

ಕಥವಮೂಲದಲ್ಲಿ ನಾಡಿಗಳು ಸ್ವಸ್ಥಾನವಂ ಬಿಟ್ಟು ಬೇರೆ ವೊಂದು ಸ್ಥಳದಲ್ಲಿ ನಾಡಿಯು ಸಂಚರಿಸುತ್ತಲೂ ಸಂಚರಿಸದೇಲೂ ಇರುವದಲ್ಲದೆ ಹೃದಯದಲ್ಲಿ ತೀವ್ರವಾಗಿ ಉರಿಯೂ ವುಂಟಾಗಿದ್ದರೆ ಅಂಥವನಾ ವುರಿಯು ನಿಲ್ಲುವವರಿಗೂ ಜೀವಂತನಾಗಿದ್ದು ತರುವಾಯ ಕೃತಾಂತನಾಲಯುವಂ ಪೋಗುವನು.

ಝಾವಾರ್ಧದ ಮೃತ್ಯುನಾಡೀ ಲಕ್ಷಣವು

ಅಂಗುಷ್ಠಮೂಲತೋ ಬಾಹ್ಯೇ ದ್ವ್ಯಂಗುಳೇ ಯದಿ ನಾಡಿಕಾ ।
ಪ್ರಹರಾರ್ಧಾದ್ಬಹಿರ್ಮೃತ್ಯುಂ ಜಾನೀಯಾಚ್ಚ ವಿಚಕ್ಷಣಃ ॥ ೧೦೫ ॥

ಅಂಗುಷ್ಠಮೂಲದಲ್ಲಿರುವ ನಾಡಿಗಳು ಆ ಸ್ಥಾನಗಳನ್ನು ಬಿಟ್ಟು ಎರಡಂಗುಳಗಳ ಕೆಳಗೆ ಮಧ್ಯಮಾನಾಮಿಕೆಗಳಲ್ಲಿ ನಡಿಯುತ್ತಿದ್ದರೆ ಅಂಥವನು ಅರ್ಧ ಝಾವದೊಳು ಮೃತ್ಯುವಶನಾಗುವನು.

ಸಾರ್ಧದ್ವಯಾಂಗುಳಾದ್ಬಾಹ್ಯೇ ಯದಿ ತಿಷ್ಠತಿ ನಾಡಿಕಾ ।
ಪ್ರಹರೈಕಾದ್ಬಹಿರ್ಮೃತ್ಯುಂ ಜಾನೀಯಾಚ್ಚ ವಿಚಕ್ಷಣಃ ॥ ೧೦೬ ॥

ಅಂಗುಷ್ಠಮೂಲದಲ್ಲಿರುವ ನಾಡಿಗಳು ಆ ಸ್ಥಾನವನ್ನು ಬಿಟ್ಟು ಎರಡೂವರೆ ಅಂಗುಳಗಳ ಕೆಳಗೆ ಅನಾಮಿಕೆಯು ನರದೊಂದಿಗೆ ಸೇರಿ ನಡಿಯುತ್ತಿದ್ದರೆ ಅಂಥವನು ಅರ್ಧಝಾವದಲ್ಲಿ ಮೃತ್ಯುವಶನಾಗುವನೆಂದು ಕೆಲವರೆನ್ನುವರು.

[ನಾಡೀದರ್ಪಣದಲ್ಲಿ ಇದೊಂದು ಶ್ಲೋಕವಿದೆ—

ಚಲಾಚಲಿತವೇಗಾ ಚ ನಾಸಿಕಾಧಾರಸಂಯುತಾ ।
ಶೀತಲಾ ದೃಶ್ಯತೇ ಯಾ ಚ ಯಾಮಮಧ್ಯೇ ಚ ಮೃತ್ಯುದಾ ॥

ಯಾವನ ನಾಡಿಯು ಮೂಗಿನಿಂದ ನಡೆಯುವ ಉಸಿರಾಟಕ್ಕೆ ಸರಿಯಾಗಿ ಬಡಿದುಕೊಳ್ಳುತ್ತ, ತಣ್ಣಗೆ ಕಾಣುವುದೋ ಅವನು ಅರ್ಧಜಾವದಲ್ಲೇ ಸಾಯುವನು.

ಇಲ್ಲಿನ 'ಚಲಾಚಲಿತ ವೇಗಾ' ಎಂಬುದಕ್ಕೆ ಬದಲಾಗಿ ಯೋಗರತ್ನಾಕರವು 'ಚೇಲಾಂಚಲಿತವೇಗಾ' (ಎಂದರೆ ಗಾಳಿಯಿಂದ ಆಡುತ್ತಿರುವ ಬಾವುಟದ ಬಟ್ಟೆಯ ತುದಿಯಂತೆ) ಎನ್ನುವ ಪಾಠವನ್ನು ಕೊಟ್ಟಿದೆ. —ಸಂ.]

ಸಾರ್ಧಪ್ರಹರ ಮೃತ್ಯುನಾಡೀ ಲಕ್ಷಣವು

ದ್ವ್ಯಂಗುಳಾದ್ಬಾಹ್ಯತೋ ನಾಡೀ ಮಧ್ಯೆ ರೇಖಾ ಬಹಿರ್ಯದಾ ।
ಸಾರ್ಧಪ್ರಹರಕಾನ್ಮೃತ್ಯುರ್ಜಾಯತೇ ನಾತ್ರ ಸಂಶಯಃ ॥ ೧೦೭ ॥

ನಾಡಿಯು ತರ್ಜನೀ ಮಧ್ಯಮಾಂಗುಳಗಳನ್ನು ಬಿಟ್ಟು ಅನಾಮಿಕದಲ್ಲಿ ಮಾತ್ರ ಸಂಚರಿಸುತ್ತ ಅದಕ್ಕೆ ಕೆಳಗಡೆ ರೇಖಾಕಾರವಾಗಿ ಸ್ಪ್ರುಶಿಸುತ್ತಿದ್ದರೆ ಅಂಥಾ ನಾಡಿಯುಳ್ಳವನು ಒಂದೂವರೆ ಜಾವದೊಳಗೆ ಮೃತ್ಯುವಶನಾಗುವನು.

ಆರನೆ ಝಾವದ ಮೃತ್ಯುನಾಡೀ ಲಕ್ಷಣವು

ಮಧ್ಯೇ ರೇಖಾಸಮಾ ನಾಡೀ ಯದಿ ತಿಷ್ಠತಿ ನಿಶ್ಚಲಾ ।
ಷಡ್ಭಿಸ್ತು ಪ್ರಹರೈಸ್ತಸ್ಯ ಮೃತ್ಯುರ್ಜ್ಞೇಯೋ ವಿಚಕ್ಷಣೈಃ ॥ ೧೦೮ ॥

ಅಂಗುಷ್ಠ ಮೂಲದಲ್ಲಿರುವ ನಾಡಿಗಳೆಲ್ಲವೂ ಮಧ್ಯಮಾಂಗುಳಿಯ ನರದಲ್ಲಿ ಸೇರಿ ಸೂಕ್ಷ್ಮವಾಗಿ ಚಲಿಸುತ್ತಿದ್ದರೆ ಅಂಥವನು ಆರು ಝಾವಗಳಲ್ಲಿ ಮೃತ್ಯುವಶನಾಗುವನು.

ಪುನಸ್ತೃತೀಯ ದಿವಸದೊಳು ಮೃತ್ಯುನಾಡೀ ಲಕ್ಷಣವು

ಪಾದಾಂಗುಳಗತಾ ನಾಡೀ ಚಂಚಲಾ ಯದಿ ಗಚ್ಛತಿ ।
ತ್ರಿಭಿಶ್ಚ ದಿವಸೈಸ್ತಸ್ಯ ಮೃತ್ಯುರೇವ ನ ಸಂಶಯಃ ॥ ೧೯ ॥

ಯಾರಿಗೆ ಪಾದಾಂಗುಳದಲ್ಲಿ ನಾಡಿಗಳು ಬಹು ಚಂಚಲವಾಗಿ ನಡಿಯುತ್ತಿರುವದೋ ಅಂಥವನು ಮೂರು ದಿನಗಳಲ್ಲಿ ಮೃತ್ಯುವಿನ ಪಾಲಾಗುವನು.

ಚತುರ್ಥ ದಿವಸ ಮೃತ್ಯುನಾಡೀ ಲಕ್ಷಣವು

ಪಾದಾಂಗುಳಗತಾ ನಾಡೀ ಕೋಷ್ಣಾ ವೇಗವತೀ ಭವೇತ್ ।
ಚತುರ್ಭಿರ್ದಿವಸೈಸ್ತಸ್ಯ ಮೃತ್ಯುರೇವ ನ ಸಂಶಯಃ ॥ ೧೧೦ ॥

ಯಾರಿಗೆ ನಾಡಿಗಳು ಪಾದಾಂಗುಳಗತಂಗಳಾಗಿ, ಸ್ವಲ್ಪ ವುಷ್ಣದಿಂದೊಡಗೂಡಿ, ವೇಗವಾಗಿ ನಡಿಯುತ್ತಿರುವದೊ ಅಂಥವನು ನಾಲ್ಕು ದಿನಗಳಲ್ಲಿ ಮೃತಿಯುನ್ನು ಹೊಂದುವನು.

ಐದನೇ ದಿವಸದ ಮೃತ್ಯುನಾಡೀ ಲಕ್ಷಣವು

ಪಾದಾಂಗುಳಗತಾ ನಾಡೀ ಮಂದಮಂದಾ ಯದಾ ಭವೇತ್ ।
ಪಞ್ಚಭಿರ್ದಿವಸೈಸ್ತಸ್ಯ ಮೃತ್ಯುರ್ಭವತಿ ನಾನ್ಯಥಾ ॥ ೧೧೧ ॥

ಪಾದಾಂಗುಳಗತವಾದ ನಾಡಿಯು ಮಂದವಾಗಿ ನಡಿಯುತ್ತಿದ್ದರೆ ಅಂಥವನು ಐದು ದಿನಗಳಲ್ಲಿ ಲೋಕಾಂತರಕ್ಕೆ ಹೋಗುವನು.

ಏವಂ ಸಂಖ್ಯಾದಿ ಭೇದೇನ ನಾಡೀ ಜ್ಞೇಯಾ ವಿಚಕ್ಷಣೈಃ ।
ಸ್ವರ್ಗೇಪಿ ದುರ್ಲಭಾ ವಿದ್ಯಾ ಗೋಪನೀಯಾ ಪ್ರಯತ್ನತಃ ॥೧೧೨ ॥

ಹೀಗೆ ನಾಡೀಗತಿಜ್ಞಾನವನ್ನು ವಿಚಕ್ಷಣರ ಮೂಲಕವಾಗಿ ತಿಳಿಯತಕ್ಕದ್ದು. ಸಂಖ್ಯಾದಿ ಭೇದದಿಂದ ಇದು ಸ್ವರ್ಗದಲ್ಲಿ ದೊರಿಯದಾದ್ದರಿಂದ ಇದನ್ನು ಬಹಳ ಗೋಪ್ಯವಾಗಿಡತಕ್ಕದ್ದು.

ಅಭಿಘಾತಾದಿ ರೋಗಗಳಲ್ಲಿ ನಡಿಯುವ ನಾಡಿಯು

ಭಾರಪ್ರವಾಹ ಮೂರ್ಛಾ ಭಯಶೋಕ ಪ್ರಮುಖಕಾರಣಾನ್ನಾಡೀ ।
ಸಂಮೂರ್ಛಿತಾಪಿ ಗಾಢಂ ಪುನರಪಿ ಸಾ ಜೀವಿತಂ ಧತ್ತೇ ॥ ೧೧೩ ॥

ಭಾರ ಹೊರುವದು, ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುವದು, ಮೂರ್ಛೆಹೊಂದುವದು, ಭಯಪಡುವದು, ದುಃಖಪಡುವದು, ಈ ಮೊದಲಾದ ಕಾರ್ಯಗಳನ್ನು ಮಾಡುವದರಿಂದ ನಾಡಿಯು ಬಹಳ ಗಾಢವಾಗಿಯೂ ಸ್ತಬ್ಧವಾಗಿಯೂ ಇರುವದು. ಆದರೆ ಇಂಥಾ ನಾಡೀಗತಿಯುಳ್ಳವನು ಜೀವಂತನಾಗಿರುವನು.

ಪತಿತಸ್ಸಂಧಿತೋ[1] ಭೇದೀ ನಷ್ಟಶುಕ್ರಶ್ಚ ಯೋ ಭವೇತ್ ।
ಶಾಮ್ಯತೇ ವಿಸ್ಮಯಸ್ತಸ್ಯ ನ ಕಿಂಚಿನ್ಮೃತ್ಯುಕಾರಣಂ ॥ ೧೧೪ ॥

ವೃಕ್ಷಾದಿ ಉನ್ನತ ಪ್ರದೇಶಗಳಿಂದ ಕೆಳಗೆ ಬಿದ್ದವನು, ಅಸ್ತ್ರಾದಿಗಳಿಂದ ಮರ್ಮಭೇದಿಸಲ್ಪಟ್ಟವನು, ಶುಕ್ಲನಷ್ಟವಾದವನು, ಇಂಥವರಿಗೆ ನಾಡಿಯು ಮೃತ್ಯು ಸಮೀಪಿಸಿದವನಿಗೆ ನಡಿಯುವ ನಾಡಿಯಂತೆ ನಡಿಯುತ್ತಿರುವದು. ಆದರೆ ಅಂಥಾ ನಾಡಿಯುಳ್ಳವನಿಗೆ ಪ್ರಾಣಭಯವಿಲ್ಲ.

ಭೂತಾಭಿಷಂಗಜ್ವರನಾಡೀ ಲಕ್ಷಣವು

ತಥಾ ಭೂತಾಭಿಷಂಗೇ ಹಿ ತ್ರಿದೋಷವದುಪಸ್ಥಿತಾ ।
ಸಮಾಂಗಾ ವಹತೇ ನಾಡೀ ತಥಾ ನ ಚ ಕ್ರಮಂಗತಾ ॥ ೧೧೫ ॥

ಭೂತಾಭಿಷಂಗವುಳ್ಳವನ ನಾಡಿಯು ತ್ರಿದೋಷನಾಡಿಯಂತೆ ವಾತಪಿತ್ತ ಶ್ಲೇಷ್ಮಗಳು ಸಂಕಲಿತವಾಗಿ ಸಮಾಕಾರವಾಗಿ ನಡಿಯುತ್ತಿರುವದು.

1. 'ಪತಿತಃ ಸಂಧಿತೋ ಭೇದೀ' ಎನ್ನುವುದಕ್ಕೆ ಕಣಾದಕೃತ ನಾಡೀವಿಜ್ಞಾನದ ವ್ಯಾಖ್ಯಾನಕಾರರು "ಎತ್ತರವಾದ ಪ್ರದೇಶದಿಂದ ಬಿದ್ದವನು, ಕೈಕಾಲು ತೊಡೆಗಳನ್ನು ಮುರಿದುಕೊಂಡವನು, ಅತಿಸಾರ ರೋಗವುಳ್ಳವನು" ಎಂದು ಅರ್ಥಮಾಡಿದ್ದಾರೆ.

ರೋಗರಹಿತಾಪಮೃತ್ಯು ಲಕ್ಷಣವು

ಅಪಮೃತ್ಯುರ್ನ ರೋಗಾಶ್ಚ ನಾಡೀ ತತ್ಸನ್ನಿಪಾತವತ್ ॥ ೧೧೬ ॥

ರೋಗರಹಿತವಾಗಿರುವಾಗ ಅಪಮೃತ್ಯುವಶವಾಗುವವನ ನಾಡಿಯು ಸನ್ನಿಪಾತನಾಡಿಯಂತೆ ನಡಿಯುತ್ತಿರುವದು.

ಶೋಕ ಹಿಮಗಳಿಂದ ನಿಶ್ಚಲವಾಗಿರುವ ನಾಡೀಲಕ್ಷಣವು

ಸ್ವಸ್ಥಾನಹೀನೇ[1] ಶೋಕೇ ಚ ಹಿಮಾಕ್ರಾಂತೇ ಚ ನಿರ್ಗತಾಃ ।
ಭವಂತಿ ನಿಶ್ಚಲಾ ನಾಡ್ಯೋ ನ ಕಿಂಚಿತ್ತತ್ರ ದೂಷಣಂ ॥ ೧೧೭ ॥

ವ್ಯಸನವನ್ನು ಹೊಂದಿದವನು, ಮಂಜಿನಲ್ಲಿ ಸಂಚರಿಸುವವನು, ಇವರ ನಾಡಿಯು ಸ್ವಸ್ಥಾನದಿಂದ ಚ್ಯುತಿಯಾಗಿ ನಿಶ್ಚಲವಾಗಿರುವದು. ಹಾಗಿದ್ದರೂ ಅವನಿಗೆ ದೋಷಹುಟ್ಟದೇ ಇರುವದು.

ದುಷ್ಟಪಿತ್ತ ನಾಡೀಲಕ್ಷಣವು

ಸ್ತೋಕಂ ವಾತಕಫಂ ದುಷ್ಟಂ ಪಿತ್ತಂ ವಹತಿ ದಾರುಣಂ ।
ಪಿತ್ತಸ್ಥಾನಂ ವಿಜಾನೀಯಾದ್ಭೇಷಜಂ ತಸ್ಯ ಕಾರಯೇತ್ ॥ ೧೧೮ ॥

ದುಷ್ಟಪಿತ್ತ ದೋಷದಿಂದ ವಾತಶ್ಲೇಷ್ಮನಾಡಿಗಳು ಬಹಳ ಅಲ್ಪಗಳಾಗುವವು. ಪಿತ್ತನಾಡಿಯು ದಾರುಣವಾಗಿಯೂ ನಡಿಯುತಿರುವದು. ಆದ್ದರಿಂದ ಇವಂ ತಿಳಿದುಕೊಂಡು ವೈದ್ಯನು ಚಿಕಿತ್ಸೆಯಂ ಮಾಡಬೇಕು.

ಸಾಧ್ಯನಾಡೀಲಕ್ಷಣವು

ಸ್ವಸ್ಥಾನಚ್ಯವನಂ ಯಾವದ್ಧಮನ್ಯಾ ನೋಪಜಾಯತೇ ।
ತತ್ಸಚಿಹ್ನಸ್ಯ ಸತ್ವೇಪಿ ನಾಸಾಧ್ಯತ್ವಮಿತಿ ಸ್ಥಿತಿಃ ॥ ೧೧೯ ॥

---

1. ಇದಕ್ಕೆ ನಾಡೀದರ್ಪಣ ವ್ಯಾಖ್ಯಾನದಲ್ಲಿ "ತಾನಿರುವೆಡೆಯಿಂದ ಕೆಳಗೆಬಿದ್ದ ಸಮಯದಲ್ಲಿ" ಎಂದು ಅರ್ಥ ಹೇಳಿದೆ. ಇದೇ ಅರ್ಥ ಕಣಾದಕೃತ ನಾಡೀವಿಜ್ಞಾನ ವ್ಯಾಖ್ಯಾನದಲ್ಲಿಯೂ ಹೇಳಿದೆ.

ಸ್ವಸ್ಥಾನದಿಂದ ನಾಡಿಯು ಚ್ಯುತವಾಗದೆ ಯಿರುವವನ ರೋಗವು ಸಾಧ್ಯವೆಂತಲೂ ನಾಡಿಗೆ ಸ್ವಸ್ಥಾನಚ್ಯುತಿಯುಂಟಾದರೆ ಅಂಥವನ ರೋಗ ವಸಾಧ್ಯವೆಂತಲೂ ತಿಳಿಯತಕ್ಕದ್ದು.

ಧಾತುಪ್ರಾಪ್ತ ನಾಡೀಲಕ್ಷಣವು

ಯದಾ ಯಂ ಧಾತುಮಾಪ್ನೋತಿ ತದಾ ನಾಡೀ ತಥಾ ಗತಿಃ ।
ತಥಾ ಹಿ ಸುಖಸಾಧ್ಯತ್ವಂ ನಾಡೀಜ್ಞಾನೇನ ಬುಧ್ಯತೇ ॥ ೧೨೦ ॥

ವಾತಪಿತ್ತಶ್ಲೇಷ್ಮ ನಾಡಿಗಳಲ್ಲಿ ಯಾವ ಧಾತುವನ್ನು ಯಾವ ಕಾಲದಲ್ಲಿ ನಾಡಿಯು ಆಶ್ರಯಿಸಿರುವದೋ ಆ ಕಾಲಗತಿಯೇ ಅವಕ್ಕೂ ವುಂಟಾಗಿರು ವದರಿಂದ ಆ ನಾಡೀಜ್ಞಾನದಿಂದ ಆಯಾ ರೋಗಾನುಸಾರವಾಗಿ ತಕ್ಕ ಚಿಕಿತ್ಸೆ ಗಳಂ ಮಾಡಬೇಕು.

ಸದೋಷ ನಿರ್ದೋಷ ನಾಡೀಲಕ್ಷಣವು

ನಾಡೀ ಯಥಾ ಕಾಲಗತಿಸ್ತ್ರಯಾಣಾಂ
ಪ್ರಕೋಪಶಾನ್ತ್ಯಾದಿಭಿರೇವ ಭೂಯಃ ।
ವಾತಾದಿದೋಷೇ ಚ ಭವೇತ್ಪ್ರಕೋಪಾ
ಸ್ಥೂಲಾಲ್ಪಗಾ ಪಾಶನಿಯಂತ್ರಿತೇ ಸ್ಯಾತ್ ॥ ೧೨೧ ॥

ನಾಡಿಯು ಸದಾ ವಾತಪಿತ್ತಶ್ಲೇಷ್ಮಯುಕ್ತವಾಗಿರುವದು. ಮತ್ತು ನಾಡಿಯು ವಾತಾದಿರೋಗಗಳಲ್ಲಿ ಪ್ರಕೋಪವಾಗಿಯೂ ರೋಗವಿಲ್ಲದಾಗ ಶಾಂತತ್ವವನ್ನು ಹೊಂದಿ ಯಥಾರೀತಿಯಾಗಿಯೂ ವಾತಾದಿದೋಷದಲ್ಲಿ ರೋಗಯುಕ್ತವಾಗಿ ಪ್ರಕೋಪವಾಗಿಯೂ ವಾತಾದಿಬದ್ಧದಲ್ಲಿ ಸ್ಥೂಲ ವಾಗಿಯೂ ಅಲ್ಪವಾಗಿಯೂ ನಡಿಯುತ್ತಿರುವದು.

ಎಳ್ಳೆಣ್ಣೆ, ಬೆಲ್ಲ, ಉದ್ದು, ಹಾಲು, ಜೇನುತುಪ್ಪ, ಇವುಗಳನ್ನು ಸೇವಿಸುವವನಿಗಿರುವ ನಾಡೀಲಕ್ಷಣವು

ಪುಷ್ಟಿಸ್ತೈಲೇ ಗುಡಾಹಾರೇ ಮಾಷೇ ಚ ಲಗುಡಾಕೃತಿಃ ।
ಕ್ಷೀರೇ ಚ ಸ್ತಿಮಿತಾ ವೇಗಾ ಮಧುರೇ ಭೇಕವದ್ಗತಿಃ ॥ ೧೨೨ ॥

ಯೆಂಣೆಯನ್ನು ಸೇವಿಸಿರುವವನ ನಾಡಿಯು ಪುಷ್ಟಿಯಾಗಿಯೂ, ಬೆಲ್ಲ ಉದ್ದು ಇವುಗಳನ್ನು ಭುಜಿಸುವವನ ನಾಡಿಯು ದೋಣೆಯಂತೆ ನೆಟ್ಟಗೂ ನಡಿಯುತ್ತಿರುವದು. ಹಾಲು ಕುಡಿದಿರುವವನ ನಾಡಿಯು ಸ್ತಿಮಿತವಾಗಿಯೂ, ನಿಂತು ನಿಂತು, ವೇಗವಾಗಿಯೂ ನಡಿಯುತ್ತಿರುವದು. ಜೇನುತುಪ್ಪ ಕುಡಿದಿರುವವನ ನಾಡಿಯು ಮಂಡೂಕ ಅಂದರೆ ಕಪ್ಪೆಯಂತೆ ನಡಿಯುತ್ತಿರುವದು.

ಸೀ, ವಗರು, ಹುಳಿ, ಕೈ, ಈ ರಸಭರಿತಗಳಾದ ಆಹಾರಗಳನ್ನು ತಿನ್ನುವವನ ನಾಡೀಲಕ್ಷಣವು

ಮಧುರೇ ಬರ್ಹಿಗಮನಾ ತಿಕ್ತೇ ಸ್ಯಾತ್ಸ್ಥೂಲತಾ ಗತಿಃ ।
ಆಮ್ಲೇ ಕೋಷ್ಣಾ ಪ್ಲವಗತಿಃ ಕಟುಕೈರ್ಭೃಂಗಸನ್ನಿಭಾ ॥ ೧೨೩ ॥

ಸೀ ಪದಾರ್ಥಗಳನ್ನು ತಿನ್ನುವವನ ನಾಡಿಯು ನವಿಲಿನಂತೆಯೂ, ಕೈ* ಪದಾರ್ಥಗಳನ್ನು ತಿನ್ನುವವನ ನಾಡಿಯು ಸ್ಥೂಲಗತಿಯುಳ್ಳದ್ದಾಗಿಯೂ, ಹುಳಿ, ಸ್ವಲ್ಪ ಉಷ್ಣ ಪದಾರ್ಥಗಳನ್ನು ತಿನ್ನುವವನ ನಾಡಿಯು ಕೋತಿಯಂತೆ ಹಾರಿ ಹಾರಿ ಬೀಳುತ್ತಲೂ, ವಗರು ಪದಾರ್ಥವನ್ನು ತಿನ್ನುವವನ ನಾಡಿಯು ಭ್ರಮರದಂತೆಯೂ ನಡಿಯುವದು.

ಖಾರ, ಉಪ್ಪು, ಈ ಪದಾರ್ಥಗಳನ್ನು ತಿನ್ನುವವನ ನಾಡೀಲಕ್ಷಣವು

ಕಷಾಯಃ ಕಠಿನಾಮ್ಲಾನಾಂ ಲವಣೇ ಸರಳಾದ್ರುತಾ ।
ಏವಂ ದ್ವಿತ್ರಿಚತುರ್ಯೋಗೇ ನಾನಾ ಧರ್ಮವತೀ ಧರಾ ॥ ೧೨೪ ॥

ಮೆಣಸಿನಕಾಯಿ ಮುಂತಾದ ಖಾರ ಪದಾರ್ಥಗಳನ್ನು ತಿನ್ನುವವನ ನಾಡಿಯು ಕಠಿನವಾಗಿ ಬಡಿದ್ದಾಗಿಯೂ, ಉಪ್ಪು ತಿನ್ನುವವನ ನಾಡಿ ಸರಳವಾಗಿಯೂ, ಮೃದುವಾಗಿಯೂ, ವೇಗವಾಗಿಯೂ ನಡಿಯುತ್ತಿರುವದು. ಮತ್ತು ಎರಡು ಮೂರು ರಸಗಳನ್ನು ಸೇರಿಸಿಕೊಂಡು ಊಟಮಾಡುವವರಿಗೆ ನಾಡಿಯು ಬಹುವಿಧವಾಗಿ ನಡಿಯುತ್ತಿರುವದು.

* ಕಹಿ.

ದ್ರವಪದಾರ್ಥ, ಕಠಿನ ಪದಾರ್ಥ ಇವುಗಳನ್ನು ಭುಜಿಸುವವನ ನಾಡೀಲಕ್ಷಣವು

ದ್ರವೇತಿಕಠಿನಾ ನಾಡೀ ಕೋಮಲಾ ಕಠಿನಾಶನೇ ।
ದ್ರವದ್ರವ್ಯಸ್ಯ ಕಾಠಿನ್ಯೇ ಕೋಮಲಾ ಕಠಿನಾಪಿ ಚ ॥ ೧೨೫ ॥

ದ್ರವದ್ರವ್ಯಗಳನ್ನು ತಿನ್ನುವವನ ನಾಡಿಯು ಕಠಿನವಾಗಿಯೂ, ಬಹಳ ಕಠಿನವಾದ ಪದಾರ್ಥಗಳನ್ನು ತಿನ್ನುವವನ ನಾಡಿಯು ಮೃದುವಾಗಿಯೂ, ದ್ರವದ್ರವ್ಯಗಳನ್ನೂ ಕಠಿನದ್ರವ್ಯಗಳನ್ನೂ ಸಹ ತಿನ್ನುವವನಿಗೆ ನಾಡಿಯು ಮೃದುವಾಗಿಯೂ ಕಠಿನವಾಗಿಯೂ ನಡಿಯುವದು.

ಹುಳಿ, ಮಧುರಾಮ್ಲಗಳು, ಔಲಕ್ಕಿ, ಭ್ರಷ್ಟದ್ರವ್ಯಗಳು, ಇವುಗಳನ್ನು ಭುಜಿಸುವವನ ನಾಡೀಲಕ್ಷಣವು

ಆಮ್ಲೈಶ್ಚ ಮಧುರಾಮ್ಲೈಶ್ಚ ನಾಡೀ ಶೀತಾ ವಿಶೇಷತಃ ।
ಚಿಪಿಟೈರ್ಭ್ರಷ್ಟ ದ್ರವ್ಯೈಶ್ಚ ಸ್ಥಿರಾ ಮಂದತ್ತರಾಭವೇತ್ ॥ ೧೨೬ ॥

ಹುಳಿ ಪದಾರ್ಥಗಳಿಂದಲೂ, ಹುಳಿ ಸೀ ಕಲಿತ ಪದಾರ್ಥಗಳಿಂದಲೂ, ನಾಡಿಯು ವಿಶೇಷ ಶೀತಲವಾಗಿರುವದು. ಔಲಕ್ಕಿ, ಮೊದಲಾದ ಪದಾರ್ಥಗಳು ಮತ್ತು ಒಡದ ಪದಾರ್ಥಗಳು ಇವುಗಳಿಂದ ನಾಡಿಯು ಸ್ಥಿರವಾಗಿಯೂ ಮಂದವಾಗಿಯೂ ಆಗುವದು.

ಕುಂಬಳಕಾಯಿ, ಬಾಳೆಕಾಯಿ, ಎಲೆಸೊಪ್ಪು, ಈ ಮೊದಲಾದ ಪದಾರ್ಥಗಳನ್ನು ತಿನ್ನುವವನ ನಾಡೀಲಕ್ಷಣವು

ಕೂಶ್ಮಾಂಡೈರ್ಮೂಲಕಶ್ಚೈವ ಮಂದಮಂದಾ ಚ ನಾಡಿಕಾ ।
ಕದಳೀಭಿಶ್ಚ ಶಾಕೈಶ್ಚ ರಕ್ತಪೂರ್ಣೆಚ ನಾಡಿಕಾ ॥ ೧೨೭ ॥

ಕುಂಬಳಕಾಯಿ, ಮುಲ್ಲಂಗಿ, ಮೊದಲಾದ ಗೆಡ್ಡೆಗಳು, ಅವುಗಳನ್ನು ಭುಜಿಸುವವನ ನಾಡಿಯು ಮಂದವಾಗಿಯೂ, ಸೊಪ್ಪು, ಬಾಳೆ ಮುಂತಾದ ಪದಾರ್ಥಗಳನ್ನು ಭುಜಿಸುವವನ ನಾಡಿಯು ರಕ್ತಪುಷ್ಟಿಯುಳ್ಳವನ ನಾಡಿ ಯಂತೆಯೂ ನಡಿಯುತ್ತಿರುವದು.

ಮಾಂಸ, ಹಾಲು, ಬೆಲ್ಲ, ಹಿಟ್ಟು ಮೊದಲಾದ ವಸ್ತುಗಳನ್ನು ತಿನ್ನುವವನ ನಾಡೀಲಕ್ಷಣವು

ಮಾಂಸಾತ್ಸ್ಥಿರವಹಾ ನಾಡೀ ದುಗ್ಧೇ ಶೀತಾ ಬಲೀಯಸೀ ।
ಗುಡೈಃ ಕ್ಷೀರೈಶ್ಚ ಪಿಷ್ಟೈಶ್ಚ ಸ್ಥಿರಾ ಮಂದವಹಾ ಶುಭಾ ॥ ೧೨೮ ॥

ಮಾಂಸಭಕ್ಷಕನ ನಾಡಿಯು ಸ್ಥಿರವಾಗಿಯೂ, ಕ್ಷೀರಾಹಾರಿಯ ನಾಡಿಯು ಶೀತಲವಾಗಿಯೂ, ಹಾಲು ಬೆಲ್ಲ ಹಿಟ್ಟು ಇವುಗಳಿಂದ ಮಾಡಿದ ರೊಟ್ಟಿ ಮೊದಲಾದ ಪದಾರ್ಥಗಳನ್ನು ತಿನ್ನುವವನ ನಾಡಿಯು ಸ್ಥಿರವಾಗಿಯೂ ಮೆಲ್ಲಮೆಲ್ಲಗೂ ನಡಿಯುತ್ತಿರುವದು.

ಬೆಲ್ಲ, ಬಾಳೆಹಂಣು, ಮಾಂಸ, ಉಷ್ಣ ಪದಾರ್ಥಗಳು, ಒಣಗಿದ ತೀಕ್ಷ್ಣ ಪದಾರ್ಥಗಳು, ಇವು ಮೊದಲಾದ ಪದಾರ್ಥಗಳನ್ನು ಭುಜಿಸುವವನ ನಾಡೀಲಕ್ಷಣವು

ಗುಡ ರಂಭಾ ಮಾಂಸ ರೂಕ್ಷಾಣ್ಣ ಶುಷ್ಕತೀಕ್ಷ್ಣಾದಿ ಭೋಜನಾತ್ ।
ವಾತಾಪಿತ್ತಾರ್ತಿರೂಪೇಣ ನಾಡೀ ವಹತಿ ನಿಶ್ಚಿತಾ ॥ ೧೨೯ ॥

ಬೆಲ್ಲ, ಬಾಳೇಹಂಣು, ಮಾಂಸ, ರೂಕ್ಷದ್ರವ್ಯ, ಒಣ ಪದಾರ್ಥ ಈ ಮೊದಲಾದ ತೀಕ್ಷ್ಣದ್ರವ್ಯಗಳನ್ನು ಭುಜಿಸುವವನ ನಾಡಿಯು ವಾತಪಿತ್ತ ರೋಗದಿಂದಿರುವವನ ನಾಡಿಯಂತೆ ಆಡುತ್ತಿರುವದು.

ಬೆಳಿಗ್ಗೆ, ಮಧ್ಯಾಹ್ನ, ಸಾಯಂಕಾಲ, ರಾತ್ರಿ ಈ ಕಾಲಗಳಲ್ಲಿರುವ ನಾಡೀಲಕ್ಷಣವು

ಪ್ರಾತಃ ಸ್ನಿಗ್ಧಮಯೀ ನಾಡೀ ಮಧ್ಯಾಹ್ನೇಪ್ಯುಷ್ಣತಾನ್ವಿತಾ ।
ಸಾಯಾಹ್ನೇ ಧಾವಮಾನಾ ಚ ರಾತೌ್ರ ವೇಗವಿವರ್ಜಿತಾ ॥೧೩೦ ॥

ನಾಡಿಯು ಪ್ರಾತಃಕಾಲದಲ್ಲಿ ಕೋಮಲವಾಗಿಯೂ, ಮಧ್ಯಾಹ್ನದಲ್ಲಿ ಉಷ್ಣಗತಿಯಾಗಿಯೂ. ಸಾಯಾಹ್ನದಲ್ಲಿ ಅತಿವೇಗವಾಗಿಯೂ, ರಾತ್ರಿವೇಳೆ ಯಲ್ಲಿ ವೇಗರಹಿತವಾಗಿಯೂ ನಡಿಯುತ್ತಿರುವದು.

ಬಂಧಿಸಲ್ಪಟ್ಟ ರೋಗಿಯ ನಾಡೀಲಕ್ಷಣವು

ಪ್ರಕೃತಿಸ್ಥಾ ತು ಸಾ ನಾಡೀ ಸದಾ ಜ್ಞೇಯಾ ಭಿಷಗ್ವರೈಃ ।
ಅಂಗಗ್ರಹಣ ನಾಡೀನಾಂ ಭವಂತಿ ಮಂಥರಪ್ಲವಾಃ ॥ ೧೩೧ ॥

ಮೇಲೆ ಹೇಳಲ್ಪಟ್ಟ ಸ್ವಭಾವವುಳ್ಳವನು ಪಾಶಾದಿಗಳಿಂದ ಬಂಧಿಸಲ್ಪ ಸಲ್ಪಟ್ಟಾಗ ಅವನ ನಾಡಿಯು ಸ್ಥೂಲಗತಿ, ಮಂದಗತಿ, ಮಂಡೂಕಗತಿ ಯಿವುಗಳೊಂದಿಗೆ ಕೂಡಿಯಿರುವದು.

[ಯೋಗರತ್ನಾಕರದಲ್ಲಿ ಈ ಶ್ಲೋಕಗಳಿವೆ—

ಜ್ವರವೇಗೇನ ಧಮನೀ ಸೋಷ್ಣಾ ವೇಗವತೀ ಭವೇತ್ ।
ಕಾಮಕ್ರೋಧಾದ್ವೇಗವಹಾ ಕ್ಷೀಣಾ ಚಿಂತಾಭಯಪ್ಲುತಾ ॥

ಜ್ವರದ ವೇಗದಿಂದ ನಾಡಿಯು ಬಿಸಿಯಾಗಿ,ಬೇಗ ಬೇಗ ನಡೆಯುತ್ತದೆ. ಕಾಮ ಮತ್ತು ಕ್ರೋಧದಿಂದ ಬೇಗ ಬೇಗ ನಡೆಯುತ್ತದೆ ; ಚಿಂತೆ, ಭಯ ಇವುಗಳಿಂದ ಕೂಡಿದ್ದರೆ ನಾಡಿಯು ದುರ್ಬಲವಾಗಿರುತ್ತದೆ.

ಮಂದಾಗ್ನೇಃ ಕ್ಷೀಣಧಾತೋಶ್ಚ ನಾಡೀ ಮಂದತರಾ ಭವೇತ್ ।
ಅಸೃಕ್ಪೂರ್ಣಾ ಭವೇತ್ ಸೋಷ್ಣಾ ಗುರ್ವೀ ಸಾಮಾ ಗರೀಯಸೀ ॥

ಜಾಠರಾಗ್ನಿ ಮಂದವಾದವನ, ಧಾತುಪುಷ್ಟಿ ಕಡಮೆಯಾದವನ ನಾಡಿಯು ಮೆಲ್ಲಮೆಲ್ಲನೆ ನಡಿಯುತ್ತದೆ ; ನಾಡಿಯಲ್ಲಿ ರಕ್ತ ತುಂಬಿದರೆ ಬಿಸಿ ಯಾಗುವುದು, ಭಾರವಾಗುವುದು; ಆಮ್ಲದಿಂದ, ಎಂದರೆ ಅಪಕ್ವವಾದ ಅನ್ನರಸದಿಂದ, ಕೂಡಿದ್ದರೆ ನಾಡಿಯು ತುಂಬ ಭಾರವಾದಂತೆ ತೋರುತ್ತದೆ.

ಲಘ್ವೀ ವಹತಿ ದೀಪ್ತಾಗ್ನೇಸ್ತಥಾ ವೇಗವತೀ ಭವೇತ್ ।
ಸುಖಿತಸ್ಯ ಸ್ಥಿರಾ ಜ್ಞೇಯಾ ತಥಾ ಬಲವತೀ ಮತಾ ॥
ಚಪಲಾ ಕ್ಷುಧಿತಸ್ಯಾಪಿ ತೃಪ್ತಸ್ಯ ವಹತಿ ಸ್ಥಿರಾ ॥

ಜಾಠರಾಗ್ನಿ ತೀಕ್ಷ್ಣವಾದವನ ನಾಡಿಯು ವೇಗವಾಗಿ ಮತ್ತು ಹಗುರವಾಗಿ ನಡೆಯುತ್ತದೆ; ಆರೋಗ್ಯವಂತನ ನಾಡಿಯು ಸ್ಥಿರವಾಗಿಯೂ ಬಲವುಳ್ಳದ್ದಾಗಿಯೂ ಇರುತ್ತದೆ. ಹಸಿವು ಬಾಧಿಸುತ್ತಿರುವವನಿಗೆ ನಾಡಿಯು ಅಸ್ಥಿರವಾಗಿರುತ್ತದೆ ; ಉಂಡವನ ನಾಡಿ ಸ್ಥಿರವಾಗಿ ನಡೆಯುತ್ತದೆ. — ಸಂ.]

ಜ್ವರದಾಹ ಸನ್ನಿಪಾತ ನಾಡೀಲಕ್ಷಣವು

ಪ್ಲವಪ್ರಬಲತಾಂ ಯಾತಿ ಜ್ವರದಾಹಾಭಿಭೂತಯೇ ।
ಸನ್ನಿಪಾತಕರೂಪೇಣ ಭವಂತಿ ಸರ್ವವೇದನಾಃ ॥ ೧೩೨ ॥

ಬಹಳ ತಾಪಯುಕ್ತವಾದ ಜ್ವರವುಳ್ಳ ರೋಗಿಗೆ ಬಹಳವಾಗಿ ಬೆವರು ಹಿಡಿಯುವದಲ್ಲದೆ, ನಾಡಿಯು ಸನ್ನಿಪಾತದಂತೆ ನಡಿಯುತ್ತಿರುವದು, ಮತ್ತು ಮೇಲೆ ಉದಹರಿಸಲ್ಪಟ್ಟ ಲಕ್ಷಣಗಳು ವುಳ್ಳ ಜ್ವರದಾಹ ಇವು ಸನ್ನಿಪಾತದಲ್ಲಿ ವುಂಟಾದರೆ ಅನೇಕ ವೇದನೆಗಳುಂಟಾಗುವವು.

ಜ್ವರಪ್ರಕೋಪ ನಾಡೀಲಕ್ಷಣವು

ಜ್ವರ ಪ್ರಕೋಪೇ ಧಮನೀ ಸೋಷ್ಮಾ ವೇಗವತೀ ಭವೇತ್ ॥ ೧೩೩ ॥

ಜ್ವರಪ್ರಕೋಪದಲ್ಲಿ ನಾಡಿಯು ಬಿಸಿಯಾಗಿಯೂ ಅತಿವೇಗವಾಗಿಯೂ ನಡಿಯುತ್ತಿರುವದು.

ಜ್ವರ ವಾತ ಸಂಭೋಗ ರಾತ್ರ್ಯುಷಃಕಾಲ ನಾಡೀಲಕ್ಷಣವು

ಜ್ವರೇ ಚ ವಕ್ರಂ ಧಾವಂತಿ ತಥಾ ಚ ಮರುತಪ್ಲವೇ ।
ರತ್ಯಂತೇ ಚ ನಿಶಿ ಪ್ರಾತಸ್ತಥಾ ದಪಿ ಶಿಖೋಪಮಾ ॥ ೧೩೪ ॥

ಜ್ವರದಲ್ಲಿಯೂ ವಾತದಲ್ಲಿಯೂ ನಾಡಿಯು ವಕ್ರವಾಗಿ ನಡಿಯುವದು. ರತ್ಯಂತದಲ್ಲಿಯೂ ರಾತ್ರಿಗಳಲ್ಲಿಯೂ ಅರುಣೋದಯ ಕಾಲದಲ್ಲಿಯೂ ನಾಡಿಯು ತಪಿಸಿದ್ದರೂ ಬೆಂಕಿಯಂತೆ ಇರುವದು.

ಪಿತ್ತಜ್ವರ ಕಠಿನಾಹಾರ ಇವುಗಳಿಂದುಂಟಾದ ನಾಡೀಲಕ್ಷಣವು

ದ್ರುತಾ ಚ ಸರಳಾ ದೀರ್ಘಾ ಶೀಘ್ರಾ ಪಿತ್ತಜ್ವರೇ ಭವೇತ್ ।
ಶೀಘ್ರಮಾಹನನಂ ನಾಡೀ ಕಾಠಿನ್ಯಾಚ್ಚಲತೇ ತಥಾ ॥ ೧೩೫ ॥

ಪಿತ್ತಜ್ವರದಲ್ಲಿ ನಾಡಿಯು ಸರಳವಾದ್ದಾಗಿಯೂ ದ್ರುತಗತಿಯುಳ್ಳದ್ದಾಗಿಯೂ ದೀರ್ಘವಾದ್ದಾಗಿಯೂ ಶೀಘ್ರವಾದ್ದಾಗಿಯೂ ಆಗುವದು. ಕಠಿನ ದ್ರವ್ಯಗಳನ್ನು ಸೇವಿಸಿದಾಗ ನಾಡಿಯು ಒಬ್ಬನನ್ನು ಹೊಡಿಯಲಟ್ಟಿಕೊಂಡು ಓಡಿಹೋಗುವವನಂತೆ ಶೀಘ್ರವಾಗಿ ನಡಿಯುವದು.

ಮಲಾಜೀರ್ಣ ಶ್ಲೇಷ್ಮ ದೋಷ ಇವುಗಳ ನಾಡೀಲಕ್ಷಣವು

ಮಲಾಜೀರ್ಣೇನ ನಿತರಾಂ ಸ್ಪಂದನಂ ಪರಿಕೀರ್ತಿತಂ ।
ನಾಡೀ ತಂತುಸಮಾ ಮಂದಾ ಶೀತಲಾ ಶ್ಲೇಷ್ಮದೋಷಜಾ ॥ ೧೩೬ ॥

ಮಲಾಧಿಕ್ಯದಲ್ಲಿಯೂ, ಅಜೀರ್ಣದಲ್ಲಿಯೂ, ನಾಡಿಯು ತಂತಿಯಂತೆ ಚಲಿಸುತ್ತಿರುವದು. ಶ್ಲೇಷ್ಮಾಧಿಕ್ಯದಲ್ಲಿ ನಾಡಿಯು ಶೀತಲವಾಗಿಯೂ, ಮಂದವಾಗಿಯೂ ನಡಿಯುತ್ತಿರುವದು.

ವಾತಪಿತ್ತಶ್ಲೇಷ್ಮ ವಾತನಾಡೀಲಕ್ಷಣವು

ಚಂಚಲಾ ತರಳಾ ಸ್ಥೂಲಾ ಕಠಿನಾ ವಾತಪಿತ್ತಜಾ ।
ಈಷಚ್ಚ ದೃಶ್ಯತೇ ತೂಷ್ಮಾ ಮಂದಾ ಸ್ಯಾಚ್ಛ್ಲೇಷ್ಮವಾತಜಾ ॥ ೧೩೭ ॥

ವಾತಪಿತ್ತದೋಷದಲ್ಲಿ ನಾಡಿಯು ಚಂಚಲವಾಗಿಯೂ, ಪ್ರಕಾಶವಾಗಿಯೂ, ಸ್ಥೂಲವಾಗಿಯೂ, ಕಠಿನವಾಗಿಯೂ ನಡಿಯುತ್ತಿರುವದು. ಮತ್ತು ಶ್ಲೇಷ್ಮವಾತರೋಗದಲ್ಲಿ ನಾಡಿಯು ಕಿಂಚಿದುಷ್ಣವಾಗಿಯೂ, ಮಂದವಾಗಿಯೂ ನಡಿಯುತ್ತಿರುವದು.

ಅಲ್ಪಶ್ಲೇಷ್ಮ ಪ್ರಬಲವಾತ ಉಷ್ಣವಾತ ಇವುಗಳ ನಾಡೀಲಕ್ಷಣವು

ನಿರಂತರಂ ಖರಂ ರೂಕ್ಷಂ ಮಂದಶ್ಲೇಷ್ಮಾತಿವಾತಲಾ ।
ರೂಕ್ಷವಾತ ಭವೇತ್ತಸ್ಯ ನಾಡೀ ಸ್ಯಾತ್ಪಿಂಡಸನ್ನಿಭಾ ॥ ೧೩೮ ॥

ಅಲ್ಪಶ್ಲೇಷ್ಮ ದೋಷದಲ್ಲಿಯೂ, ಪ್ರಬಲವಾತದೋಷದಲ್ಲಿಯೂ, ನಾಡಿಯು ಸರ್ವದಾ ತೀಕ್ಷ್ಣವಾಗಿಯೂ, ಉಷ್ಣವಾಗಿಯೂ, ನಡಿಯುತ್ತಿರುವದು. ಉಷ್ಣವಾತದಲ್ಲಿ ನಾಡಿಯು ಪಿಂಡದಂತೆ ಬೌದ್ಧಾಕಾರವಾಗಿ ನಡಿಯುತ್ತಿರುವದು.

ಸಹಜವಾತ ತೀವ್ರವಾತ ಇವುಗಳಲ್ಲಿ ನಾಡೀಲಕ್ಷಣವು

ಸೌಮ್ಯಾ ಸೂಕ್ಷ್ಮಾ ಸ್ಥಿರಾ ಮಂದಾ ನಾಡೀ ಸಹಜವಾತಜಾ ।
ಸ್ಥೂಲಾ ಚ ಕಠಿನಾ ಶೀಘ್ರಾ ಸ್ಪಂದತೇ ತೀವ್ರಮಾರುತೇ ॥ ೧೩೯ ॥

ಸಹಜವಾತದಲ್ಲಿ ನಾಡಿಯು ಸೌಮ್ಯವಾಗಿಯೂ, ಸೂಕ್ಷ್ಮವಾಗಿಯೂ, ಸ್ಥಿರವಾಗಿಯೂ, ಮಂದವಾಗಿಯೂ, ನಡಿಯುತ್ತಿರುವದು. ಮತ್ತು ತೀವ್ರ ವಾತದಲ್ಲಿ ನಾಡಿಯು ಸ್ಥೂಲವಾಗಿಯೂ, ಕಠಿನವಾಗಿಯೂ, ಶೀಘ್ರವಾಗಿಯೂ ನಡಿಯುತ್ತಿರುವದು.

ಜ್ವರಪ್ರಕೋಪ ಕಾಮಕ್ರೋಧ ವೇಗರೋಧ ಚಿಂತೆ ಇವುಗಳ ನಾಡೀಲಕ್ಷಣವು

ಜ್ವರಪ್ರಕೋಪೇ ಧಮನೀ ಸೋಷ್ಣಾ ವೇಗಯುತಾ ಭವೇತ್ ।
ಕಾಮಕ್ರೋಧಾದ್ವೇಗರೋಧಾತ್ತೀಕ್ಷ್ಣಾ ಚಿಂತಾಭರಪ್ಲುತಾತ್ ॥ ೧೪೦ ॥

ಕಾಮಕ್ರೋಧ, ವೇಗರೋಧ, ಚಿಂತೆ, ಅಭಿಘಾತ ಇವುಗಳಿಂದ ಜ್ವರ ಪ್ರಕೋಪವಾದರೆ ಆ ಕಾಲದಲ್ಲಿ ನಾಡಿಯು ಉಷ್ಣವಾಗಿಯೂ ಅತಿವೇಗವಾಗಿಯೂ ನಡಿಯುತ್ತಿರುವದು.

ದುಷ್ಟರಕ್ತ ನಾಡೀಲಕ್ಷಣವು

ಮಧ್ಯೇ ಕರೆ ವಹೇನ್ನಾಡೀ ಯದಿ ಸಂತರ್ಪಿತಾ ಧ್ರುವಂ ।
ತದಾ ನೂನಂ ಮನುಷ್ಯಾಣಾಂ ರುಧಿರಾಪೂರಿತಾ ಮಲಾಃ ॥ ೧೪೧ ॥

ದುಷ್ಟರಕ್ತವು ದೇಹದಲ್ಲಿ ವೃದ್ಧಿಹೊಂದಿದರೆ ಆ ರಕ್ತವು ಪಚ್ಯಮಾ

ನಾಶಯುದಲ್ಲಿ ಮಲದೊಂದಿಗೆ ಸೇರುವದು. ಆಗ ನಾಡಿಯು ಸಂತಾಪಯುಕ್ತವಾಗಿ ಮಧ್ಯಹಸ್ತದಲ್ಲಿ ಚಲಿಸುತ್ತಿರುವದು.

ಭೂತಜ್ವರ ಏಕಾಹಿಕಜ್ವರ ವಿಷಮಜ್ವರಗಳ ನಾಡೀಲಕ್ಷಣವು

ಭೂತಜ್ವರೇ ಸೇಕ ಇವಾತಿವೇಗಾ
ಧಾವಂತಿ ನದ್ಯೋ ಹಿ ಯಥಾಬ್ಧಿಗಾಮಾಃ ।
ಏಕಾಹಿಕೇನ ಕ್ವಚನ ಪ್ರದೂರೇ ಕ್ಷಣಾಂತ
ಗಾಮಾ ವಿಷಮಜ್ವರೇಣ ॥ ೧೪೨ ॥

ಭೂತಜ್ವರದಲ್ಲಿ ನಾಡಿಯು ಸಮುದ್ರದಲ್ಲಿ ಹೋಗಿ ಬೀಳುವ ನದೀ ಪ್ರವಾಹದಂತೆ ಅತಿವೇಗವಾಗಿ ನಡಿಯುತ್ತಿರುವದು. ಮತ್ತು ಏಕಾಹಿಕ, ವಿಷಮಜ್ವರ ಇವುಗಳಲ್ಲಿ ಕೆಲವು ಕಾಲವತಿವೇಗವಾಗಿಯೂ, ಕೆಲವು ಕಾಲ ವಿಶ್ರಾಂತಿ ಹೊಂದಿಯೂ ನಡಿಯುತ್ತಿರುವದು.

ದ್ವ್ಯಾಹಿಕ ತ್ರ್ಯಾಹಿಕ ಚಾತುರ್ಥಿಕ ಜ್ವರಗಳ ನಾಡೀಲಕ್ಷಣವು

ದ್ವಿತೀಯಕೇ ವಾಥ ತೃತೀಯತುರ್ಯಯೋ
ರ್ಗಚ್ಛಂತಿ ತಪ್ತಾಭ್ರಮಿವ ಕ್ರಮೇಣ ॥ ೧೪೩ ॥

ದ್ವ್ಯಾಹಿಕ ತ್ರ್ಯಾಹಿಕ ಚಾತುರ್ಥಿಕ ಜ್ವರಗಳಲ್ಲಿ ನಾಡಿಯು ಬಹಳ ಉಷ್ಣದೊಂದಿಗೆ ಕೂಡಿ ಭ್ರಮರದಂತೆ ನಡಿಯುತ್ತಿರುವದು.

ಕ್ರೋಧಜ್ವರ ಕಾಮಜ್ವರ ಇವುಗಳ ನಾಡೀಲಕ್ಷಣವು

ಕ್ರೋಧಜೇ ಸಂಗಲಗ್ನಾಂಗಾ ಸಂಸಂಗಾ ಕಾಮಜೇಶ್ವರೇ ।

ಕ್ರೋಧಜ್ವರನಾಡಿಯು ಪರಸ್ಪರ ಕ್ಲಿಷ್ಟವಾಗಿಯೂ ಕಾಮಜ್ವರದಲ್ಲಿ ನಾಡಿಯು ಒಂದರೊಂದಿಗೊಂದು ಕಲಿತಂತೆಯೂ ನಡಿಯುತ್ತಿರುವದು.

ಜ್ವರೇ ಚ ರಮಣೀನಾಡೀ ಕ್ಷೀಣಾಂಗಾ ಮಂದಗಾಮಿನೀ ।
ಜ್ವರೇ ಕಾಮಾರ್ತರೂಪೇಣ ಭವಂತಿ ವಿಕಲಾಃ ಸಿರಾಃ ॥ ೧೪೪ ॥

ಸ್ತ್ರೀಗೆ ಪುರುಷವಿರಹದಿಂದ ಹುಟ್ಟಿದ ಜ್ವರದಲ್ಲಿ ನಾಡಿಯು ಕ್ಷೀಣಿಸಿದಂತೆಯೂ ಮಂದವಾಗಿಯೂ ಯಿರುವದು. ಪುರುಷನಿಗೆ ಸ್ತ್ರೀವಿರಹದಿಂದುಂಟಾದ ಜ್ವರದಲ್ಲಿ ನಾಡಿಯು ಶಿಥಿಲಶಿಥಿಲವಾಗಿಯೂ ನಡಿಯುತ್ತಿರುವದು.

ಜ್ವರವಿಮುಕ್ತನ ವ್ಯಾಯಾಮ ಭ್ರಮಣ ಚಿಂತೆ ಧನ ಶೋಕ ಇವುಗಳಲ್ಲಿ ನಾಡೀಲಕ್ಷಣವು

ವ್ಯಾಯಾಮೇ ಭ್ರಮಣೇ ಚೈವ ಚಿಂತಾಯಾಂ ಧನಶೋಕತಃ ।
ನಾನಾಪ್ರಕಾರಗಮನಾ ರಾಗಚ್ಛತಿ ವಿಜ್ವರೇ ॥ ೧೪೬ ॥

ಜ್ವರವಿಮುಕ್ತನಾದವನು ಕೆಲಸಮಾಡುವದು, ಸಂಚರಿಸುವದು, ವ್ಯಸನಪಡುವದು, ಧನನಷ್ಟದಿಂದ ದುಃಖಿಸುವದು, ಇಂಥಾ ಕಾರ್ಯಗಳನ್ನು ಮಾಡುವದರಿಂದ ಅವನ ನಾಡಿಯು ಅನೇಕ ವಿಧವಾಗಿ ನಡಿಯುತ್ತಿರುವದು.

ಅಜೀರ್ಣ ನಾಡೀಲಕ್ಷಣವು

ಅಜೀರ್ಣೇ ತು ಭವೇನ್ನಾಡೀ ಕಠಿನಾ ಪರಿತೋ ಜಡಾ ।
ಪ್ರಸನ್ನಾ ತು ದ್ರುತಾ ಶುದ್ಧಾ ತ್ವರಿತಾ ಚ ಪ್ರವರ್ತತೇ ॥ ೧೪೭ ॥

ಅಜೀರ್ಣದಲ್ಲಿ ನಾಡಿ ಕಠಿನವಾಗಿಯೂ ಸರ್ವತ್ರ ಜಡವಾಗಿಯೂ, ನಿರ್ಮಲವಾಗಿಯೂ, ವೇಗವಾಗಿಯೂ, ಅತಿಶುದ್ಧವಾಗಿಯೂ, ಓಡುವಂತೆಯೂ ನಡಿಯುತ್ತಿರುವದು.

ಪಕ್ವಾಜೀರ್ಣ ರಕ್ತಪೂರ್ಣ ರಸಯುಕ್ತ ಇವುಗಳಲ್ಲಿ ನಾಡೀಲಕ್ಷಣವು

ಪಕ್ವಾಜೀರ್ಣೇ ಪುಷ್ಟಿಹೀನಾ ಮಂದಂ ಮಂದಂ ವಹೇತ್ತು ಯಾ ।
ಅಸೃಕ್ಪೂರ್ಣಾ ಭವೇತ್ಕೋಷ್ಣಾ ಗುರ್ವೀ ಸಾಮಾ ಗರೀಯಸೀ ॥ ೧೪೮ ॥

ಪಕ್ವಾಜೀರ್ಣದಲ್ಲಿ ನಾಡಿಯು ಪುಷ್ಟಿರಹಿತವಾಗಿಯೂ ಮೆಲ್ಲಮೆಲ್ಲಗೂ ನಡಿಯುತ್ತಿರುವದು. ಶರೀರದಲ್ಲಿ ರಕ್ತವಧಿಕವಾಗಿರುವಾಗ ನಾಡಿಯು ವುಷ್ಣ

ಯುಕ್ತವಾಗಿ ನಡಿಯುತ್ತಿರುವದು. ರಸಯುಕ್ತವಾದ ನಾಡಿಯು ಗುರುತ್ವವುಳ್ಳದ್ದಾಗಿ ನಡಿಯುತ್ತಿರುವದು.

ಸುಖಾನುಭವ ಹಸಿವುಗೊಂಡವನು ಮಂದಾಗ್ನಿ ಕ್ಷೀಣಧಾತು ಇವುಗಳುಳ್ಳವನ ನಾಡೀಲಕ್ಷಣವು

ಸುಖಿತಸ್ಯ ಸ್ಥಿರಾ ಜ್ಞೇಯಾ ಚಪಲಾ ಕ್ಷುಧಿತಸ್ಯ ಸಾ ।
ಮಂದಾಗ್ನೇಃ ಕ್ಷೀಣಧಾತೋಶ್ಚ ನಾಡೀ ಮಂದತರಾ ಭವೇತ್ ॥ ೧೪೯ ॥

ಸುಖವಂತನಾದವನ ನಾಡಿಯು ಸ್ಥಿರವಾಗಿಯೂ, ಹಶಿವುಗೊಂಡವನ ನಾಡಿಯು ಚಂಚಲವಾಗಿಯೂ, ಮಂದಾಗ್ನಿಯುಳ್ಳವಗೆ ನಾಡಿಯು ಕ್ಷೀಣವಾಗಿಯೂ, ಮಂದವಾಗಿಯೂ, ದುರ್ಬಲವಂತನಿಗೆ ಕ್ಷೀಣನಾಡಿಯೂ ನಿಧಾನವಾಗಿಯೂ ಇರುವದು.

ಪ್ರಕಾರಾಂತರ ಮಂದಾಗ್ನಿ ನಾಡೀಲಕ್ಷಣವು

ಮಂದೇಽಗ್ನೌ ಕ್ಷೀಣತಾಂ ಯಾತಿ ನಾಡೀ ಹಂಸಾಕೃತಿಸ್ತಥಾ ॥ ೧೫೦ ॥

ಮಂದಾಗ್ನಿಯುಳ್ಳವನ ನಾಡಿಯು ಕ್ಷೀಣಿಸಿ ಹಂಸಪಕ್ಷಿಯಂತೆ ನಡಿಯುತ್ತಿರುವದು.

ಆಮಾಶ್ರಯ ಪುಷ್ಟಿವಿವರ್ಧನ ಆಹಾರಮಾಂದ್ಯ ಉಪವಾಸ ಇವುಗಳಲ್ಲಿ ನಾಡೀಲಕ್ಷಣವು

ಆಮಾಶ್ರಯೇ ಪುಷ್ಟಿವಿವರ್ಧನೇನ ಭವಂತಿ ನಾಡ್ಯೋ ಭುಜಗೈಕವೃತ್ತ್ಯಾಃ
ಆಹಾರಮಾಂದ್ಯಾದುಪವಾಸತೋ ವಾ ತದ್ವೈವ ನಾಡ್ಯೋ ಭುಜಗ
ಪ್ರಮಾಣಾಃ ॥ ೧೫೧ ॥

ಆಮಾಶ್ರಯದಲ್ಲಿ ನಾಡಿಯು ಪುಷ್ಟಿಯುಂಟಾಗಿ ಸರ್ಪಾಕಾರವಾಗಿ ನಡಿಯುತ್ತಿರುವದು. ಆಹಾರಮಾಂದ್ಯ, ಉಪವಾಸ ಇವುಗಳಲ್ಲಿ ನಾಡಿಯು ಹಾವಿನಂತೆ ನಡಿಯುತ್ತಿರುವದು.

ದೀಪ್ತಾಗ್ನಿ ನಾಡೀಲಕ್ಷಣವು

ಲಘ್ವೀ ವಹತಿ ದೀಪ್ತಾಗ್ನೇಸ್ತಥಾ ವೇಗವತೀ ಸ್ಮೃತಾ ॥ ೧೫೧ ॥

ದೀಪ್ತಾಗ್ನಿಯಲ್ಲಿ ನಾಡಿಯು ಲಘುವಾಗಿಯೂ, ವೇಗವಾಗಿಯೂ ನಡಿಯುತ್ತಿರುವದು.

ಪಾದೇ ಚ ಹಂಸಗಮನಾ ಕರೇ ಮಂಡೂಕಸಂಪ್ಲವಾ
ತಸ್ಯಾಗ್ನೇರ್ಮಂದತಾ ದೇಹೇ ತ್ವಥವಾ ಗ್ರಹಣೀ ಗದಃ ॥ ೧೫೨ ॥

ಅಗ್ನಿಮಾಂದ್ಯ ಗ್ರಹಣೀರೋಗ ಇವುಗಳಲ್ಲಿ ನಾಡಿಯು ಪಾದದಲ್ಲಿ ಹಂಸದಂತೆಯೂ, ಹಸ್ತದಲ್ಲಿ ಕಪ್ಪೆಯಂತೆಯೂ ನಡಿಯುತ್ತಿರುವದು.

ಮಲಭೇದ ಗ್ರಹಣೀರೋಗ ಅತಿಸಾರಭೇದ ವಿಲಂಬಿಕ ಆಮಾತಿಸಾರ ಇವುಗಳಲ್ಲಿ ನಾಡೀಲಕ್ಷಣವು

ಭೇದೇನ ಶಾಂತಾ ಗ್ರಹಣೀಗದೇನ ನಿರ್ವೀರ್ಯರೂಪಾ ತ್ವತಿಸಾರಭೇದೇ ।
ವಿಲಂಬಿಕಾಯಾಂ ಪ್ಲವಗಾ ಕದಾಚಿದಾಮಾತಿಸಾರೇ ಪೃಥುಲಾ
ತಥಾ ಚ ॥ ೧೫೩ ॥

ಮಲಭೇದದಲ್ಲಿ ನಾಡಿಯು ಶಾಂತವಾಗುವದು. ಗ್ರಹಣೀರೋಗ ಅತಿಸಾರ ಇವುಗಳಲ್ಲಿ ತೇಜೋಹೀನವಾಗಿಯೂ, ವಿಲಂಬಿಕೆಯೆಂಬ ರೋಗದಲ್ಲಿ ದೋಣಿಯಂತೆಯೂ, ಆಮಾತಿಸಾರದಲ್ಲಿ ಜೋಲಾಡುತ್ತಿರುವಂತೆಯೂ ನಡಿಯುತ್ತಿರುವದು.

ಮೂತ್ರಮಲನಿರೋಧ ವಿಡ್ಗ್ರಹ ವಿಷೂಚಿಕೆ ಇವುಗಳಲ್ಲಿ ನಾಡೀಲಕ್ಷಣವು

ನಿರೋಧ ಮೂತ್ರಶಕೃತೋ ವಿಡ್ಗ್ರಹೇತಿತರಾಶ್ರಿತಾಃ ।
ವಿಷೂಚಿಕಾಭೂತೇ ಚ ಭವಂತಿ ಭೇಕವತ್ಕ್ರಮಾಃ ॥ ೧೫೪ ॥

ಮಲಮೂತ್ರಗಳನ್ನು ನಿರೋಧಿಸಿದವನ ನಾಡಿಯು ಅತಿವೇಗವಾಗಿ ನಡಿಯುತ್ತಿರುವದು. ಮತ್ತು ವಿಷೂಚಿಕಾರೋಗದಲ್ಲಿ ನಾಡಿಯು ಕಪ್ಪೆಯಂತೆ ನಡಿಯುತ್ತಿರುವದು.

ಅನಾಹಕ ಮೂತ್ರಕೃಛ್ರ ಯಿವುಗಳ ನಾಡೀಲಕ್ಷಣವು

ಅನಾಹೇ ಮೂತ್ರಕೃಛ್ರೇ ಚ ಭವೇನ್ನಾಡೀ ಗರಿಷ್ಟತಾ ॥ ೧೫೪ ॥

ಅನಾಹಕವೆಂಬ ಕಾಮಿಲಾ ರೋಗ ಮೂತ್ರಕೃಛ್ರ ಇವುಗಳಲ್ಲಿ ನಾಡಿಯು ಗರಿಷ್ಟವಾಗಿ ನಡಿಯುತ್ತಿರುವದು.

ವಾತರೋಗ ಶೂಲೆ ಮರುತ್ಪ್ಲವ ಇವುಗಳಲ್ಲಿ ನಾಡೀಲಕ್ಷಣವು

ವಾತೇನ ಶೂಲೇನ ಮರುತ್ಪ್ಲವೇ ಸದೋಪವಕ್ರಾ ಹಿ ಸಿರಾ ವಹಂತಿ ॥ ೧೫೬ ॥

ವಾತರೋಗ ಶೂಲರೋಗ ಮರುತ್ಪ್ಲವ ಇವುಗಳಲ್ಲಿ ನಾಡಿಯು ವಕ್ರವಾಗಿ ನಡಿಯುತ್ತಿರುವದು.

ಪೈತ್ಯವು ಆಮಶೂಲೆ ಯಿವುಗಳ ನಾಡೀಲಕ್ಷಣವು

ಜ್ವಾಲಾಮಯೀ ಪಿತ್ತವಿಚೇಷ್ಟಿತೇನ ಸಾಮೇನ ಶೂಲೇನ ಚ ಪುಷ್ಟಿರೂಪಾ ॥ ೧೫೭ ॥

ಪೈತ್ಯ ರೋಗದಲ್ಲಿ ನಾಡಿಯು ಜ್ವಾಲೆಯಂತೆ ಧಗಧಗೆಂತಲೂ, ಆಮಶೂಲೆಯಲ್ಲಿ ಪುಷ್ಟಿಯಾಗಿಯೂ ನಡಿಯುತ್ತಿರುವದು.

ಪ್ರಮೇಹ ಆಮದೂಷಣ ಇವುಗಳ ನಾಡೀಲಕ್ಷಣವು

ಪ್ರಮೇಹೇ ಗ್ರಂಥಿರೂಪಾ ಚ ಪ್ರಸುಪ್ತಾ ಚಾಮದೂಷಣೇ ॥ ೧೫೮ ॥

ಪ್ರಮೇಹದಲ್ಲಿ ನಾಡಿಯು ಮಿಶ್ರವಾಗಿ ಗ್ರಂಥಿರೂಪವಾಗಿಯೂ ಆಮದೋಷದಲ್ಲಿ ನಿದ್ರೆಹೋದಂತೆಯೂ ನಡಿಯುತ್ತಿರುವದು.

ವಿಷದೋಷ ವಿಷ್ಟಂಭವಾತ ಗುಲ್ಮ ಅತ್ಯರ್ಧವಾತ ಅಸ ಮಾಪ್ತಿಕಾಲ ಇವುಗಳಲ್ಲಿ ನಾಡೀಲಕ್ಷಣವು

ಉತ್ಪಿಚ್ಛರೂಪಾವಿವರಿಷ್ಟಿ ಕಾಯಾಂ ವಿಷ್ಟಂಭಗುಲ್ಮೇನ ಚ ವಕ್ರರೂಪಾ।
ಅತ್ಯರ್ಧವಾತೇನ ಅಧಸ್ಫುರಂತೀ ಉತ್ತಾನಭೇದಿನ್ಯ–
ಸಮಾಪ್ತಿಕಾಲೇ ॥ ೧೫೯ ॥

ವಿಷಮದೋಷದಲ್ಲಿ ನಾಡಿಯು ಊರ್ಧ್ವಗತಿಯಾಗಿಯೂ ವಿಷ್ಟಂಭ ಗುಲ್ಮ ರೋಗದಲ್ಲಿ ಬಹಳ ಅಧೋಭಾಗವಾಗಿಯೂ ವಾಯುಸಮಾಪ್ತಿ ಕಾಲ ದಲ್ಲಿ ಊರ್ಧ್ವ ಭಾಗದಲ್ಲಿ ಹಾರಿ ಬೀಳುವಂತೆಯೂ ನಡಿಯುತ್ತಿರುವದು.

ಗುಲ್ಮ ಕಂಪ ಪರಾಕ್ರಮ ಇವುಗಳಲ್ಲಿ ನಾಡೀಲಕ್ಷಣವು

ಗುಲ್ಮೇನ ಕಂಪೇನ ಪರಾಕ್ರಮೇಣ ಪರಾವತಸ್ಯ ಪ್ರಗತಿಂ
ಕರೋತಿ ॥ ೧೬೦ ॥

ಗುಲ್ಮ ರೋಗ, ಕಂಪ, ಪರಾಕ್ರಮ ಇವುಗಳಲ್ಲಿ ನಾಡಿಯು ಪಾರಿವಾಳದ ಹಕ್ಕಿಯಂತೆ ನಡಿಯುತ್ತಿರುವದು.

ವ್ರಣ ಭಗಂದರ ಇವುಗಳಲ್ಲಿ ನಾಡೀಲಕ್ಷಣವು

ವ್ರಣಾರ್ಥಂ ಕಠಿನೇ ದೇಹೇ ಪ್ರಯಾತಿ ಪೈತ್ತಿಕಂ ಕ್ರಮಂ ।
ಭಗನ್ದರಾನುರೂಪೇಣ ನಾಡೀ ವ್ರಣನಿವೇದನೇ ॥ ೧೬೧ ॥

ವ್ರಣ ಭಗಂದರ ಇವುಳ್ಳವನ ನಾಡಿಯು ಪೈತ್ಯೋಲ್ಬಣವಾಗಿ ನಡಿಯು ತ್ತಿರುವದು.

ವಾಂತ ಶಲ್ಯಾಭಿಹತ ವೇಗಾವರೋಧವ್ಯಾಕುಲ ಇವುಗಳುಳ್ಳವನ ನಾಡೀಲಕ್ಷಣವು

ವಾಂತಸ್ಯ ಶಲ್ಯಾಭಿಹತಸ್ಯ ಜಂತೋರ್ವೇಗಾವರೋಧಾಗಳಿತಸ್ಯ
ಭೂಯಃ ।
ಗತಿರ್ವಿಧತ್ತೇ ಧಮನೀ ಗಜೇಂದ್ರ ಮರಾಳಮಾ
ನೇವ ಕಪೋಲ್ಬಣೇನ ॥ ೧೬೨ ॥

ವಮನ ಮಾಡಿಕೊಂಡವನು, ಶಲ್ಯ ಮುಂತಾದ್ದು ಮೈಗೆ ತಗಲಿದವನು, ವೇಗಾವರೋಧನು ಇವರ ನಾಡಿಯು ಮದಿಸಿದ ಆನೆ ಹಂಸ ಇವುಗಳಂತೆ ನಡಿಯುವದಲ್ಲದೆ ಶ್ಲೇಷ್ಮವಧಿಕವಾಗಿ ಪ್ರಕೋಪಿಸಿರುವದು.

ನಾಡೀಜ್ಞಾನವಿಲ್ಲದವ ಶ್ಲಾಘನಾನರ್ಹನು

ನಾಡೀಜ್ಞಾನಂ ವಿನಾ ಕಶ್ಚಿತ್ಸತ್ಪುನಶ್ಲಾಘ್ಯತಾಂ ವ್ರಜೇತ್ ।
ತಸ್ಮಾದ್ವಿದ್ವಾನ್ ಪ್ರಯತ್ನೇನ ತಜ್ಜ್ಞಾನಂ ಸಮುಪಾಚರೇತ್ ॥೧೬೩॥

ನಾಡೀಜ್ಞಾನವನ್ನು ಅರಿಯದ ವೈದ್ಯನು ವಿದ್ವಾಂಸರಾದ ವೈದ್ಯರ ಸಭೆಯಲ್ಲಿ ಶ್ಲಾಘಿಸಲ್ಪಡಲಾರನಾದ್ದರಿಂದ ನಾಡೀಜ್ಞಾನವನ್ನು ಅವಶ್ಯವಾಗಿ ವೈದ್ಯನು ತಿಳಿದಿರಬೇಕು.

ನಾಡೀಜ್ಞಾನವನ್ನು ಪಡಕೊಳ್ಳುವ ರೀತಿ

ಕ್ವಚಿದ್ಗ್ರಂಥಾನುಸಂಧಾನಾತ್ಕಾಲದೇಶವಿಭಾಗತಃ ।
ಕ್ವಚಿತ್ಪ್ರಕರಣಾಚ್ಚಾಪಿ ನಾಡೀಜ್ಞಾನಂ ಭವೇದಿಹ ॥ ೧೬೪ ॥

ಈ ನಾಡೀಶಾಸ್ತ್ರವನ್ನು ತಿಳಿದುಕೊಳ್ಳಲಿಚ್ಛೆಯುಳ್ಳವರು ಕೆಲವಂ ಗ್ರಂಥ ದಿಂದಲೂ, ಕೆಲವಂ ಕಾಲದಿಂದಲೂ, ಕೆಲವಂ ದೇಶಭೇದದಿಂದಲೂ, ಕೆಲವಂ ಪ್ರಕರಣಾನುರೋಧದಿಂದಲೂ ತಿಳಿದುಕೊಳ್ಳಬೇಕು.

ನಾಡೀಜ್ಞಾನಪ್ರಾಪ್ತಿಲಕ್ಷಣವು

ಸದ್ಗುರೋರುಪದೇಶಾಚ್ಚ ದೇವತಾನಾಂ ಪ್ರಸಾದತಃ ।
ನಾಡೀ ಪರಿಚಯೋ ಲೋಕೇ ಪ್ರಾಯಃ ಪುಣ್ಯೇನ ಜಾಯತೇ ॥ ೧೬೫ ॥

ಈ ನಾಡೀಜ್ಞಾನವು ದೇವತಾನುಗ್ರಹದಿಂದಲೂ, ಸದ್ಗುರೂಪದೇಶ ದಿಂದಲೂ, ಪೂರ್ವಪುಣ್ಯದಿಂದಲೂ ಉಂಟಾಗುವದು.

ಡಾಕ್ಟ್ರಿಯುಮತಾನುಸಾರಪ್ರತ್ಯಕ್ಷನಾಡೀಜ್ಞಾನವು

ಸ್ವಸ್ಥಾನಾಂ ದೇಹಿನಾಂ ದೇಹೇ ವಯೋವಸ್ಥಾವಿಶೇಷತಃ ॥
ಪ್ರಚಲಂತಿ ಯಥಾ ನಾಡ್ಯಸ್ತತ್ಸಂಖ್ಯಾನಮಿಹೋಚ್ಯತೇ ॥ ೧೬೬ ॥

ರೋಗರಹಿತರಾದ ಮನುಷ್ಯರ ಬಾಲ್ಯ ಯೌವನ ವೃದ್ಧತ್ವಗಳಲ್ಲಿ ನಾಡೀಗತಿವಿಶೇಷಗಳಂ ತಿಳಿಯಪಡಿಸುವೆನು.

ಸಾರ್ಧದ್ವಯಪಲಃ ಕಾಲೋ ಯಾವದ್ಗಚ್ಛತಿ ಜನ್ಮತಃ ।
ತಾವತ್ಪ್ರಕಂಪತೇ ನಾಡೀ ಚತ್ವಾರಿಂಶಚ್ಛತಾಧಿಕಂ ॥ ೧೬೭ ॥

ಮನುಷ್ಯನು ಜನ್ಮಿಸಿದ ಕ್ಷಣದಲ್ಲಿ ಅವನ ನಾಡಿಯು ಒಂದು ತಾಸಿಗೆ ೧೪೦ ಸಾರಿ ಚಲಿಸುತ್ತಿರುವದು.

ತದೂರ್ಧ್ವವತ್ಸರಂ ಯಾವತ್ಸಾರ್ಧದ್ವಯಪಲೇನ ಸಾ ।
ಮುಹುಃ ಪ್ರಕಂಪಮಾಧತ್ತೇ ತ್ರಿಂಶದ್ವಾರಂ ಶತೋತ್ತರಂ ॥ ೧೬೮ ॥

ಜನನ ಕಾಲ ಮೊದಲ್ಗೊಂಡು ಒಂದು ಸಂವತ್ಸರದವರಿಗೆ ನಾಡಿಯು ಒಂದು ಘಂಟೇ ಹೊತ್ತಿನಲ್ಲಿ ೧೩೦ ಸಾರಿ ಚಲಿಸುತ್ತಿರುವದು.

ಉಪರಿಷ್ಟಾದಾದ್ವಿತೀಯಾತ್ತಾವತ್ಕಾಲೇ ಶರೀರಿಣಃ ।
ತತಃ ಪ್ರಕಂಪತೇ ನಾಡೀ ದಶಾಧಿಕಶತಂ ಮುಹುಃ ॥ ೧೬೯ ॥

ಆ ಕಾಲ ಮೊದಲ್ಗೊಂಡು ೨ ಸಂವತ್ಸರಗಳಾಗುವವರಿಗೂ ೧೧೦ ಸಾರಿ ನಾಡಿ ನಡಿಯುತ್ತಿರುವದು.

ತತಸ್ತ್ರಿವತ್ಸರಂ ಪ್ರಾಪ್ಯ ದೇಹಿನಾಂ ಧಮನೀ ಪುನಃ ।
ಮುಹುಃ ಪ್ರಕಂಪತೆ ತದ್ವತ್ಸಾರ್ಧದ್ವಯಪಲೇ ಶತಂ ॥ ೧೭೦ ॥

ಮೂರನೇ ಸಂವತ್ಸರದಿಂದ ನಾಲ್ಕನೆ ಸಂವತ್ಸರದವರಿಗೂ ನಾಡಿಯು ೧೦೦ ಸಾರಿ ನಡಿಯುವದು.

ತತಸ್ತ್ವಾಸಪ್ತಮಾದ್ವರ್ಷಾನ್ನವತಿಃ ಸ್ಯಾತ್ಪ್ರಲೇಪನಂ ।
ಧಮನ್ಯಾಸ್ತನ್ಮಿತೇ ಕಾಲೇ ಪ್ರತ್ಯಕ್ಷಾದನುಭೂಯತೇ ॥ ೧೭೧ ॥

ನಾಲ್ಕನೇ ಸಂವತ್ಸರದ ಮೊದಲ್ಗೊಂಡು ಏಳನೇ ಸಂವತ್ಸರದವರಿಗೂ ಘಂಟೆಗೆ ೯೦ ಸಾರಿ ನಾಡಿಯು ಚಲಿಸುತ್ತಿರುವದು, ಇದು ಅನುಭವಸಿದ್ಧ.

ತತಶ್ಚತುರ್ದಶಂ ತಾವತ್ಪಂಚಾಶೀತಿ ಪ್ರವೇಪನಂ ।
ತ್ರಿಂಶದ್ವರ್ಷಮಭಿವ್ಯಾಪ್ಯ ತತೋಽಶೀತಿ ಪ್ರಕೀರ್ತಿತಃ ॥ ೧೭೨ ॥

ಏಳನೇ ಸಂವತ್ಸರದ ಮೊದಲು ೧೪ ವರುಷದವರಿಗೆ ನಾಡಿಯು ಘಂಟೆಗೆ ೮೫ ಸಾರಿಯೂ, ೧೪ ವರುಷ ಮೊದಲ್ಗೊಂಡು ೩೦ ವರುಷದವರಿಗೆ ಘಂಟೆಗೆ ೮೦ ಸಾರಿಯೂ ಚಲಿಸುವದು.

ಪಂಚಾಶದ್ವತ್ಸರಂ ಪ್ರಾಪ್ಯ ಕಂಪನಂ ಪಂಚಸಪ್ತತಿ ।
ತತೋಽಶೀತೌ ಪ್ರಕಥಿತಷಷ್ಟಿವಾರಂ ಪ್ರವೇಪನಂ ॥ ೧೭೩ ॥

೩೦ ವರುಷ ಮೊದಲು ೫೦ ವರುಷದವರಿಗೆ ೭೫ ಸಾರಿಯೂ, ೫೦ ವರುಷ ಮೊದಲ್ಗೊಂಡು ೮೦ ವರುಷದವರಿಗೂ ೬೦ ಸಾರಿಯು ನಾಡಿಯು ನಡಿಯುತ್ತಿರುವದು.

ವಯೋಽವಸ್ಥಾಕ್ರಮೇಣೈವಂ ಕ್ಷೀಯಂತೇ ಗತಯೋ ಮುಹುಃ ।
ಸಾರ್ಧದ್ವಯಪಲೇ ಕಾಲೇ ನಾಡೀನಾಮುತ್ತರೋತ್ತರಂ ॥

ಜನನಾದಾರಭ್ಯ ವಯೋಽವಸ್ಥಾ ಕ್ರಮದಿಂದ ನಾಡಿಗಳಿಗೆ ಚಲನವು ಕಮ್ಮಿಯಾಗುತ್ತಾ ಬರುವದು.

ಏವಂ ಬಹುವಿಧಾದ್ರೋಗಾತ್ತತ್ತಲ್ಲಿಂಗಾನುಬೋಧಿನೀ ।
ನಾಡೀನಾಂ ಚ ಗತಿಸ್ತದ್ವತ್ ಭವೇತ್ಕಾಲಾತ್ಪೃಥಕ್ಪೃಥಕ್ ॥ ೧೭೪ ॥

ಹೀಗೆ ಹುಟ್ಟಿದ್ದು ಮೊದಲು ೮೦ ವರುಷದವರಿಗೆ ನಾಡಿಗಳ ಚಲನದ ಸಂಖ್ಯೆ ವ್ಯವಸ್ಥಿತವಾಗಿರಲು ಮಧ್ಯಕಾಲದಲ್ಲಿ ಜ್ವರಾದಿ ರೋಗಗಳು ಪ್ರಾಪ್ತವಾದರೆ ಆಗ ರೋಗಜ್ಞಾನಕ್ಕೆ ಹೇತುಭೂತವಾದ ನಾಡೀಗತಿ ಸಂಖ್ಯೆಯು ವ್ಯತ್ಯಸ್ತವಾಗುವದು.

ಹೃದಯಸ್ಯ ಬೃಹದ್ಭಾಗಸ್ಸಂಕೋಚಂ ಪ್ರಾಪ್ಯತೇ ಯದಿ ।
ಪ್ರಸಾರಯೇತ್ತದಾ ನಾಡೀಂ ವಾಯುನಾ ರಕ್ತವಾಹಿನೀಂ ॥ ೧೭೫ ॥

ಹೃತ್ಪಿಂಡದಲ್ಲಿ ಪ್ರದೇಶಾವಕಾಶವು ವಾಯುಗತಿ ವಿಶೇಷದಿಂದ ಸಂಕೋಚ ಹೊಂದಿದರೆ, ಆಗ ರಕ್ತವಾಹಿನಿಗಳಾದ ನಾಡಿಗಳು ಪ್ರಸರಿಸುವಂತೆ ಮಾಡುವದು.

ನಾಡೀಗತಿರತಿಕ್ಷೀಣಾ ಭವೇನ್ಮಲವಿಭೇದತಃ ।
ಜೀರ್ಣಜ್ವರಾದಲ್ಪರಕ್ತಾದ್ದುರ್ಬಲತ್ವಾಚ್ಚ ತಾದೃಶ ॥ ೧೭೬ ॥

ತರ್ಪಯಂತ್ಯಸೃಜಂ ದೇಹೇ ವ್ಯಾಘಾತೈರ್ಗತಿಬಂಧತಃ ।
ಚಂಚಲಾ ತೇಜಃಪುಂಜಾ ಚ ದುರ್ಬಲಾ ಕ್ಷೀಣದಾ ಧರಾ ॥ ೧೭೭ ॥

ನಾಡಿಗಳು ವಾಯುಸಂಚಾರದ್ವಾರಾ ಶರೀರದಲ್ಲಿ ರಕ್ತವ್ಯಾಪಿಸುವಂತೆ ಮಾಡುತ್ತಿವೆ. ಆ ರಕ್ತದೋಷ ವಿಶೇಷದಿಂದ ಆ ನಾಡಿಗಳಿಗೆ ಪ್ರತಿಬಂಧಕ ವುಂಟಾದರೆ ಆಗ ನಾಡಿಗಳು ಚಂಚಲವಾಗಿಯೂ ತೇಜಃಪುಂಜಗತಿಯುಳ್ಳ ದ್ದಾಗಿಯೂ ದುರ್ಬಲವಾಗಿಯೂ ಕ್ಷೀಣಗತಿಯುಳ್ಳದ್ದಾಗಿಯೂ ನಡಿಯು ತ್ತಿರುವದು.

ಚಂಚಲಾಗತಿ ನಾಡೀಲಕ್ಷಣವು

ರಕ್ತೋಷ್ಣೇ ಶೀಘ್ರಗಾ ನಾಡೀ ಜ್ವರೇ ಚಂಚಲತಾ ಭವೇತ್ ॥ ೧೭೮ ॥

ರಕ್ತದಿಂದುಷ್ಣವುಂಟಾದರೆ ಆಗ ನಾಡಿಯು ಅತಿವೇಗವಾಗಿಯೂ ಚಂಚಲವಾಗಿಯೂ ನಡಿಯುತ್ತಿರುವದು.

ತೇಜಃಪುಂಜ ನಾಡೀಲಕ್ಷಣವು

ಜ್ವರಾರಂಭೇ ತಥಾ ವಾತೇ ತೇಜಃಪುಂಜಗತಿಃ ಸಿರಾ ॥ ೧೭೮ ॥

ಜ್ವರಾರಂಭದಲ್ಲಿಯೂ ವಾತರೋಗದಲ್ಲಿಯೂ ನಾಡಿಯು ತೇಜಃಪುಂಜ ಗತಿಯುಳ್ಳದ್ದಾಗಿರುವದು.

ದುರ್ಬಲವಂತನು ಕ್ಷೀಣನಾಡಿವುಳ್ಳವನು, ಇವರ ನಾಡೀಲಕ್ಷಣವು

ದುರ್ಬಲೇ ಜ್ವರರೋಗೇ ಚ ಅತಿಸಾರೇ ಪ್ರವಾಸಿಕೇ ।
ದುರ್ಬಲಾ ಕ್ಷೀಣದಾ ನಾಡೀ ಪ್ರಬಲಾ ಪ್ರಾಣಘಾತಿಕಾ ॥ ೧೭೯ ॥

ದುರ್ಬಲರೋಗ, ಜ್ವರ ಅತಿಸಾರ ಗ್ರಹಣೀರೋಗ ಇವುಗಳಲ್ಲಿ ನಾಡಿಯು ಬಹಳ ದುರ್ಬಲವಾಗಿರುವದು. ಹಾಗಿಲ್ಲದೇ ಪ್ರಬಲವಾಗಿದ್ದರೆ ಪ್ರಾಣಕ್ಕೆ ಅಪಾಯವುಂಟಾಗುವದು.

ಧೀರಾಗತಿನಾಡೀಲಕ್ಷಣವು

ಬಹುಕಾಲಗತಾ ರೋಗಾ ಸಾ ನಾಡೀ ಧೀರಗಾಮಿನೀ ॥ ೧೮೦ ॥

ಬಹುಕಾಲದಿಂದ ರೋಗಪೀಡಿತನಾದವನ ನಾಡಿಯು ಧೀರನಾಡಿಯನ್ನಲ್ಪಡುವದು.

ಇತಿ ನಾಡೀಜ್ಞಾನಪ್ರಕಾಶಿಕಾ

ಸಮಾಪ್ತಾ

ಇಂತು ನಾಡೀಜ್ಞಾನ ಪ್ರಕಾಶಿಕೆಯು

ಸಮಾಪ್ತಮಾದುದು.

ಮಂಗಳಮಸ್ತು.

ಅನುಬಂಧ : ಒಂದು

(ನಾಡೀ ವಿಜ್ಞಾನವನ್ನು ಕುರಿತ ಮುಂದಿನ ಭಾಗವನ್ನು 1876ರಲ್ಲಿ ಅಚ್ಚಾದ 'ಆಯುರ್ವೇದ ಸಂಗ್ರಹವೆಂಬ ಸತಾತ್ಪರ್ಯ ಬಾಲಬೋಧವಾದ ಹಿಂದೂ ವೈದ್ಯಶಾಸ್ತ್ರ' ಎಂಬ ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ. ಈ ಗ್ರಂಥ ವನ್ನು ಸಿದ್ಧಪಡಿಸಿದವರು ಸಿದ್ಧಾಂತಿ ಓರಗಂಟಿ ಸುಬ್ರಹ್ಮಣ್ಯ ಶಾಸ್ತ್ರಿಗಳು ; ಗ್ರಂಥ ವನ್ನು ಪ್ರಕಟಿಸಿದವರು ವೆಲನಾಡು ಅಮಡುಪುಟ್ಟು ಬಿ. ಸುಬ್ಬೈಯ್ಯನವರು; ಗ್ರಂಥ ಅಚ್ಚಾದುದು ಬೆಂಗಳೂರಿನಲ್ಲಿದ್ದ ಮೈಸೂರು ಬುಕ್ ಡಿಪೋ ಮುದ್ರಾಕ್ಷರ ಶಾಲೆ ಯಲ್ಲಿ.)

ಶಾರ್ಙ್ಗಧರ ಸಂಹಿತಾಯಾಂ–

ಕರಸ್ಯಾಂಗುಷ್ಠಮೂಲೇ ಯಾ ಧಮನೀ ಜೀವಸಾಕ್ಷಿಣೀ ।
ತಚ್ಚೇಷ್ಟಯಾ ಸುಖಂ ದುಃಖಂ ಜ್ಞೇಯಂ ಕಾಯಸ್ಯ ಪಂಡಿತೈಃ ॥

ಇತ್ಯಾದಿ

ಪುಂಸಾಂ ದಕ್ಷಿಣಹಸ್ತೇ ಚ ವಾಮಹಸ್ತೇ ಚ ಯೋಷಿತಾಂ ।
ಅಂಗುಷ್ಠಮೂಲದೇಶೇ ತು ಸ್ಪ್ರಷ್ಟವ್ಯಂ ತ್ರಿಭಿರಂಗುಲ್ಯೈಃ ॥
ತರ್ಜನೀ ಮಧ್ಯಮಾನಾಮಿಕಾಂಗುಲೀಭಿಃ ಪ್ರಪೀಡಯೇತ್ ।
ಧಮನೀಮಪಿ ತದ್ವೇಗಂ ಸ್ಪರ್ಶಂ ರೂಪಂ ಗುಣಾಂಸ್ತಥಾ ॥
ಕಾಲಂ ದೇಶಂ ಬಲಂ ಕರ್ಮ ಜ್ಞಾತ್ವಾ ಪ್ರಕೃತಿಮುನ್ನಯೇತ್ ॥

ಗಂಡಸರಿಗೆ ಬಲಗೈಯಲ್ಲಿಯೂ, ಹೆಂಗಸರಿಗೆ ಎಡಗೈಯಲ್ಲಿಯೂ ಮೊದಲು ನಾಡಿಯನ್ನು ಪರೀಕ್ಷಿಸಿ, ಬಳಿಕ ಪ್ರಕೃತವಿದ್ದರೆ ಹದಿನಾಲ್ಕು ನಾಡೀ ಸ್ಥಾನಗಳನ್ನೂ ಹಿಡಿದು ನೋಡಬೇಕು. ಕೈಯ್ಯ ಹೆಬ್ಬೆಟ್ಟಿನ ಕೆಳಗೆ ತಟ ಗುಟ್ಟುವ ನರದ ಗತಿಯು ಪ್ರಾಣಕ್ಕೆ ಸಾಕ್ಷಿಯಾಗಿರುತ್ತೆ. ವೈದ್ಯನು ತನ್ನ ತರ್ಜನೀ, ಮಧ್ಯಮೆ, ಅನಾಮಿಕೆ ಎಂಬ ಮೂರು ಬೆರಳುಗಳ ಕೊನೆಗಳಿಂದ ರೋಗಿಯ ಹೆಬ್ಬೆರಳ ಕೆಳಗಿನ ನರವನ್ನು ವತ್ತಿ ವತ್ತಿ ಹಿಡಿದು ನೋಡಿದರೆ

ಮೇಲಿನಿಂದ ಕ್ರಮವಾಗಿ ಕೆಳಕ್ಕೆ ವಾತ ಪಿತ್ತ ಶ್ಲೇಷ್ಮಗಳ ಸ್ಥಾನಗತಿಗಳು ತಿಳಿಯು ಬರುತ್ತವೆ. ನಾಡೀಗತಿ ವೇಗದಿಂದಲೂ, ಶೀತೋಷ್ಣಾದಿ ಸ್ಪರ್ಶಗಳಿಂದಲೂ, ರೋಗಿಯ ಮುಖವರ್ಣ, ಚೇಷ್ಟೆ, ಸ್ವರ ಮುಂತಾದವುಗಳಿಂದಲೂ, ಶ್ವಾಸ ಬಿಡುವದರಿಂದಲೂ, ಬೆವರು ಕಂಪು ಮುಂತಾದ್ದರಿಂದಲೂ, ಹೊತ್ತು, ಸ್ಥಲ ಕೆಲಸಗಳ ಪೂರ್ವೋತ್ತರ ಸಂದರ್ಭಗಳ ಔಚಿತ್ಯದಿಂದಲೂ, ಪ್ರಕೃತಾನುಸಾರ ವಾಗಿ ಯೋಚಿಸಿ ರೋಗಿಯ ಪ್ರಕೃತಿಯನ್ನೂ ರೋಗ ಸ್ಥಿತಿಯನ್ನೂ ಕಂಡು ಹಿಡಿಯಬೇಕು.

ನಾಡೀ ಧತ್ತೇ ಮರುತ್‌ಕೋಪೇ ಜಲೂಕಾಸರ್ಪಯೋರ್ಗತಿಂ ।
ಕಿಂಚ ।

ವಾತನಾಡೀ ವಕ್ರಗತಿರ್ಭೇಕಲಾವುಕಸರ್ಪವತ್ ।
ಕುಳಿಂಗ ಕಾಕ ಮಂಡೂಕಗತಿಂ ಪಿತ್ತಪ್ರಕೋಪತಃ ॥

ಹಂಸಪಾರಾವತಗತಿಂ ಧತ್ತೇ ಶ್ಲೇಷ್ಮ ಪ್ರಕೋಪತಃ ।
ಲಾವತಿತ್ತಿರಿ ವರ್ತೀನಾಂ ಗಮನಂ ಸನ್ನಿಪಾತತಃ ॥

ಕದಾಚಿನ್ಮಂದಗಮನಾ ಕದಾಚಿದ್ವೇಗವಾಹಿನೀ ।
ದ್ವಿದೋಷಕೋಪತೋ ಜ್ಞೇಯಾ ಹಂತಿ ಚ ಸ್ಥಾನವಿಚ್ಯುತಾ ॥

ಸ್ಥಿತ್ವಾ ಸ್ಥಿತ್ವಾ ಚಲತಿ ಯಾ ಸಾ ಸ್ಮೃತಾ ಪ್ರಾಣನಾಶಿನೀ ॥
ಅತಿಕ್ಷೀಣಾ ಚ ಶೀತಾ ಚ ಜೀವಿತಂ ಹಂತ್ಯಸಂಶಯಂ ॥

ಜ್ವರಕೋಪೇನ ಧಮನೀ ಸೋಷ್ಣಾ ವೇಗವತೀ ಭವೇತ್ ।
ಕಾಮಕ್ರೋಧೋದ್ಭವಾದ್ವೇಗಾತ್ ಕ್ಷೀಣಾ ಚಿಂತಾಭಯಾಪ್ಲುತಾ ॥

ಮಂದಾಗ್ನೇಃ ಕ್ಷೀಣಧಾತೋಶ್ಚ ನಾಡೀ ಮಂದತರಾ ಭವೇತ್ ।
ಅಸೃಕ್ಪೂರ್ಣಾ ಭವೇತ್ ಕೋಷ್ಣಾ ಗುರ್ವೀ ಸಾಮಾಗರೀಯಸೀ ॥

ಲಘ್ವೀ ಭವತಿ ದೀಪ್ತಾಗ್ನೇಸ್ತಥಾ ವೇಗವತೀ ಭವೇತ್ ।
ಸುಖಿತಸ್ಯ ಸ್ಥಿರಾ ಜ್ಞೇಯಾ ತಥಾ ಬಲವತೀ ಮತಾ ॥

ಚಪಲಾ ಕ್ಷುಧಿತಸ್ಯಾಪಿ ತೃಪ್ತಸ್ಯ ವಹತಿ ಸ್ಥಿರಾ ।
ನಿಜಸ್ಥಾನೋತ್ಥಿತಾ ನಾಡೀ ಯತ್ರೋದ್ಗಮತಿ ಲೀಯತೇ ॥

ಸರೀಸರ್ಪತಿ ಚ ಸ್ಥಾನ ದೋಷನಾಮ್ನ್ಯಭಿಧೀಯತೇ ।
ಯಥಾಸ್ಥಾನಗತಾಂ ನಾಡೀಂ ಸಮಾಮಾರೋಗ್ಯದಾಂ ವಿದುಃ ।
ರೋಗನಾಡೀಂ ತು ವಿಷಮಾಂ ಪ್ರಾಣನಾಡ್ಯೇವ ಜೀವಿಕಾ ॥

ವಾತಪಿತ್ತ ಶ್ಲೇಷ್ಮಗಳು ಅವುಗಳ ಸ್ಥಳಗಳಲ್ಲಿಯೇ ಸಮವಾಗಿ ತಟ ಗೊಟ್ಟಿದರೆ, ಅದು ಆರೋಗ್ಯಸ್ಥಿತಿಯೆಂದರಿವುದು. ಗತಿಯೊಳಗಾದರೂ, ಸ್ಥಾನದೊಳಗಾದರೂ, ಹೆಚ್ಚು ಕಡಿಮೆಯಾಗಲೀ, ವೈಪರೀತ್ಯವಾಗಲೀ, ತೋರಿದರೆ ಅದು ರೋಗನಾಡೀಯೆಂದರಿವುದು. ಹಾಗೆಯೇ ಶೀತೋಷ್ಣ ಸ್ಪರ್ಶಾದಿ ಸರ್ವ ವಿಷಯಗಳಲ್ಲಿಯೂ, ಪ್ರಕೃತೋಚಿತವಾಗಿ ಸಮಸ್ಥಿತಿಯು ಆರೋಗ್ಯಲಕ್ಷಣವೆಂತಲೂ, ವಿಷಮಸ್ಥಿತಿಯು ರೋಗ ಲಕ್ಷಣವೆಂತಲೂ ತಿಳಿಯತಕ್ಕದ್ದು.

ಜಿಗಿಣಿಯ ಹಾಗೂ, ಹಾವಿನಂತೆಯೂ, ವಕ್ರವಾಗಿ ಹೊರಳುತ್ತಲೂ, ಲ್ಯಾವಿಗೇ ಹಕ್ಕಿಯ ಹಾಗೆ ಸ್ವಲ್ಪ ನೆಗೆಯುತ್ತಲೂ ಇರುವದು ವಾಯು ಕೆರಳಿದ ನಾಡಿಯೆಂದರಿವುದು. ಕಾಗಿಯ ಹಾಗೂ, ಕಪ್ಪೆಯ ಹಾಗೂ ಪುಟನೆಗೆದಾಡುವದು ಪಿತ್ತ ಕೆರಳಿದ ನಾಡಿಯೆಂದರಿವುದು. ಅಂಚೆವಕ್ಕಿ ಯಂತೆಯೂ. ಹಾರಿವಣದ ಹಕ್ಕಿಯ ಹಾಗೂ, ನಡಿಯುವುದು ಶ್ಲೇಷ್ಮ ಕೆರಳಿದ ನಾಡಿಯೆಂದರಿವುದು.

(ವಾತವೆಂದರೆ ಅನ್ನಕೋಶ ಮುಂತಾದ ಚೀಲಗಳ ಒಳ ಬೈಲಿಸಲ್ಲಿ ತುಂಬಿದ ಗಾಳಿಯಾಗಿದೆ. ಪಿತ್ತವೆಂದರೆ ಉಷ್ಣಲಕ್ಷಣವಾಗಿ ಹಳದೀ ಬಣ್ಣ ದಿಂದ ಮಂಣಿನ ಹಾಗೂ, ಉಪ್ಪಿನ ಹಾಗೂ, ಪಿತ್ತ ಚೀಲದಲ್ಲಿ ತುಂಬಿರು ತ್ತದೆ. ಶ್ಲೇಷ್ಮವೆಂದರೆ ಶೀತಲಕ್ಷಣವಾಗಿ ಶಿಂಬಳದ ಹಾಗೆ ಉಸುರು ಚೀಲಗಳ ಲ್ಲಿಯೂ, ಎದೆಯ ಮೇಲಣ ಕೊರಳ ಗೊಟ್ಟದ ಬಳಿಯಲ್ಲಿಯೂ ಇರುತ್ತದೆ).

ತಿತ್ತಿರಿ ಹಕ್ಕಿಯ ಹಾಗೆ ಉತ್ತರೋತ್ತರಾಧಿಕವಾಗಿ ವಿಷಮಗತಿ ಯುಳ್ಳದ್ದು ಸನ್ನಿಪಾತನಾಡಿಯೆಂದರಿವುದು. ಅದು ಕೆಲವು ವೇಳೆ ಮೆಲ್ಲ ಮೆಲ್ಲಗೂ, ಕೆಲವು ವೇಳೆ ಬೇಗ ಬೇಗನೆಯೂ, ತಟಗೊಟ್ಟುವದು. ಆಗ ದೋಷ ಸನ್ನಿಯೆಂದು ತಿಳಕೋಬೇಕು. ಶ್ಲೇಷ್ಮಧಾತು ಕಡಿಮೆಯಾಗಿದ್ದರೆ ಪಿತ್ತಾಧಿಕ್ಯದಲ್ಲಿ ವಾತಪಿತ್ತವೆಂತಲೂ, ವಾತಾಧಿಕ್ಯದಲ್ಲಿ ಪಿತ್ತವಾತವೆಂತಲೂ,

ತಿಳಿಯತಕ್ಕದ್ದು. ಪಿತ್ತನಾಡಿ ಕಡಿಮೆಯಾಗಿ ಶ್ಲೇಷ್ಮಕ್ಕಿಂತಲೂ ವಾತ ಹೆಚ್ಚಿದರೆ ಶೀತವಾತವೆಂತಲೂ, ವಾತಕ್ಕಿಂತಲೂ ಶ್ಲೇಷ್ಮ ಹೆಚ್ಚಿದರೆ ವಾತಶೀತವೆಂತಲೂ, ತಿಳಿಯತಕ್ಕದ್ದು. ವಾತನಾಡೀ ಕಡಿಮೆಯಾಗಿ ಶ್ಲೇಷ್ಮಕ್ಕಿಂತಲೂ ಪಿತ್ತ ಹೆಚ್ಚಾದರೆ ಶೀತಪಿತ್ತವೆಂತಲೂ, ಪಿತ್ತಕ್ಕಿಂತಲೂ ಶ್ಲೇಷ್ಮ ಹೆಚ್ಚಾದರೆ ಪಿತ್ತಶೀತವೆಂತಲೂ, ಈ ಮೇರೆ ವಾತಪಿತ್ತ ಶ್ಲೇಷ್ಮ ಸ್ಥಾನಗಳಲ್ಲಿ ತಟಗೊಟ್ಟುವ ನಾಡೀಗತಿಯ ವೇಗ ತಾರತಮ್ಯದಿಂದ ದೋಷ ಪ್ರಕೋಪವನ್ನು ಊಹಿಸಬೇಕು.

ನಾಡಿಯು ಸ್ಥಾನತಪ್ಪಿ ದೂರವಾಗಿ ಕಂಡರೆ ಅದು ಘಾತುಕನಾಡಿಯೆಂದರಿವುದು. ನಾಡಿಯು ಸ್ವಲ್ಪ ಹೊತ್ತು ಯಥಾಸ್ಥಾನವಾಗಿಯೂ, ಸ್ವಲ್ಪಹೊತ್ತು ಸ್ಥಲಾಂತರದಲ್ಲಿಯೂ ಚಲಿಸುತ್ತಿದ್ದರೆ ಅದು ಪ್ರಾಣನಾಶನ ನಾಡಿಯೆಂದು ತಿಳಕೋಬೇಕು. ಆ ಸ್ಥಿತಿಯಲ್ಲಿ ನಾಡಿಯು ಸೂಕ್ಷ್ಮವಾಗಿಯೂ, ಮಂದಗತಿಯಾಗಿಯೂ, ತಣ್ಣನೆ ಸ್ಪರ್ಶವುಳ್ಳದ್ದಾಗಿಯೂ ಇದ್ದರೆ ಅದು ಮರಣನಾಡಿಯೆಂದು ನಿಶ್ಚಯಿಸತಕ್ಕದ್ದು.

ನಾಡಿಯು ವೇಗದಿಂದೊಡಗೂಡಿ ಬಿಸಿಯಾಗಿ ತೋರಿದರೆ ಜ್ವರಲಕ್ಷಣವಾಗಿರುವದು. ಉಷ್ಣವಾಯುವು ಕೆರಳಿದವರಿಗೂ, ಜ್ವರ ಬಂದವರಿಗೂ, ನಾಡಿಯು ಒಂದೇ ಬಗೆಯಾದರೂ ಇತರವಾದ ಜ್ವರ ಲಕ್ಷಣಗಳಿಂದ ವಿವೇಕಿಸಿಕೊಳ್ಳತಕ್ಕದ್ದು. ಜ್ವರವು ಅಂತರ್ಗತವಾಗಿದ್ದರೆ ನಾಡಿಯು ಕ್ಷೀಣಗತಿಯಾದರೂ ಸ್ವಲ್ಪ ವೇಗದಿಂದೊಡಗೂಡಿ ಕೈಗೆ ಸ್ವಲ್ಪ ಬಿಸಿಯಾಗಿ ತಿಳಿಯಬರುತ್ತೆ.

ಅತ್ಯಾಶೆ, ಸಿಟ್ಟು, ಭಯ, ಚಿಂತೆ ಈ ಅವಸ್ಥೆಗಳಲ್ಲಿ ಇರುವವರಿಗೆ ನಾಡಿಯು ಸೂಕ್ಷ್ಮವಾಗಿಯೂ, ಬೇಗಬೇಗನೆಯೂ ನಡಿಯುವದು. ಧಾತುಪುಷ್ಟಿ ಇಲ್ಲದವರಿಗೂ, ಮಂದಾಗ್ನಿಯಾದವರಿಗೂ, ನಾಡಿಯು ಮಂದಗತಿಯಾಗಿರುತ್ತೆ. ಮೈಯ್ಯಲ್ಲಿ ರಕ್ತಗತಿಯು ಹೆಚ್ಚಿ ಉಕ್ಕುವವರಿಗೆ ನಾಡಿಯು ಸ್ಪಷ್ಟವಾಗಿಯೂ, ಬಲವಾಗಿಯೂ, ಸ್ವಲ್ಪ ಬಿಸಿಯುಳ್ಳದ್ದಾಗಿಯೂ ತಿಳಿಯಬರುತ್ತೆ.

ಆಮ ವೃದ್ಧಿಯಾದವರಿಗೆ ನಾಡಿಯು ಮಂದಗತಿಯಾಗಿಯೂ, ಬಲವಾಗಿಯೂ, ಸ್ಪಷ್ಟವಾಗಿಯೂ ಮಿಡುಕುತ್ತದೆ. ಜಠರಾಗ್ನಿ ಬಲ ಹೆಚ್ಚಿದವರಿಗೆ ನಾಡಿಯು ತೇಲಿಕೆಯಾಗಿಯೂ, ಬೇಗಬೇಗಲೂ, ತಟಗೊಟ್ಟುವದು. ಸುಖವಾಗಿರುವಂಥಾವರಿಗೆ ನಾಡಿಯು ಬಲವುಳ್ಳದ್ದಾಗಿಯೂ, ಸ್ಥಿರವಾಗಿಯೂ

ಚಲಿಸುತ್ತದೆ. ಹಸಿವುಗೊಂಡವರಿಗೆ ಚಪಲವಾಗಿಯೂ, ತೃಪ್ತರಾದವರಿಗೆ ಸಮಾಧಾನವಾಗಿಯೂ ಚಲಿಸುವದು.

ಮತ್ತು ನಾಡಿಯು ತಟಗೊಟ್ಟುವ ಗುಂಡಿಗೆ ಮೊದಲಾದ ಇತರ ಸ್ಥಳ ಗಳಲ್ಲಿಯೂ ನೋಡಬಹುದು.

ರೋಗಿಗಳ ನಾಡಿಯನ್ನು ಮುಟ್ಟಿ ನೋಡಬೇಕಾದ ಅವಶ್ಯಕವೂ ಅನು ಕೂಲವೂ ಇದ್ದಾಗಲೇ ಹಾಗೆ ಮುಟ್ಟಿ ನೋಡಬೇಕಲ್ಲದೆ, ಕ್ರೂರವಾದ ಸಾಂಕ್ರಾಮಿಕ ವ್ಯಾಧಿಗಳು ಉಳ್ಳವರಿಗೆ ನಾಲಿಗೆ, ಕಣ್ಣು, ತುಟಿ ಮೊದಲಾ ದವುಗಳ ವರ್ಣ, ದ್ರವ ಮೊದಲಾದ ಲಕ್ಷಣಗಳನ್ನು ನೋಡಿದ ಮಾತ್ರ ದಿಂದಲೇ ಮೇಲೆ ಹೇಳಿದ ಸ್ವರ ಚೇಷ್ಟಾದಿ ಲಕ್ಷಣಗಳ ಅನುಮಾನದಿಂದ ರೋಗಮೂಲವನ್ನು ಊಹಿಸಬೇಕು.

ಮತ್ತು ನಾಡಿಯಿಂದಲೇ ತಿಳಿಯಕೊಡದ ಒಳನೋವು ಮುಂತಾದ ಇತರ ವ್ಯಾಧಿಗಳಲ್ಲಿ ಅಂಗಾಂಗಗಳನ್ನು ಮುಟ್ಟಿ ನೋಡಿ ರೋಗಸ್ಥಾನ ರೀತಿ ಗಳನ್ನು ಊಹಿಸಬೇಕು.

ಈ ಮೇರೆ ಧಾತುಪರೀಕ್ಷೆ ಎಂಬುವದು ಅನುಭವ ಪರೀಕ್ಷೆಯೊಂದಿಗೆ ಚಾತುರ್ಯದಿಂದಲೂ ಶಾಸ್ತ್ರಜ್ಞಾನದಿಂದಲೂ ವೈದ್ಯನ ಯೋಗ್ಯತಾನುಸಾರ ವಾಗಿ ಸಾಧ್ಯವಾಗತಕ್ಕದ್ದು.

ಭೂತನಾಡಿ

ಗ್ರಹಗ್ರಸ್ತಸ್ಯ ಯಾ ನಾಡೀ ಪಿತ್ತೋತ್ಥಾ ವಾತಮಾಶ್ರಯೇತ್ ।
ಸವ್ಯದಕ್ಷಿಣಯೋರನ್ಯತರಸ್ಮಿನ್ ಕಂಪವೇಗಯುಕ್ ॥

ವೀಕ್ಷಣೇ ವಿಕೃತಿಶ್ಚೈವ ಚಕ್ಷುಷ್ಕೋಣೇ ಸರಕ್ತತಾ ।
ಕ್ವಚಿದುಷ್ಣಂ ಕ್ವಚಿತ್‌ಶೀತಂ ಸ್ವಪ್ನಜಾಗರಣಭ್ರಮಃ ॥

ಅನ್ನಪಾನಾತಿಯೋಗಿತ್ವಾಮನನ್ನೇऽಪಿ ಬಲೋಚ್ಛ್ರಯಃ ।
ಇತ್ಯಾದಿ ಕಾರಣೈರೂಹ್ಯಾ ಭೂತನಾಡೀ ಮನೀಷಿಭಿಃ ॥

ಭೂತ, ಪ್ರೇತ, ಪಿಶಾಚ, ಅಪಸ್ಮಾರ, ಯಕ್ಷಿಣಿ, ಮೋಹಿನಿ, ಬೇತಾಳ, ಯಕ್ಷ, ಮುನಿ, ಬ್ರಹ್ಮರಾಕ್ಷಸ, ದೆವ್ವ, ಬಾಲಗ್ರಹ ಮುಂತಾದ ಗ್ರಹಪೀಡಿತ

ರಾದವರಿಗೆ ನಾಡಿಯು ಪಿತ್ತವಾತ ಸಂಕಲಿತವಾಗಿಯೂ, ಕಂಪದಿಂದಲೂ ವೇಗದಿಂದಲೂ ಕೂಡಿ ಇರುತ್ತೆ. ಸ್ಪರ್ಶವು ತಣುವಾಗಿಯೂ ಕೂಡ್ಲೆ ಬಿಸಿಯಾಗಿಯೂ ಅವ್ಯವಸ್ಥೆಯನ್ನು ಹೊಂದಿರುತ್ತದೆ. ಆಕಸ್ಮಿಕವಾಗಿ ನೋಟದಲ್ಲಿ ಕ್ರೂರತ್ವವು, ಕಂಣುಗಳಲ್ಲಿ ವ್ಯೈಕವು, ಬಿಗುವು, ಕಂಣುಕೊನೆಗಳಲ್ಲಿ ಕೆಂಪು, ಅತ್ಯಾಹಾರವು, ಅಥವಾ ನಿರಾಹಾರವು, ಬಹಳ ನಿಃಶಕ್ತಿಯೂ, ಕೂಡ್ಲೆ ಮಹಾಬಲವು, ಇತ್ಯಾದಿ ವಿಪರೀತ ಲಕ್ಷಣಗಳಿರುತ್ತವೆ. ನಿದ್ದೆಯಲ್ಲಿ ಪಲವರಣೆಯೂ, ಪೇಚಾಟವು, ವಿಟ್ಲುಬೀಳೋಣವು, ಭಯವು, ಗುಂಡಿಗೆ ಡವಗುಟ್ಟೋಣವು, ದುಸ್ವಪ್ನಗಳಾಗೋಣವು, ಹೀಗಿದ್ದರೆ ಭೂತನಾಡಿಯುಂದು ಕುರುಹಿಡತಕ್ಕದ್ದು.

ಕೆಲವರ ಮತದಲ್ಲಿ ಭೂತನಾಡಿಯೇ ಹೇಳಲ್ಪಡಲಿಲ್ಲವು. ಅವರು ಭೂತನಾಡಿ ಲಕ್ಷಣಗಳನ್ನು ಬೇರೆ ರೋಗ ಲಕ್ಷಣಗಳಂತಲೇ ಹೇಳುವರು. ಆದರೆ ಯಾವ ಬಗೆ ವೈದ್ಯರ ಮದ್ದುಗಳಿಂದಲೂ ಗುಣವಾಗದೇ ಮಂತ್ರ ತಂತ್ರ ಚಿಕಿತ್ಸೆಗಳಿಂದಲೇ ಗುಣವಾಗಿರುವ ರೋಗಿಗಳನ್ನು ಅನೇಕವಾಗಿ ನೋಡಿದ್ದೇವೆಯಾಗಿ ಮಂತ್ರ ತಂತ್ರ ಶಾಸ್ತ್ರಗಳನ್ನು ಅಪ್ರಮಾಣವೆನ್ನಲಾರೆವು. ರೋಗಲಕ್ಷಣಗಳು ಮಿಶ್ರವಾಗಿಯೇ ಕಾಣುವದರಿಂದ ರೋಗಮೂಲವನ್ನು ಇಂಥಾದ್ದೇ ಸರಿಯೆಂದು ನಿಶ್ಚೈಸೋಣವು ಪ್ರಾಯಶಃ ಕಷ್ಟಸಾಧ್ಯವಾಗಿರುತ್ತೆ.

ಗರ್ಭನಾಡಿ

ಸ್ಥೂಲಸೂಕ್ಷ್ಮಗತಿಭ್ಯಾಂ ತು ದೌಹೃದೇ ಸಹ ವರ್ತತೇ ।
ಅರುಂಧತೀಂ ವಶಿಷ್ಠಂ ಚ ಯಥಾ ಪಶ್ಯತಿ ತದ್‌ಭಿಷಕ್ ॥

ಪ್ರದರಾದ್ಯಗರತ್ವೇಽಪಿ ಪ್ರತಿಮಾ ಸಮನಾರ್ತವಾತ್ ।
ನಿದ್ರಾಲಸ್ಯಾರುಚಿ ಗುಣ್ಮೈರಾಶಾ ಚೂಚುಕನೈಲತಃ ॥

ಉದರಾದ್ಯಭಿವೃಧ್ಯಾ ಚ ಧಾವಳಾನ್ಮುಖನೇತ್ರಯೋಃ ।
ಭುಕ್ತ್ಯಂತಾಯಾಸವತ್ವೇನ ಜ್ಞಾಯತಾಂ ರತಿಮಾರ್ದವಾತ್ ॥

ಬಸುರಾದವರ ಎರಡು ಕೈಗಳಲ್ಲಿಯೂ ಅರುಂಧತಿಯಿಂದೊಡಗೂಡಿದ ವಸಿಷ್ಠ ನಕ್ಷತ್ರದ ಹಾಗೆ ಸೂಕ್ಷ್ಮಗತಿಯಿಂದೊಡಗೂಡಿದ ಸ್ಥೂಲಗತಿಯುಳ್ಳ

ನಾಡಿಯು ಜಂಟಿಯಾಗಿ ತಟಗೊಟ್ಟುವಂತೆ ಮಂದಗತಿಯಿಂದ ತೋರುವದು. ಮತ್ತು ತಿಂಗಳಗಟ್ಲೆ ಋತುವಾಗದೆ ನಿಂತಿರುವದು ಮತ್ತು ಮೊಲೆಗಳ ತೊಟ್ಟುಗಳು ಕಪ್ಪಾಗಿಯೂ, ಹೊಟ್ಟೆ ದಪ್ಪವಾಗಿಯೂ, ಮುಖವು ಕಂಣು ಗಳು ಬಿಳುಪಾಗಿಯೂ, ಬೈಕೆಗಳಾಗಿಯೂ, ಅರೋಚಕವಾಗಿಯೂ, ಉಂಡ ಕೂಡ್ಲೆ ಸ್ವಲ್ಪ ಆಯಾಸವಾಗಿಯೂ. ಕೆಲಸದಲ್ಲಿ ಆಲಸ್ಯವಾಗಿಯೂ, ನಿದ್ದೆ ಅಧಿಕವಾಗಿಯೂ, ಹಸಿವು ತಡೆಯಲಾರದೆಯೂ, ಮಂದವಾದ ರತಿಸುಖದಲ್ಲಿ ಅಪೇಕ್ಷೆಯು ಇರುವದರಿಂದ ಗರ್ಭನಾಡಿಯನ್ನು ನಿರ್ಧರಿಸಬೇಕು.

ಆದರೆ ಕೆಲವರಿಗೆ ಮೇಲೆ ಹೇಳಿದ ಲಕ್ಷಣಗಳು ಇಲ್ಲದೆ ಬಸುರಾಗಿ ಕೂಸು ಹೆರುವುದೂ ಉಂಟು. ಕುಸುಮಜಾಡ್ಯ ಮುಂತಾದ ಉಪಾಧಿಗಳಿದ್ದರೆ ಋತುವಾಗುತ್ತಲೇ ಇದ್ದು ಮಗುವನ್ನ ಹೆರುವದೂ ಉಂಟು. ಕ್ವಚಿತ್ ಗರ್ಭಲಕ್ಷಣಗಳು ಆಗಾಗ್ಯೆ ಅಡಗಿ ತೋರುತ್ತಾ ಗರ್ಭವಲ್ಲದೇ ರೋಗ ವಾಗಿದ್ದು ಮದ್ದುಗಳಿಂದ ಪರಿಹಾರವಾಗುವದೂ ಉಂಟು. ಕ್ವಚಿತ್ ಅಶ್ವ ಗರ್ಭವೆಂತಲೂ ಗಜಗರ್ಭವೆಂತಲೂ ದೀರ್ಘಕಾಲ ಬಸುರಾಗುವುದೂ ಉಂಟು. ಅಂಥವರಿಗೆ ರೋಗಲಕ್ಷಣವು, ಗ್ರಹಲಕ್ಷಣವು, ಗರ್ಭಲಕ್ಷಣವು, ಮಿಶ್ರವಾಗಿದ್ದರೆ ನಾಡೀಗತಿಯನ್ನು ನಿರ್ಧರಿಸೋಣವು ಅಶಕ್ಯವಾಗಿರುತ್ತೆ.

ನಾಡೀಜ್ಞಾನದ ಅವ್ಯವಸ್ಥೆ

ಅತ್ಯಂತ ಬಾಲವೃದ್ಧಾನಾಮುನ್ಮತ್ತಸ್ಯಾವ್ಯವಸ್ಥಿತಃ ।
ನಾಡೀಸೂಕ್ಷ್ಮಂ ವಿಜಾನೀಯಾದ್ಗುರು ದೇವ ಪ್ರಸಾದತಃ ॥

ಎಳೆ ಕೂಸುಗಳಿಗೂ ಬಹಳ ಮುದುಕರಿಗೂ, ವಿಲಕ್ಷಣವಾಗಿ ಹುಚ್ಚು ಹಿಡಿದವರಿಗೂ ನಾಡೀಗತಿಯ ವ್ಯವಸ್ಥೆಯೇ ಸಿಕ್ಕುವುದಿಲ್ಲ.

ನಾಡೀ ಪರಿಜ್ಞಾನವು ಚನ್ನಾಗಿದ್ದರೆ ಆಯುಷ್ಯದ ಪರಿಮಾಣವನ್ನು, ಉಂಡ ವಸ್ತುಗಳನ್ನೂ, ಮಾಡಿದ ಕೆಲಸಗಳನ್ನೂ ಕೂಡ ಊಹಿಸಿ ಸರಿಯಾಗಿ ಹೇಳಬಹುದು. ಆದರೆ ಅಷ್ಟು ವಿಶೇಷ ಜ್ಞಾನಾನುಭವಗಳೂ, ಹಸ್ತ ಶುದ್ಧಿಯೂ, ಮಹಾತ್ಮರಾದ ಗುರುಗಳ ಅನುಗ್ರಹದಿಂದ, ಮಂತ್ರಯೋಗ ಸಿದ್ಧಿಯುಳ್ಳವರಿಗೆ ದೈವಪ್ರಸಾದದಿಂದ ಲಭಿಸತಕ್ಕದ್ದೇ ಹೊರತು ಸಾಧಾರಣ ವೈದ್ಯರಿಗೆ ದೊರೆಯಲಾರದು.

ಅನುಬಂಧ : ಎರಡು

ವೈಷ್ಣವತಂತ್ರದಲ್ಲಿ ನಾಡೀವಿಜ್ಞಾನ

ಮನುಷ್ಯನಲ್ಲಿ ಸ್ಥೂಲಶರೀರ, ಸೂಕ್ಷ್ಮಶರೀರ ಎಂದು ಎರಡು ವಿಭಾಗಗಳು. ಸ್ಥೂಲಶರೀರದಲ್ಲಿ ಎಪ್ಪತ್ತೆರಡು ಸಾವಿರ ನಾಡಿಗಳು: ಎಡಭಾಗದಲ್ಲಿ ಮೂವತ್ತಾರು ಸಾವಿರ, ಬಲಭಾಗದಲ್ಲಿ ಮೂವತ್ತಾರು ಸಾವಿರ. ಒಂದೊಂದು ಭಾಗದಲ್ಲೂ ನಾಡಿಗಳ ವ್ಯವಸ್ಥೆ ಹೀಗೆ—

ಪಾದಾಧಾರ ನಾಡಿಗಳು—೧೨,೦೦೦
ಮಧ್ಯದೇಹ (ಕಂಠಾರಭ್ಯ ಕಟ್ಯಂತ)—೧೪,೦೦೦
ಬಾಹುಗಳು (ಭುಜಾರಭ್ಯ ಹಸ್ತಪರ್ಯಂತ) —೪,೦೦೦
ಶಿರಸ್ಸಿನಲ್ಲಿ—೬,೦೦೦
ಒಟ್ಟು ಒಂದು ಭಾಗದಲ್ಲಿ—೩೬,೦೦೦

ಹಗಲು ವೇಳೆ ಬಲಭಾಗದ ನಾಡಿಗಳಲ್ಲಿ ಅಜಾನಜಪುರುಷ ದೇವತೆಗಳೆಂಬುವರೂ, ರಾತ್ರಿಯ ವೇಳೆ ಎಡಭಾಗದ ನಾಡಿಗಳಲ್ಲಿ ಈ ಪುರುಷ ದೇವತೆಗಳ ಪತ್ನಿಯರೂ ಸಂಚರಿಸುವರು. ವಾಸುದೇವನಾಮಕನಾದ ಪರಮಾತ್ಮನೇ ಹೀಗೆ ಪುರುಷ ರೂಪಗಳನ್ನು ಧರಿಸಿ ಬಲಭಾಗದಲ್ಲಿಯೂ ಸ್ತ್ರೀರೂಪಗಳನ್ನು ಧರಿಸಿ ಎಡಭಾಗದಲ್ಲಿಯೂ ಇರುವನು. ಅವನ ಅಧೀನರಾಗಿ ದೇವತೆಗಳು ಕಾಮರೂಪಿಗಳಾಗಿದ್ದುಕೊಂಡು ಆಯಾ ಭಾಗಕ್ಕೆ ತಕ್ಕಂತೆ ಗಂಡು ಅಥವಾ ಹೆಣ್ಣುರೂಪಗಳನ್ನು ತಳೆಯುವರು.

ಮನುಷ್ಯನ ಆಯುರ್ಮಾನ ಒಂದು ನೂರು ವರ್ಷಗಳು. ಈ ಅವಧಿಯಲ್ಲಿ ಮೂವತ್ತಾರು ಸಾವಿರ ದಿನಗಳಾಗುತ್ತವೆ. ನಾಡೀಶರೀರದಲ್ಲಿ ದಂಪತಿ ಸಂಕೇತದಿಂದ ಮೂವತ್ತಾರು ಸಾವಿರ ಹಗಲುಗಳೂ ಮೂವತ್ತಾರು ಸಾವಿರ ರಾತ್ರಿಗಳೂ ಕೂಡಿ ಒಟ್ಟು ಎಪ್ಪತ್ತೆರಡು ಸಾವಿರ ನಾಡಿಗಳು. ಈ ಎಪ್ಪತ್ತೆರಡು ಸಾವಿರ ನಾಡಿಗಳಲ್ಲಿ ಚತುರ್ವಿಂಶತಿ (ಇಪ್ಪತ್ತನಾಲ್ಕು) ತತ್ತ್ವಗಳೂ ಆ ತತ್ತ್ವಗಳ ಅಭಿಮಾನಿದೇವತೆಗಳೂ ಇರುತ್ತಾರೆ. ತತ್ತ್ವಗಳು ಇಪ್ಪತ್ತನಾಲ್ಕಾಗುವುದು ಐದು ಜ್ಞಾನೇಂದ್ರಿಯಗಳು (ಶ್ರೋತ್ರ, ಚಕ್ಷು, ರಸನ, ಘ್ರಾಣ, ಸ್ಪರ್ಶ), ಐದು ಕರ್ಮೇಂದ್ರಿಯಗಳು (ವಾಕ್, ಪಾಣಿ,

ಪಾದ, ಪಾಯು, ಉಪಸ್ಥ), ಐದು ಮುಖ್ಯ ಪ್ರಾಣಗಳು (ಪ್ರಾಣ, ಅಪಾನ, ಉದಾನ, ಸಮಾನ, ವ್ಯಾನ), ಐದು ಉಪಪ್ರಾಣಗಳು (ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯ) ಮತ್ತು ನಾಲ್ಕು ಅಂತಃಕರಣ ವಿವರಗಳು (ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ) ಇವು ಕೂಡಿಕೊಂಡು.

ಸ್ಥೂಲಶರೀರವು ಈ ಇಪ್ಪತ್ತನಾಲ್ಕು ತತ್ತ್ವಗಳಿಂದಲೇ ಆದುದು. ಸ್ಥೂಲದೇಹದ ಷಡ್ಭಾವವಿಕೃತಿಗೆ ('ಅಸ್ತಿ' ಇರುವುದು, 'ಜಾಯತೇ' ಹುಟ್ಟುವುದು, 'ವರ್ಧತೇ' ಬೆಳೆಯುವುದು, 'ಪರಿಣಮತೇ' ಮಾರ್ಪಡುವುದು, 'ಕ್ಷೀಯತೇ' ಬಲಗುಂದುವುದು, 'ನಶ್ಯತೇ' ನಾಶಹೊಂದುವುದು, ಎಂಬ ಆರು ಬಗೆಗಳಲ್ಲಿ ವಿಕಾರವಾಗುವುದು) ಈ ತತ್ತ್ವಗಳೇ ಕಾರಣ. ಆರು ಬಗೆಯ ವಿಕಾರಗಳಿಂದ ಆರು ಅಲೆಗಳು (ಷಡೂರ್ಮಿಗಳು) ತಲೆದೋರುತ್ತವೆ: ಹಸಿವು (ಅಶನ), ಬಾಯಾರಿಕೆ (ಪಿಪಾಸಾ), ಶೋಕ, ಮೋಹ, ಮುಪ್ಪು (ಜರಾ) ಮತ್ತು ಸಾವು (ಮೃತಿ). ಈ ಇಪ್ಪತ್ತುನಾಲ್ಕು ತತ್ತ್ವಗಳಿಂದಲೇ ತ್ವಕ್, ರಕ್ತ, ಮಾಂಸ, ಮೇದ, ಮಜ್ಜಾ, ಅಸ್ತಿ ಎಂಬ ಆರು ಕೋಶಗಳು (ವೈದ್ಯಶಾಸ್ತ್ರದಲ್ಲಿ ಇವುಗಳಿಗೆ ಧಾತುಗಳೆಂದು ವ್ಯವಹಾರ) ಮೈದಳೆಯುತ್ತವೆ. ಇವುಗಳ ವ್ಯವಸ್ಥೆಯಿಂದಲೇ ವಿಶ್ವ (ಎಚ್ಚರ), ತೈಜಸ (ಕನಸು), ಪ್ರಾಜ್ಞ (ನಿದ್ರೆ) ಎಂಬ ಮೂರು ಬಗೆಯ ಜೀವರೂ, ಸತ್ತ್ವ ರಜಸ್ಸು ತಮಸ್ಸು ಎಂಬ ಮೂರು ಗುಣಗಳೂ ಕಾಣಿಸಿಕೊಳ್ಳುತ್ತವೆ.

ಇಪ್ಪತ್ತನಾಲ್ಕು ತತ್ತ್ವಗಳ ಸಂಖ್ಯೆಯಲ್ಲಿ ಹೆಚ್ಚು ಕಡಮೆ ಆಗದಿದ್ದರೂ, ಶರೀರದ ನಾಡಿಗಳಲ್ಲಿ ಇವುಗಳ ಪ್ರಮಾಣ ಹೆಚ್ಚು ಕಡಮೆ ಆಗುತ್ತದೆ. ಪ್ರತಿಯೊಂದು ನಾಡಿಯಲ್ಲಿಯೂ ಇಪ್ಪತ್ತನಾಲ್ಕು ತತ್ತ್ವಗಳಿರುತ್ತವೆ; ಆ ತತ್ತ್ವಗಳಲ್ಲಿ ತತ್ತ್ವಾಭಿಮಾನಿ ದೇವತೆಗಳಿರುತ್ತಾರೆ; ಇಪ್ಪತ್ತುನಾಲ್ಕು ತತ್ತ್ವಾಭಿಮಾನ ಪುರುಷದೇವತೆಗಳೊಂದಿಗೆ ಆಯಾ ಸ್ತ್ರೀದೇವತೆಗಳೂ ಇರುತ್ತಾರೆ. ಎಂದರೆ ನಲವತ್ತೆಂಟು ರೂಪಗಳಲ್ಲಿ ದೇವತೆಗಳ ಸಂಚಾರ; ಹೀಗೆ ಪ್ರತಿ ನಾಡಿಯಲ್ಲಿಯೂ ವಾಸುದೇವನಾಮಕ ಪರಮಾತ್ಮನ ನಲವತ್ತೆಂಟು ರೂಪಗಳು. ಎಪ್ಪತ್ತೆರಡು ಸಾವಿರ ನಾಡಿಗಳಲ್ಲಿ ಸರ್ವದೇವತಾ ಸ್ವರೂಪನಾಗಿ ವಾಸುದೇವನ ರೂಪಗಳು ೩೪,೫೬,೦೦೦ (೭೨,೦೦೦ × ೪೮).

ಬಲಭಾಗದ ನಾಡಿಗಳನ್ನು ನದಿಗಳೆಂದು ಬಗೆದು ಅವುಗಳಲ್ಲಿ ಬ್ರಹ್ಮ, ವಾಯು, ಸರಸ್ವತೀ, ಭಾರತಿಯರು ವಿಹಾರ ಮಾಡುತ್ತಾರೆ. ಎಡಭಾಗದ

ನಾಡಿಗಳನ್ನು ಹಾಗೆಯೇ ನದಿಗಳೆಂದು ಬಗೆದು ಅವುಗಳಲ್ಲಿ ಸರ್ಪ (ಶೇಷ), ಗರುಡ, ರುದ್ರ, ಷಣ್ಮಹಿಷಿಯರು (ನೀಲಾ, ಜಾಂಬುವತೀ ಇತ್ಯಾದಿ), ವಾರುಣೀ (ಶೇಷಪತ್ನಿ), ಸೌಪರ್ಣಿ (ಗರುಡನ ಪತ್ನಿ), ಪಾರ್ವತಿ (ರುದ್ರ ಪತ್ನಿ), ಇಂದ್ರ ಮೊದಲಾಗಿ ದೇವತೆಗಳೂ ವಿಹಾರ ಮಾಡುತ್ತಾರೆ. ಆದರೆ ಎಲ್ಲ ದೇವತೆಗಳೂ ಎಲ್ಲ ನಾಡಿಗಳಲ್ಲೂ ಸಂಚಾರಮಾಡುತ್ತಿರುತ್ತಾರೆ; ಕೆಲವು ಕಡೆ ಕೆಲವರು ಮುಖ್ಯರು, ಇತರರು ಅಮುಖ್ಯರು, ಅಷ್ಟೆ.

ನಾಡಿಗಳ ಸಂಖ್ಯೆ ಎಪ್ಪತ್ತೆರಡು ಸಾವಿರವಾದರೂ, ಅವುಗಳಲ್ಲಿ ಪ್ರಧಾನ ವಾದುವು ಒಂದುನೂರು ಮತ್ತೊಂದು. ಮತ್ತೊಂದು ಎನ್ನುವುದು ಸುಷುಮ್ನಾ. ಇದು ಪಂಚಪ್ರಭೇದವಾಗಿದ್ದು, ವಜ್ರಿಕಾ, ಆರ್ಯಕ, ಪ್ರಕಾಶಿನೀ, ವೈದ್ಯುತೀ ಎನ್ನುವ ನಾಲ್ಕು ವರ್ಗಗಳಲ್ಲಿ ಒಂದೊಂದರಲ್ಲೂ ಒಂದು ನೂರು ಪ್ರಧಾನ ನಾಡಿಗಳಾಗಿ, ಉಳಿದ ಒಂದು ನಾಡಿಯೇ ಸುಷುಮ್ನಾ ಎನಿಸಿಕೊಳ್ಳುತ್ತದೆ. ಪಂಚಪ್ರಭೇದದಿಂದ ಸುಷುಮ್ನಾ ಎನ್ನುವುದು ಶರೀರದ ನಟ್ಟನಡುವೆ ಇದ್ದು ಕೊಂಡು,ನಾಲ್ಕೂ ಕಡೆಗಳಲ್ಲಿ ವಜ್ರಿಕಾ, ಆರ್ಯಕಾ ಮೊದಲಾದ ನಾಲ್ಕು ವರ್ಗದನಾಡಿಗಳನ್ನು ನೋಡಿಕೊಳ್ಳುತ್ತದೆ. ಒಂದೊಂದು ವರ್ಗದ ನಾಡಿ ಯೊಂದೊಂದರಲ್ಲೂ ಒಂದು ನೂರು ನಾಡಿಗಳಾಗಿ ಪ್ರಭೇದ ಬೆಳೆದು ಹತ್ತು ಸಾವಿರ ನಾಡಿಗಳಾಗುತ್ತವೆ. ಸುಷುಮ್ನಾದ ನೂರು ನಾಡಿಗಳನ್ನೂ ಕೂಡಿಸಿ ಕೊಂಡರೆ ೧೦,೧೦೦ ನಾಡಿಗಳು. ಶರೀರದ ಇತರ ಭಾಗಗಳಲ್ಲಿ ಒಟ್ಟು ೬೧,೯೦೦ ನಾಡಿಗಳು. ಎಂದರೆ ಇಡೀ ಶರೀರದಲ್ಲಿ ೭೨,೦೦೦ ನಾಡಿಗಳು.

ಇವೆಲ್ಲವೂ ಸುಷುಮ್ನಾದಿಂದ ಆದ ನಾಡಿಗಳೇ. ಮನುಷ್ಯನ ಗರ್ಭದ ಕಾಲದಲ್ಲೇ ವಾಯುವು ಗರ್ಭವನ್ನು ಪ್ರವೇಶಿಸಿ ಹುಟ್ಟಲಿರುವ ಮಗುವಿನಲ್ಲಿ ಸುಷುಮ್ನಾ ಎಂಬ ಸುದೀರ್ಘವಾದ ನೇರವಾದ ಮಾರ್ಗವನ್ನು ಏರ್ಪಡಿಸು ತ್ತದೆ. ಅದರೆ ಬಲಗಡೆ ಪಿಂಗಳಾ ಎಂಬ ನಾಡಿಯೂ, ಎಡಗಡೆ ಇಡಾ ಎಂಬ ನಾಡಿಯೂ ಮೈದಳೆಯುತ್ತವೆ. ಮನುಷ್ಯನಲ್ಲಿ ಗುದಸ್ಥಾನದಿಂದ ಮೇಲೆ ಎರಡಂಗುಲ, ಮೇಢ್ರದಿಂದ ಕೆಳಗೆ ಎರಡಂಗುಲ ಇರುವ ಪ್ರದೇಶ ವನ್ನು ದೇಹಮಧ್ಯ ಎನ್ನುತ್ತಾರೆ ('ನವಾಗುಲಂ ಚತುರಂಗುಲಮುತ್ಸೇ ಧಾಯತಮಂಡಾಕೃತಿಃ'). ಇದರ ನಡುವೆ ಇರುವುದು ನಾಭಿ. ಇಲ್ಲಿರುವ ತುಂದಿ (ಮಾಂಸದ ಗೆಡ್ಡೆ) ಇದು ಸುಷುಮ್ನಾ ನಾಡಿಯ ಉತ್ಪತ್ತಿಸ್ಥಾನ. ಇಲ್ಲಿಂದ ಹೊರಟು ದೇಹದುದ್ದಕ್ಕೂ ಹರಿದು ಶಿರಸ್ಸಿನಲ್ಲಿ ಬ್ರಹ್ಮರಂಧ್ರದಲ್ಲಿ ಕೊನೆಗೊಳ್ಳುವ ಈ ನಾಡಿಯೊಂದೇ ಇಷ್ಟು ವ್ಯಾಪಕವಾಗಿರುವುದು. ದೇಹದ

ನಟ್ಟನಡುವೆ ಯಾವ ಡೊಂಕೂ ಇರದೆ ಇರುವ ಈ ನಾಡಿಯನ್ನು ಬ್ರಹ್ಮ ನಾಡಿಯೆಂದೂ ಕರೆಯುತ್ತಾರೆ. ಇದಕ್ಕೆ ಕಮಲಭವನಾದ ಬ್ರಹ್ಮನೇ ಅಭಿಮಾನಿದೇವತೆ. ಇದನ್ನು ಸೂರ್ಯರೂಪಿಣಿಯೆಂದೂ ಪೂರ್ಣಚಂದ್ರಾಭ ವೆಂದೂ ವರ್ಣಿಸಿ, ಅದರ ನಡುವೆಯೇ 'ತಟಿತ್‌ಕೋಟಿ ಸಮಾನ ಕಾಂತ್ಯಾ ಮೃಣಾಲಸೂತ್ರವತ್ ಸೂಕ್ಷ್ಮಾಂಗಿ'ಯಾಗಿರುವ ಕುಂಡಲಿನೀ ಶಕ್ತಿಯು ಇರುವುದೆಂದೂ ಹೇಳಿದೆ. ಸುಷುಮ್ನಾ ನಾಡಿಯನ್ನೇ 'ವಿಶ್ವಧಾರಿಣೀ ಮೋಕ್ಷಮಾರ್ಗಾ' ಎಂದು ಕರೆಯುತ್ತಾರೆ.

ಅದರ ಎಡಭಾಗದಲ್ಲಿ 'ಇಡಾ' ಎನ್ನುವ ನಾಡಿಯನ್ನು ಚಂದ್ರನೆಂದೂ, ತಮೋರೂಪವೆಂದೂ ಅಮೃತಭಾಗವೆಂದೂ ಹೇಳುತ್ತಾರೆ. ಸುಷುಮ್ನಾದ ಉತ್ಪತ್ತಿಸ್ಥಾನದಲ್ಲೇ ಇದೂ ಹುಟ್ಟಿ ಎಡಮೂಗಿನವರೆಗೂ ಹರಿಯುತ್ತದೆ. ಇದರಲ್ಲಿ ಸಂಚರಿಸುವ ಗಾಳಿಯು ಬಂಗಾರದ ಬಣ್ಣದ್ದು. ಸುಷುಮ್ನಾದ ಬಲಭಾಗದಲ್ಲಿ 'ಪಿಂಗಲಾ' ಎನ್ನುವ ನಾಡಿಯನ್ನು ಸೂರ್ಯನೆಂದೂ, ರಜೋ ರೂಪವೆಂದೂ, ವಿಷಭಾಗವೆಂದೂ ಹೇಳುತ್ತಾರೆ. ಇದೂ ಕೂಡ ಸುಷುಮ್ನಾ ಹುಟ್ಟುವಲ್ಲಿಯೇ ಹುಟ್ಟಿ ಬಲಮೂಗಿನವರೆಗೂ ಹರಿಯುತ್ತದೆ. ಇವು ಮೂರೂ ನಾಡಿಗಳು ಜೀವನನ್ನು ಶರೀರದಲ್ಲಿ ನಿಲ್ಲಿಸುವ ಮುಖ್ಯ ನಾಡಿಗಳು. ಈ ಮೂರು ನಾಡಿಗಳ ಶಾಖೋಪಶಾಖೆಗಳೇ ಶರೀರದ ಎಪ್ಪತ್ತೆರಡು ಸಾವಿರ ನಾಡಿಗಳು. ಇವು ಮೂರೂ ಹುಟ್ಟುವ ಸ್ಥಳವನ್ನು ಮೂಲೇಶನೆಂದು ಕರೆದು ಅಲ್ಲಿರುವ ಪರಮಾತ್ಮನನ್ನು ಮೂಲೇಶನಾಮಕನೆನ್ನುತ್ತಾರೆ. ಈ ಪರಮಾತ್ಮನೇ ಎಪ್ಪತ್ತೆರಡು ಸಾವಿರ ನಾಡಿಗಳನ್ನು ವ್ಯವಸ್ಥೆಮಾಡಿ ಒಂದೊಂದರಲ್ಲೂ ತನ್ನ ವಿಶೇಷಾಂಶದಿಂದ ಇರುವನು. ಅರಳೀ ಮರದ ಎಲೆಯಲ್ಲಿ ಸ್ಥೂಲ ಸೂಕ್ಷ್ಮವಾಗಿ ಗೆರೆಗಳು ವ್ಯವಸ್ಥೆಗೊಂಡಿರುವಂತೆಯೇ ಶರೀರದಲ್ಲೂ ನಾಡೀವ್ಯವಸ್ಥೆ.

ಜೀವನ ಪ್ರಾಣಧಾರಣೆಗೂ ವ್ಯವಹಾರಕ್ಕೂ ಪ್ರಧಾನವಾಗಿರುವ ನಾಡಿ ಗಳನ್ನು ಹತ್ತು ಎಂದು ಎಣಿಕೆ ಮಾಡುತ್ತಾರೆ. ಒಂದು ಪದ್ಧತಿಯ ಪ್ರಕಾರ ದಶೇಂದ್ರಿಯಗಳೇ ಈ ಹತ್ತು; ಇದರಲ್ಲಿ ಸೇರದ, ಆದರೆ ಇದಕ್ಕೆ ಪ್ರೇರಕ ವಾಗಿರುವ ಒಂದು (ಸುಷುಮ್ನಾ) ಮನಸ್ಸು. ಶಬ್ದಗ್ರಹನಾಡಿ ಕಿವಿಯಲ್ಲಿದೆ; ಚಂದ್ರ ಅದರ ಅಭಿಮಾನದೇವತೆ; ವಿಷ್ಣುವೆಂದು ಇಲ್ಲಿ ನಿಯಾಮಕನಾದ ಪರಮಾತ್ಮನ ಹೆಸರು ಅಥವಾ ಭಗವದ್ರೂಪ. ರೂಪಗ್ರಹನಾಡಿ ಕಣ್ಣಿ ನಲ್ಲಿದೆ; ಸೂರ್ಯ ಅಭಿಮಾನಿ; ಮಧುಸೂದನನೆಂದು ಪರಮಾತ್ಮನ ಹೆಸರು.

ಸ್ಪರ್ಶಗ್ರಹನಾಡಿ ಚರ್ಮದಲ್ಲಿದೆ; ಅಹಂಕಾರ ಪ್ರಾಣ ಅಭಿಮಾನಿ; ತ್ರಿವಿಕ್ರಮ ಪರಮಾತ್ಮ. ರಸಗ್ರಹನಾಡಿ ನಾಲಗೆಯಲ್ಲಿದೆ; ವರುಣ ಅಭಿಮಾನಿ; ವಾಮನ ಪರಮಾತ್ಮ. ಗಂಧಗ್ರಹನಾಡಿ ಮೂಗಿನಲ್ಲಿದೆ; ಅಶ್ವಿನೀದೇವತೆಗಳು ಅಭಿಮಾನಿಗಳು; ಶ್ರೀಧರ ಪರಮಾತ್ಮ. ಹಸ್ತಿಜಿಹ್ವಾ ಮತ್ತು ಅಲಂಬುಷಾ ಎಂಬ ಎರಡು ನಾಡಿಗಳು ಎರಡು ಕೈಗಳಲ್ಲಿವೆ; ದಕ್ಷ ಅಭಿಮಾನಿ; ಪದ್ಮನಾಭ ಪರಮಾತ್ಮ. ಯಶಸ್ವಿನೀ (ಯಶಸ್ವತೀ ಅಥವಾ ಸರಸ್ವತೀ) ಎನ್ನುವ ನಾಡಿ ಬಾಯಲ್ಲಿದೆ; ಅಗ್ನಿ ಅಭಿಮಾನಿ; ಹೃಷೀಕೇಶ ಪರಮಾತ್ಮ. ಗಾಂಧಾರೀ ಮತ್ತು ಪೂಷಾ ಇವೆರಡು ನಾಡಿಗಳು ಎರಡು ಕಾಲುಗಳಲ್ಲಿವೆ; ಜಯಂತ ಅಭಿಮಾನಿ; ದಾಮೋದರ ಪರಮಾತ್ಮ. ಶಂಖಿನೀನಾಡಿ ಗುದಸ್ಥಾನದಲ್ಲಿದೆ; ಮಿತ್ರನಾಮಕ ಸೂರ್ಯ ಅಭಿಮಾನಿ; ಸಂಕರ್ಷಣ ಪರಮಾತ್ಮ. ಕುಹೂನಾಡಿ ಉಪಸ್ಥದಲ್ಲಿದೆ; ಸ್ವಾಯಂಭುವ ಮನು ಅಭಿಮಾನಿ; ವಾಸುದೇವ ಪರಮಾತ್ಮ. ಇದಕ್ಕೆ ಹೊರತಾದ ಶಬ್ದಕ್ರತುನಾಡಿ (ಸುಷುಮ್ನಾ) ಮನಸ್ಸಿನಲ್ಲಿದೆ; ಇದರ ಅಭಿಮಾನಿ ದೇವತೆಗಳು ಗರುಡ, ಶೇಷ, ಇಂದ್ರ, ಕಾಮ (ಅಂತಃಕರಣ ಚತುಷ್ಟಯ); ಇಲ್ಲಿ ನಿಯಾಮಕನಾದ ಪರಮಾತ್ಮ ಗೋವಿಂದ.

ಈ ಹತ್ತು ನಾಡಿಗಳಿಗೆ ಆಶ್ರಯಸ್ಥಾನಗಳನ್ನು ಇನ್ನೊಂದು ಪದ್ಧತಿ ಹೀಗೆ ಹೇಳುತ್ತದೆ—ಇಡಾಕ್ಕೆ ಮೂಗಿನ ಎಡ ಹೊಳ್ಳೆ; ಪಿಂಗಳಾಕ್ಕೆ ಮೂಗಿನ ಬಲ ಹೊಳ್ಳೆ; ಗಾಂಧಾರಿಗೆ ಎಡಗಣ್ಣು; ಹಸ್ತಿಜಿಹ್ವೆಗೆ ಬಲಗಣ್ಣು; ಪೂಷಾಕ್ಕೆ ಬಲಗಿವಿ; ಯಶಸ್ವಿನಿಗೆ ಎಡಗಿವಿ; ಅಲಂಬುಷಾಕ್ಕೆ ಬಾಯಿ; ಕುಹೂಗೆ ಲಿಂಗ, ಶಿಶ್ನ; ಶಂಖಿನಿಗೆ ಗುದಸ್ಥಾನ. ಸುಷುಮ್ನಾ ನಾಡಿಯ ಆಶ್ರಯಸ್ಥಾನ ಬ್ರಹ್ಮರಂಧ್ರವೆಂದು ಮೊದಲೇ ಹೇಳಿದೆವಷ್ಟೆ. ಈ ಹತ್ತು ನಾಡಿಗಳಲ್ಲಿ ಪ್ರಾಣಸಂಚಾರ ನಡೆಯುತ್ತ ಜೀವಧಾರಣೆಯಾಗುತ್ತದೆ.

ನಾಡಿಯಲ್ಲಿ ಅಡಗಿರುವ ನಾರಾಯಣನು ಜೀವನ ಕಾರ್ಯಗಳನ್ನು ಹೇಗೆ ಪ್ರೇರಿಸುತ್ತಾನೆ ಎಂಬುದನ್ನು ಹೇಳಲು ಹದಿನಾಲ್ಕು ನಾಡಿಗಳಲ್ಲಿ ಕಾರ್ಯಭೇದವನ್ನು ಹೀಗೆ ಹೇಳುತ್ತಾರೆ. ನಾರಾಯಣನು ಸುದರ್ಶನನಾಡಿಯಲ್ಲಿ ಜೀವನ ಮನಸನ್ನು ಪ್ರವೇಶಮಾಡಿಸಿದಾಗ ಕಣ್ಣಿನಿಂದ ನೋಡಬೇಕೆನಿಸುತ್ತದೆ. ಜಿತಾನಾಡಿಯಲ್ಲಿ ಪ್ರವೇಶಮಾಡಿಸಿದಾಗ ಮೂಗಿನಿಂದ ವಾಸನೆ ನೋಡುವುದಾಗುತ್ತದೆ; ಇದೇ ನಾಡಿಯಲ್ಲಿ ಪ್ರವೇಶದಿಂದಾಗಿ ಧೈರ್ಯ ಒದಗುತ್ತದೆ. ಹಾಗೆಯೇ ಸೌಮ್ಯ ನಾಡಿಯಲ್ಲಿ ಪ್ರವೇಶವಾದರೆ ನಾಲಗೆಯ ಕೆಲಸ; ಶಾಂತಿಯ ಅನುಭವ. ಮೋಹನಾಡಿಯಲ್ಲಿ ಪ್ರವೇಶವಾದರೆ ತ್ವಗಿಂದ್ರಿ

ಯದ ಕೆಲಸ; ಮೋಹದ ಅನುಭವ. ಸತ್ಯನಾಡಿಯಲ್ಲಿ ಮನಸ್ಸು ಹೊಕ್ಕರೆ ಕಾಲುಗಳ ಕೆಲಸ, ದಿಟವಾದುದರ ಬಗ್ಗೆ ಬಯಕೆ. ಕುಮಾರನಾಡಿಯಲ್ಲಿ ಹೊಕ್ಕರೆ ಮಾತು ಹೊರಡುತ್ತದೆ; ಸಂತಾನೇಚ್ಛೆ ಒದಗುತ್ತದೆ. ಮೃತಾ ನಾಡಿಯಲ್ಲಿ ಹೊಕ್ಕರೆ ಕೈಗಳಲ್ಲಿ ಕೆಲಸದ ಬಯಕೆ; ಸಾಯುವ ಇಚ್ಛೆ. ಸುಮಧ್ಯಮನಾಡಿಯಲ್ಲಿ ಹೊಕ್ಕರೆ ಗುದಸ್ಥಾನದ ಕೆಲಸ; ಮಿಶ್ರಜ್ಞಾನ. ಮಾನಾಶನಾಡಿಯಿಂದ ಒಳಗಣ್ಣಿನ ಕೆಲಸ, ಉಪಾಸೇಚ್ಛೆ. ನಾಶೀ ನಾಡಿಯಿಂದ ಉಪಸ್ಥ ಭಾಗದ ಕೆಲಸ; ತುರಿಕೆ, ಸ್ತ್ರೀಭೋಗೇಚ್ಛೆ. ಶಿರಾನಾಡಿಯಿಂದ ಮನಃಪ್ರವೇಶ; ಸಂಭೋಗಕ್ರಿಯೆ. ಅಸುರಾ ನಾಡಿಯಿಂದ ಅಹಂಕಾರ ವೃತ್ತಿ ಪ್ರವೇಶ; ಸುರಾಪಾನೇಚ್ಛೆ. ಸೂರ್ಯನಾಡಿಯಿಂದ ಬುದ್ಧಿಪ್ರವೇಶ; ತಿಳು ವಳಿಕೆ. ಭಾಸ್ವತೀ ನಾಡಿಯಿಂದ ಚಿತ್ತಪ್ರವೇಶ; ಹೊರಗಣ ಪ್ರಪಂಚದ ಅರಿವು.

ಈ ಹದಿನಾಲ್ಕು ನಾಡಿಗಳು ಮುಖ್ಯವಾದವು. ಇದರಲ್ಲಿ ಮೇಲೆ ಹೇಳಿದ ಹತ್ತು ನಾಡಿಗಳು ಸೇರಿವೆ. ಇವು ಮುಖ್ಯವಾಗಿರುವುದು ನಡುವೆ ಇರುವ ಕುಂಡಲಿನಿಯನ್ನೇ ನೇರವಾಗಿ ಅವಲಂಬಿಸಿರುವುದರಿಂದ. ಕುಂಡಲಿನಿ ಯೆಂದರೆ 'ಅಷ್ಟಧಾ ಪ್ರಕೃತಿ'ಯೇ. ಈ ನಾಡಿಗಳನ್ನು ಆಶ್ರಯಿಸಿಯೇ ಜೀವನು ಜೇಡರ ಹುಳು ತನ್ನ ಬಲೆಯಲ್ಲಿ ಸಂಚರಿಸುವಂತೆ ದೇಹದಲ್ಲಿ ವ್ಯಾಪಾರ ಮಾಡುತ್ತಾನೆ. ಇದನ್ನೇ ನಾಭಿಚಕ್ರವೆಂದು ಕರೆಯುತ್ತಾರೆ. ಇವುಗಳಿಂದ ಬೇರೆ ಬೇರೆ ನಾಡಿಗಳು ಹೊರಹೊಮ್ಮಿ ಶಾಖೋಪಶಾಖೆಗಳಾಗಿ ಅರ್ಧಲಕ್ಷ ಸಂಖ್ಯೆಯಲ್ಲಿರುತ್ತವೆ. ತೋಡಲತಂತ್ರದ ಪ್ರಕಾರ ದೇಹದಲ್ಲಿ ನಾಡಿಗಳ ಸಂಖ್ಯೆ ಮೂರೂವರೆ ಕೋಟಿ (ಸಾರ್ಧತ್ರಿಕೋಟಿ ನಾಡೀನಾಂ ಆಲಯಂ ಚ ಕಲೇವರಂ); ಹೃದಯ ಮತ್ತಿತರ ಅಂಗಗಳಲ್ಲಿ ಒಂಬತ್ತು ಲಕ್ಷ; ಸ್ಥೂಲವಾದ ನಾಡಿಗಳು ಎಪ್ಪತ್ತೆರಡು ಸಾವಿರ.

ಪ್ರಪಂಚಸಾರ ತಂತ್ರದಲ್ಲಿರುವ ನಿರೂಪಣೆ ಇದು (ಪ್ರಥಮ ಪಟಲ, ೭೩ ಮುಂದೆ). ತಾಯಿಯಿಂದ ಮಾಯಿಯ, ತಂದೆಯಿಂದ ಕಾರ್ಮಿಕ ಎಂಬ ಎರಡು ಮಲಗಳಲ್ಲಿ ಇಪ್ಪತ್ತನಾಲ್ಕು ತತ್ತ್ವಗಳು ಸೂಕ್ಷ್ಮರೂಪದಿಂದ ಇದ್ದು ಬೀಜದಲ್ಲಿ ಆಣವ ಮಲವಾಗಿ ಒದಗಿಬರುತ್ತವೆ. ತಾಯಿಯ ಗರ್ಭದಲ್ಲಿರುವ ಗಾಳಿ ಬೀಜವನ್ನು ಪೋಷಿಸುತ್ತದೆ. ತಾಯಿಯಿಂದ ಪಡೆದುಕೊಂಡ ರಜ, ತಂದೆಯಿಂದ ಪಡೆದುಕೊಂಡ ಶುಕ್ರ ಎರಡೂ ಒಂದು ದಿನದ ಅವಧಿಯಲ್ಲಿ ಗಾಳಿ, ಶಾಖ, ನೀರು ಇವುಗಳ ಪ್ರಭಾವದಿಂದ ಕೂಡಿಕೊಂಡು ತಾಯಿಯ

ಹೆಬ್ಬೆರಳ ಗಾತ್ರದ ಗಟ್ಟಿಗರ್ಭವಾಗುತ್ತದೆ. ಮರುದಿನ ಇದು ಬುದ್ಬುದಾಕಾರವನ್ನು ತಳೆಯುತ್ತದೆ. ಹದಿನೈದು ದಿನಗಳಲ್ಲಿ ಚತುರಸ್ರವಾಗುತ್ತದೆ. ಗರ್ಭದಲ್ಲಿರುವ ಗಾಳಿಯ ಕೆಲಸದಿಂದಾಗಿ ಸುಷುಮ್ನಾ ನಾಡಿ ಸಿದ್ಧವಾಗುತ್ತದೆ. ಗರ್ಭಸ್ಥ ಶಿಶುವಿನ ದೇಹಮಧ್ಯದಲ್ಲಿ ಉದ್ದವಾಗಿ, ನೇರವಾಗಿ ಇರುವ ಇದು ಕೆಳಮುಖವಾಗಿರುತ್ತದೆ; ಎಂದರೆ ಅದರ ಬಾಯಿ ಮೂಲಾಧಾರದಲ್ಲಿರುತ್ತದೆ. ಮುಂದೆ ಅದರ ಎರಡೂ ಪಕ್ಕಗಳಲ್ಲಿ ಇಡಾ ಮತ್ತು ಪಿಂಗಳಾ ಎಂಬ ಮತ್ತೆರಡು ನಾಡಿಗಳು ಕಾಣಿಸಿಕೊಳ್ಳುತ್ತವೆ. ಈ ಮೂರು ನಾಡಿಗಳೊಂದಿಗೆ ಇತರ ಏಳು ನಾಡಿಗಳು ಕೂಡಿಕೊಳ್ಳುತ್ತವೆ. ಈ ನಾಡಿಗಳ ಹೆಸರುಗಳು ಗಾಂಧಾರೀ, ಹಸ್ತಿಜಿಹ್ವಾ, ಪೂಷಾ, ಶಂಖಿನೀ, ಅಲಂಬುಷಾ, ಯಶಸ್ವಿನೀ ಮತ್ತು ಕುಹೂ. ಇವು ದೇಹದಲ್ಲೆಲ್ಲ ಹರಡಿಕೊಳ್ಳುತ್ತವೆ.

ಶಾಂಡಿಲ್ಯ, ಯೋಗಶಿಖಾ ಮೊದಲಾದ ಕೆಲವು ಅರ್ವಾಚೀನ ಉಪನಿಷತ್ತುಗಳಲ್ಲಿ ಬೇರೆ ಬೇರೆಯಾಗಿ ನಾಡಿಗಳ ಸ್ಥಾನಗಳನ್ನು ಗುರುತಿಸಿದೆ. ಸುಷುಮ್ನಾ ನಾಡಿಯ ಹಿಂದೆ ಮತ್ತು ಪಕ್ಕದಲ್ಲಿ ಸರಸ್ವತೀ ಮತ್ತು ಕುಹೂ; ಯಶಸ್ವಿನೀ ಮತ್ತು ಕುಹೂಗಳ ನಡುವೆ ವಾರುಣೀ; ಪೂಷಾ ಮತ್ತು ಸರಸ್ವತಿಗಳ ನಡುವೆ ಪಯಸ್ವಿನೀ; ಗಾಂಧಾರೀ ಮತ್ತು ಸರಸ್ವತಿಗಳ ನಡುವೆ ಯಶಸ್ವಿನೀ; ಕಂದ ಮಧ್ಯದಲ್ಲಿ ಅಲಂಬುಷಾ; ಸುಷುಮ್ನಾ ನಾಡಿಯ ಪೂರ್ವಭಾಗದಲ್ಲಿ ಮೇಢ್ರಾಂತದವರೆಗೆ ಕುಹೂ; ಕುಂಡಲಿನಿಯ ಕೆಳಗೆ ಮತ್ತೆ ಮೇಲೆ ಸರ್ವಗಾಮಿನಿಯಾಗಿ ವಾರುಣೀ. ಯಶಸ್ವಿನಿಯು ಕೆಳಗೆ ಪಾದಾಂಗುಷ್ಠದವರೆಗೆ ಹರಡಿಕೊಂಡಿದೆ; ಪಿಂಗಳಾ ನಾಡಿಯು ಮೇಲೆ ಹೋಗುತ್ತ ಬಲ ಮೂಗಿನ ಹೊಳ್ಳೆಯವರೆಗೆ ಹರಡಿಕೊಂಡಿದೆ; ಪಿಂಗಳಾ ನಾಡಿಯು ಹಿಂಬದಿಯಲ್ಲಿ ಬಲಗಣ್ಣಿನವರೆಗೆ ಪೂಷಾನಾಡಿ, ಬಲಗಿವಿಯವರೆಗೆ ಯಶಸ್ವಿನೀ; ನಾಲಗೆಯ ತುದಿಯವರೆಗೆ ಸರಸ್ವತೀ ನಾಡಿ; ಶಂಖಿನೀ ನಾಡಿಯು ಮೇಲೆ ಹೋಗುತ್ತ ಎಡಗಿವಿಯವರೆಗೆ ಹರಡಿದೆ; ಇಡಾನಾಡಿಯ ಹಿಂಬದಿಯಲ್ಲಿ ಎಡಗಣ್ಣಿನವರೆಗೆ ಗಾಂಧಾರೀ; ಪಾಯುಮೂಲದಿಂದ ಕೆಳಗೆ ಮತ್ತು ಮೇಲೆ ಅಲಂಬುಷಾ (ಶಾಂಡಿಲ್ಯೋಪನಿಷತ್ ೧,೪). ಹೊಕ್ಕುಳಲ್ಲಿ ವಿಲಂಬಿನಿಯೆಂಬ ನಾಡಿಯಲ್ಲಿ ಉಳಿದೆಲ್ಲ ನಾಡಿಗಳೂ ಮೈದಳೆದು ಅಲ್ಲಿಂದ ಮೇಲೆ, ಕೆಳಗೆ ಹರಡಿಕೊಳ್ಳುತ್ತವೆ. ಗಾಂಧಾರಿ ಮತ್ತು ಹಸ್ತಿಜಿಹ್ವಾ ಇವೆರಡೂ ಎರಡು ಕಣ್ಣುಗಳವರೆಗೆ, ಪೂಷಾ ಮತ್ತು ಅಲಂಬುಷಾ ಇವು ಎರಡು ಕಿವಿಗಳವರೆಗೆ, ಶೂರಾ ಎಂಬ ನಾಡಿ ಭ್ರೂಮಧ್ಯದಲ್ಲಿ, ಸರಸ್ವತಿಯು ನಾಲಗೆಯ ತುದಿಯವರೆಗೆ

ಹರಡಿಕೊಂಡಿವೆ. ವಿಶ್ವೋದರಿಯೆಂಬ ನಾಡಿಯು ನಾಲ್ಕು ಬಗೆಯ ಆಹಾರವನ್ನು (ಹಲ್ಲಿನಿಂದ ಅಗಿದು ತಿನ್ನುವುದು, ನಾಲಗೆಯಿಂದ ನೆಕ್ಕುವುದು, ಬಾಯಲ್ಲಿ ಹೊರಳಿಸಿ ನುಂಗುವುದು, ಕುಡಿಯುವುದು) ಅರಗಿಸುತ್ತದೆ. ರಾಕಾ ನಾಡಿಯು ನೀರನ್ನು ಕ್ಷಣದಲ್ಲಿ ಹೀರಿಕೊಳ್ಳುತ್ತದೆ, ಮೂಗಿನಲ್ಲಿ ಸಿಂಬಳವನ್ನು ಉಂಟುಮಾಡುತ್ತದೆ, ಹಸಿವೆಗೂ ಕಾರಣವಾಗುತ್ತದೆ. ಕಂಠಕೂಪದಲ್ಲಿ ಹುಟ್ಟುವ ಶಂಖಿನೀನಾಡಿಯು ಕೆಳಮುಖವಾಗಿದ್ದು ಅನ್ನಸಾರವನ್ನು ಸ್ವೀಕರಿಸಿ ತಲೆಯವರೆಗೆ ಮುಟ್ಟಿಸುತ್ತದೆ. ಹೊಕ್ಕುಳಿಂದ ಕೆಳಗಿರುವ ಕುಹೂನಾಡಿಯು ಮಲವಿಸರ್ಜನೆಗೆ, ವಾರುಣೀನಾಡಿಯು ಮೂತ್ರವಿಸರ್ಜನೆಗೆ, ಸೀವಿನೀ-ಚಿತ್ರಾ ನಾಡಿಯು ಶುಕ್ರವಿಸರ್ಜನೆಗೆ ನೆರವಾಗುತ್ತವೆ. (ಯೋಗಶಿಖೋಪನಿಷತ್, ೫,೧೮–೨೭)

ಅನುಬಂಧ : ಮೂರು

ನಾಡೀಪರೀಕ್ಷೆ

(ಹೊಸಪಂಡಿತ ಭೀಮರಾಯರು ಮೈಸೂರು ಮಹಾರಾಜ ಚಾಮರಾಜ ಒಡೆಯರ ಆಸ್ಥಾನದಲ್ಲಿ ಖಾಸಾ ವೈದ್ಯರಾಗಿದ್ದು ನಾಡೀಪರೀಕ್ಷೆಗೆ ದಕ್ಷಿಣದೇಶದಲ್ಲೆಲ್ಲ ಪ್ರಸಿದ್ಧರಾಗಿದ್ದರು. ಅವರು ೧೮೮೫ರಲ್ಲಿ ಬರೆದು ಪ್ರಕಟಿಸಿದ 'ವೈದ್ಯಸಂಗ್ರಹ'ದಿಂದ ಮುಂದಿನ ಭಾಗವನ್ನು ಎತ್ತಿಕೊಂಡಿದೆ. ಈ ಪುಸ್ತಕವು ಬೆಂಗಳೂರಿನಲ್ಲಿ ಮೈಸೂರು ಸರಕಾರದ ಮುದ್ರಣಾಲಯದಲ್ಲಿ ಅಚ್ಚಾಯಿತು. ಇದರಲ್ಲಿ ಅವರು ಮದರಾಸಿನ ಬ್ಲ್ಯಾಕ್‌ಟೌನ್‌ನಲ್ಲಿರುವ ಚೈನಾಬಜಾರ್ ಎಂಬಲ್ಲಿ ೧೮೭೫ರ ಜುಲೈ ಐದನೆಯ ದಿನ ಮಾಡಿದ 'ನಾಡೀತತ್ತ್ವೋಪನ್ಯಾಸ'ವೂ ಸೇರಿದೆ. ಅದರಲ್ಲಿ ನಾಡೀವಿಜ್ಞಾನಕ್ಕೆ ಪ್ರಸಕ್ತವಾದ ಭಾಗ ಇದು. ಖಂಡಗಳ ವಿಂಗಡಣೆ ನನ್ನದು.)

ಈ ಲೋಕದಲ್ಲಿ ದೇಹಸೃಷ್ಟಿ ಆರು ವಿಧವಾಗಿ ಇದೆ. ಅವು ಯಾವುವೆಂದರೆ — ಜರಾಯುಜಗಳು, ಅಂಡಜಗಳು, ಸ್ವೇದಜಗಳು, ಉದ್ಭಿಜಗಳು, ಸಾಂಸಿದ್ಧಿಕಗಳು, ಸಾಂಕಲ್ಪಿಕಗಳು, ಇವುಗಳು. ಮನುಷ್ಯರು ಜರಾಯುಜರು, ಪಕ್ಷಿ ಸರ್ಪಾದಿಗಳು ಅಂಡಜಗಳು, ಸೊಳ್ಳೆ ಮೊದಲಾದದ್ದು ಸ್ವೇದಜಗಳು, ವೃಕ್ಷಾದಿಗಳು ಉದ್ಭಿಜಗಳು, ರಕ್ತಬೀಜಾದಿಗಳು ಸಾಂಸಿದ್ಧಿಕ ಶರೀರಗಳು, ಸನಕಾದಿಗಳು ಸಾಂಕಲ್ಪಿಕ ಶರೀರಗಳು. ಇನ್ನು ಸರ್ವಜಂತುಗಳಿಗೂ ನಾಡೀಸ್ಥಿತಿ ಹೇಳಲ್ಪಡುವುದು, ಹ್ಯಾಗೆಂದರೆ—

ಎಪ್ಪತ್ತುಸಾವಿರ ನಾಡಿಗಳು ಕುದುರೆಗೆ, ಎಂಭತ್ತು ಸಾವಿರ ನಾಡಿಗಳು ಆನೆ, ಒಂಟೆ, ಎತ್ತು ; ಎಮ್ಮೆ, ಹುಲಿ, ಕರಡಿ, ಕಾಡಹಂದಿ ಇವುಗಳಲ್ಲಿ ನಲವತ್ತು ಸಾವಿರ ನಾಡಿಗಳು ; ಕುರಿ, ಆಡು, ಹಂದಿ, ಬೆಕ್ಕು, ನರಿ, ನಾಯಿ ಕತ್ತೆ, ಮೊಲ ಇವುಗಳಲ್ಲಿ ಸಾವಿರದ ನೂರು ನಾಡಿಗಳಿವೆ. ಜಲಪ್ರಾಣಿಗಳಲ್ಲಿ ಅರವತ್ತುನಾಲ್ಕು ಸಾವಿರ ನಾಡಿಗಳುಂಟು. ವೃಕ್ಷಾದಿ ಸ್ಥಾವರಗಳಲ್ಲಿ ಐದು ಸಾವಿರ ನಾಡಿಗಳುಂಟು. ಎರಡು ಸಾವಿರ ನಾಡಿಗಳು ಜೀರದುಂಬೆಗಳಲ್ಲಿ, ನೊಣಗಳಲ್ಲಿ, ಸೊಳ್ಳೆಗಳಲ್ಲಿ ಉಂಟು. ಅಣುತರಕ್ಕಿಂತ ಸೂಕ್ಷ್ಮವಾಗಿರುವ

ಶರೀರಗಳಲ್ಲಿ ನೂರು ನಾಡಿಗಳು ಇವೆ. ಇರುವೆ ಮುಂತಾದವುಗಳ ಶರೀರದಲ್ಲಿ ನೂರ ಏಳು ನಾಡಿಗಳು.

೭೨,೦೦೦ ನಾಡಿಗಳು ಮನುಷ್ಯ ಶರೀರಗಳಲ್ಲಿ ಕಾಣಲ್ಪಡುತ್ತವೆ. ಈ ಮನುಷ್ಯ ಶರೀರದಲ್ಲಿ ಎಪ್ಪತ್ತೆರಡು ಸಾವಿರ ನಾಡಿಗಳ ಪೈಕಿ ಹನ್ನೆರಡು ಸಾವಿರ ನಾಡಿ ತಲೆಯಲ್ಲಿಯೂ, ಎಂಟು ಸಾವಿರ ಭುಜದ್ವಯದಲ್ಲಿಯೂ, ಇಪ್ಪತ್ತೆಂಟು ಸಾವಿರ ಹೃದಯದಲ್ಲಿಯೂ, ಇಪ್ಪತ್ತುನಾಲ್ಕು ಸಾವಿರ ನಡುವಿನ ಕೆಳಗಿನ ಭಾಗದಲ್ಲಿಯೂ ಇರುವದು. ಈ ಪ್ರಕಾರ ನಾಡಿಗಳು ಹಗ್ಗದ ಹಾಗೆ ಸರ್ವಜಂತುಗಳಿಗೂ, ರಸ, ರಕ್ತ, ಮಾಂಸ, ಮಜ್ಜಾ, ಮೂಳೆ, ಕೊಬ್ಬು, ರೇತಸ್ಸು ಎಂಬ ಸಪ್ತಧಾತ್ವಾದಿಗಳಲ್ಲಿ ಎಲ್ಲಾ ಕಾಲದಲ್ಲೂ ಇರುವದು. ಆದ್ದರಿಂದ ವಕ್ಷ್ಯಮಾಣ ಪ್ರಕಾರವಾಗಿ ವೈದ್ಯರು ನಾಡಿಯನ್ನು ನೋಡಬೇಕು. ಹ್ಯಾಗೆಂದರೆ—

ಹಸುಗಳಿಗೆ ನಾಸಾಪುಟದಲ್ಲಿಯೂ, ಕುದುರೆಗಳಿಗೆ ಕಿವಿಯಲ್ಲಿಯೂ, ಮತ್ತು ಮುಖ, ಮೂಗಿನ ಕೊನೆ, ಪುಚ್ಛ ಇವುಗಳಲ್ಲಿಯೂ, ಆನೆಗೆ ಕೆನ್ನೆಗಳಲ್ಲಿಯೂ, ಮನುಷ್ಯರಿಗೆ ಕೈಯಲ್ಲಿಯೂ ಮತ್ತು ಅನ್ಯ ಜಂತುಗಳಿಗೆ ಆಯಾಯ ದೇಹಸ್ಥಿತಿಯನ್ನನುಸರಿಸಿ ಆಯಾಯ ಸ್ಥಾನದಲ್ಲಿ ನಾಡಿಯನ್ನು ನೋಡತಕ್ಕದ್ದು.

ಪೂರ್ವೋಕ್ತವಾದ ೭೨,೦೦೦ ನಾಡಿಗಳಲ್ಲಿ ೨೪ ಪ್ರಧಾನನಾಡಿಗಳೆಂದು ಹೇಳಲ್ಪಟ್ಟಿದೆ. ಯಾತಕ್ಕೆ ಅಂದರೆ, ದೇಹಕ್ಕೆಲ್ಲಾ ಪ್ರಧಾನವಾದ ದೊಡ್ಡನರ ಒಂದು ಹಾವಿನ ಹಾಗೆ ನಾಭೀಸ್ಥಾನದಲ್ಲಿ ಇರುವದ್ದರಿಂದ ಅದು ಕುಂಡಲಿನೀಸ್ಥಾನನಾಡೀ ಎಂದು ಹೇಳಲ್ಪಡುತ್ತದೆ. ಅದಕ್ಕೆ ಮೇಲೆ ಹತ್ತು ಎಂತಲೂ, ಕೆಳಗೆ ಹತ್ತು ಎಂತಲೂ, ಪಾರ್ಶ್ವದಲ್ಲಿ ಎರಡೆರಡಾಗಿ ನಾಲ್ಕು ಎಂತಲೂ ವಿಭಾಗಿಸಲ್ಪಟ್ಟಿವೆ. ಆದ್ದರಿಂದ ಮುಖ್ಯನಾಡಿಗಳು ಇಪ್ಪತ್ತನಾಲ್ಕು ಎಂದು ಎಣಿಸತಕ್ಕದ್ದು. ಅದರಲ್ಲಿ ದಶ ವಾಯು ಪ್ರವಾಹಕವಾದ ಕಾರಣ ಹತ್ತು ನಾಡಿಗಳು ಪ್ರಧಾನವಾಗಿ ಗ್ರಹಿಸಲ್ಪಟ್ಟು ಇವೆ. ಅದು ಇಳಾ, ಪಿಂಗಳಾ, ಸುಷುಮ್ನಾ, ಗಾಂಧಾರೀ, ಹಸ್ತಿಜಿಹ್ವಾ, ಪೂಷಾ, ಯಶಸ್ವಿನೀ, ಅಲಂಬುಸಾ, ಕುಹೂ, ಶಂಕಿನೀ, ಎಂದು ಹೇಳಲ್ಪಟ್ಟವು. ಇಳಾ ಎಡಭಾಗದಲ್ಲಿರುತ್ತೆ. ಪಿಂಗಳಾ ಬಲಭಾಗದಲ್ಲಿದೆ. ಸುಷುಮ್ನಾ ಮಧ್ಯಭಾಗದಲ್ಲಿದೆ. ಗಾಂಧಾರೀ ಎಡಕಂಣಿನಲ್ಲಿ, ಹಸ್ತಿಜಿಹ್ವಾ ಬಲಕಂಣಿನಲ್ಲಿ, ಪೂಷಾ ಬಲಕಿವಿ

ಯಲ್ಲಿ, ಯಶಸ್ವಿನೀ ಎಡಗಿವಿಯಲ್ಲಿ, ಅಲಂಬುಸಾ ಮುಖದಲ್ಲಿ, ಕುಹು ಲಿಂಗ ದೇಶದಲ್ಲಿ, ಶಂಕಿನೀ ಗುದಸ್ಥಾನದಲ್ಲಿಯೂ ಸಹ ಇರುವವು.

ಮುಖ್ಯವಾಗಿ ಕಂಠವು, ಹೃದಯುವು, ಲಲಾಟವು, ಶಿರಸ್ಸು, ಗುಹ್ಯವು, ಪಾದವು, ಮಧ್ಯಮಾಂಗುಳಿ ಇವುಗಳಲ್ಲಿ ಜೀವನಾಡಿ ನೆಲೆಗೊಂಡು ಇರುವದು. ಆದರೆ ಒಂದೇ ನಾಡಿಯು ಐದು ಪ್ರಕಾರ ವಿಭಾಗವಾಗಿ, ಐದು ಕೈಬೆರಳು ಗಳಲ್ಲಿಯೂ ಇರುವದು. ಇದರಲ್ಲಿ ವಾತ, ಪಿತ್ತ, ಶ್ಲೇಷ್ಮವೆಂದು ಮೂರು ನಾಡಿಗಳು ಪ್ರಧಾನವಾಗಿ ಗ್ರಹಿಸಲ್ಪಟ್ಟು ಇವೆ. ವಾತನಾಡಿ ವಕ್ರಗತಿ ವುಳ್ಳದ್ದು, ಪಿತ್ತನಾಡಿ ಚಪಲಗತಿವುಳ್ಳದ್ದು, ಶ್ಲೇಷ್ಮನಾಡಿ ಮಂದಗತಿ ವುಳ್ಳದ್ದು ; ಇದು ಮಣಿಕಟ್ಟು ಮೊದಲ್ಗೊಂಡು ಕ್ರಮವಾಗಿರುತ್ತೆ.

ಮೇಲೆ ಹೇಳಲ್ಪಟ್ಟ ನಾಡಿಗಳಲ್ಲಿ ಆಯಾಯ ಗತಿಗಳು ತಪ್ಪದೇ ಇದ್ದರೆ, ಆ ಮನುಷ್ಯ ಆರೋಗ್ಯದಶೆಯನ್ನು ಹೊಂದಿರುವನು. ಆ ಮೂರು ನಾಡಿಗಳಲ್ಲಿ ಸಾಂಕರ್ಯಗತಿ ಹುಟ್ಟಿದರೆ ರೋಗಿಯಾಗಿರುವನು. ಆದಾಗ್ಯೂ ಇದಕ್ಕೆ ವಿಶೇಷ ಲಕ್ಷಣಗಳುಂಟು. ಅದೇನೆಂದರೆ—ದೇಶ, ಕಾಲ, ವಯಸ್ಸು, ಸ್ವಭಾವ, ಔಷಧ, ದೇಹಶಕ್ತಿ, ದಾರ್ಢ್ಯ, ವ್ಯಾಧಿಗಳು ಇಂಥಾವುಗಳಂ ನೋಡಿ ನಿಶ್ಚೈಸಬೇಕು. ಆದ್ದರಿಂದಲೇ ದೇಶದಲ್ಲಿಯೂ, ದೇಹದಲ್ಲಿಯೂ, ದಿವಾರಾತ್ರಿಗಳಲ್ಲಿಯೂ ಆರು ಋತುಗಳು ಉಂಟಾಗಿ ಇವೆ ಎಂದು ಹೇಳಲ್ಪ ಟ್ಟಿತು. ಹ್ಯಾಗೆಂದರೆ—

ವಸಂತ ಋತುವಿನಲ್ಲಿ ನಾಡಿ ರಾಜಹಂಸಗತಿವುಳ್ಳದ್ದಾಗಿ ಇರುತ್ತೆ. ಗ್ರೀಷ್ಮಋತುವಿನಲ್ಲಿ ಹಂಸಪಾದಗತಿ ಉಳ್ಳದ್ದಾಗಿರುವದು. ವರ್ಷಋತುವಿನಲ್ಲಿ ಶತಮೂಲದೋಪಾದಿಯಲ್ಲಿಯೂ, ವ್ಯಾಕುಲದಿಂದ ಇರುವ ಇಲಿಯೋಪಾದಿ ಯಲ್ಲಿಯೂ ಇರುವದು. ಶರತ್ಕಾಲದಲ್ಲಿ ಹಂಸಪಾದಗತಿಯೇ ಉಳ್ಳದ್ದಾಗಿರು ವದು. ಹೈಮಂತ ಶಿಶಿರಕಾಲದಲ್ಲಿ ಕಪ್ಪೇ ಮತ್ತು ನೀರುಕಾಗೆಗಳ ಗತಿ ಉಳ್ಳದ್ದಾಗಿರುತ್ತದೆ. ಮತ್ತು ವಿಶೇಷ ವಿಧಿ ಒಂದುಂಟು, ಅದೇನೆಂದರೆ—

ಆವಾಗಲೆ ಸ್ನಾನಮಾಡಿದವರು, ಊಟ ಮಾಡಿದವರು ಇವರಿಗೆ, ಹಶಿವು ಬಾಯಾರಿಕೆಯಿಂದ ಬಳಲಿದವರಿಗೆ, ನಡಿಯುವವರಿಗೆ, ಸಾಧನೆ ಮೊದಲಾದ್ದ ರಿಂದ ಆಯಾಸಪಟ್ಟವರಿಗೆ, ಭೂತಾವಿಷ್ಟರಿಗೆ, ಅಳುತ್ತಿದ್ದವರಿಗೆ, ಸ್ತ್ರೀ ಸಂಭೋಗ ಮಾಡಿದವರಿಗೆ, ಮದ್ಯ ಕುಡಿದವರಿಗೆ, ತಪಸ್ಸು ಮಾಡುತ್ತಿದ್ದವ ರಿಗೆ, ಭಂಗಿ ತಿನ್ನುವವರಿಗೆ, ಕುಕ್ಕುಟ ಮಂಡೂಕ ಶಶ ಮೊದಲಾದ ಮಾಂಸ ತಿನ್ನತಕ್ಕಂಥವರಿಗೆ ಸಹ ನಾಡಿ ಬಹಳ ವ್ಯತ್ಯಸ್ತವಾಗಿರೋಣದರ ದೆಶೆಯಿಂದ

ವೈದ್ಯರು ಹೆಚ್ಚಾದ ಪ್ರಯತ್ನದಿಂದ ನೋಡಬೇಕು. ಸ್ತ್ರೀಯರುಗಳಿಗೆ ಕುಕ್ಷಿಯು ದಕ್ಷಿಣ ಭಾಗದಲ್ಲೂ, ಪುರುಷರಿಗೆ ವಾಮಭಾಗದಲ್ಲೂ ಸಹ ಅಗ್ನಿ ಇರುವದು. ದೇಹವು ಶಿವಶಕ್ತ್ಯಾತ್ಮಕವಾದ್ದರಿಂದ ಶಿವಾಂಶ ದಕ್ಷಿಣ ಭಾಗವೆಂದು ಶಕ್ತ್ಯಂಶ ವಾಮಭಾಗವೆಂದು ಹೇಳಲ್ಪಡುತ್ತದೆ. ಆದಕಾರಣ ಪುರುಷರಿಗೆ ಬಲಗೈಯಲ್ಲೂ ಸ್ತ್ರೀಗಳಿಗೆ ಎಡಗೈಯಿನಲ್ಲೂ ಸಹ ನಾಡಿ ನೋಡತಕ್ಕದ್ದು.

ವೈದ್ಯನು ರೋಗಿಯ ಕೈಯನ್ನು ಅಂಕುಶಾಕಾರವಾಗಿ ಕೂಡಿಸಿ ಬಲಗೈಯಿನಿಂದ ಹಿಡಿದುಕೊಂಡು ಎಡಕೈ ಬೆರಳುಗಳಿಂದ ಮುಟ್ಟಿ ಅದರ ತತ್ತ್ವವನ್ನು ಗ್ರಹಿಸಬೇಕು. ಪಿತ್ತಸ್ಥಾನದಲ್ಲಿ ಪಿತ್ತಗತಿ ೧೨, ಶ್ಲೇಷ್ಮಗತಿ ೧೨, ವಾತಗತಿ ೩ ತೋರಲ್ಪಟ್ಟರೆ ಆರೋಗ್ಯದಶೆ ಎಂದು ಹೇಳಬೇಕು. ಅವುಗಳಲ್ಲಿ ಗತಿ ವ್ಯತ್ಯಾಸವು ತೋರಿದರೆ ತಕ್ಕ ರೋಗಗಳನ್ನು ಊಹಿಸಿ ನಿಶ್ಚೈಸಿ ತಿಳಿಯಬೇಕು.

ಮತ್ತು ನಾಡೀ ದೆಶೆಯಿಂದಲೇ ಆಯುಸ್ಸು, ಗಂಡಗಳು, ಗ್ರಹಣಗಳು ಸಹ ತಿಳಿದುಕೊಳ್ಳಬಹುದು. ಮತ್ತು ಸ್ತ್ರೀಯರುಗಳಿಗೆ ಪ್ರಥಮಾರ್ತವದ ಕಾಲವನ್ನೂ ಸ್ತ್ರೀಪುಂಪ್ರಜಾಪ್ರಸವಕಾಲವನ್ನೂ ಸಹ ತಿಳಿಯಬಹುದು. ಕೆಲವರು ನಾಡಿಯಿಂದಲೇ ಶುಭಾಶುಭ ಫಲಗಳನ್ನು ಕೂಡ ಹೇಳುವರು......

ಈ ಶಾಸ್ತ್ರವನ್ನು ಅಭ್ಯಾಸ ಮಾಡುವದು ಬಹಳ ಕಷ್ಟವೆಂದು ಉದಾಸೀನ ಮಾಡಕೂಡದು. ಯಾವುದರಲ್ಲಾಗಲೀ ಶ್ರದ್ಧೆಯುಳ್ಳವರಾಗಿ ಶ್ರಮಪಟ್ಟರೆ ಅದು ಸಾಧ್ಯವೇ ಆಗುತ್ತದೆ. ಸಮಸ್ತ ಜನರಿಗೂ ಸುಲಭವಾಗಿ ಒಂದು ಪದ್ಧತಿಯನ್ನು ಹೇಳುತ್ತೇನೆ. ಅದರಿಂದ ಎಲ್ಲರೂ ತಮ್ಮ ಕೈಯನ್ನು ತಾವು ಹಿಡಿದುಕೊಂಡು ನೋಡಿಕೊಳ್ಳಬಹುದು. ಹಾಗೆ ಎರಡನೇಯವರ ತತ್ವವನ್ನೂ ತಿಳಿಯಬಹುದು. ಹ್ಯಾಗಂದರೆ—ತರ್ಜನೀ ಬೆರಳಿನಿಂದ ವಾತ ನಾಡಿಯನ್ನೂ, ಮಧ್ಯ ಬೆರಳಿನಿಂದ ಪಿತ್ತನಾಡಿಯನ್ನೂ, ಅನಾಮಿಕ ಬೆರಳಿನಿಂದ ಶ್ಲೇಷ್ಮನಾಡಿಯನ್ನೂ ತಿಳಿದುಕೊಳ್ಳಬೇಕು.

ಅದರಲ್ಲಿ ಪಿತ್ತ ಶ್ಲೇಷ್ಮ ನಾಡಿಗಳನ್ನು ತಿಳಿದುಕೊಂಡು, ವಾತನಾಡಿಯನ್ನು ತರ್ಜನೀ ಬೆರಳಿನಿಂದ ನೋಡುವಾಗ ಅದು ವಕ್ರಗತಿಯಾಗಿ ಇರುವದು. ಹಾಗೆಯೇ ವತ್ತಿ ನೋಡಲು, ಗೋಳಾಕೃತಿ ತೋರಿದರೆ ಅದು ಪೃಥ್ವೀ ಗತಿಯೆಂದೂನೂ, ಸರ್ಪದ ಹಾಗೆ ಸುತ್ತಿಕೊಳ್ಳುವದಾಗಿ ಯಾವಾಗ ಸ್ಫುರಿಸುತ್ತೋ ಅದು ಕುಂಡಲೀಗತಿ ಎಂದೂನೂ ತಿಳಿಯತಕ್ಕದ್ದು. ತರುವಾಯ ಅಲ್ಲೇ ಪಿತ್ತಗತಿ ಕಾಣಿಸುವುದು. ಅಂಥಾ ಗತಿಗಳು ಎಷ್ಟು ಸಾರಿ ಬೆರಳಿಗೆ

ತಗಲಿದ ಹಾಗೆ ತೋರುತ್ತೋ, ಅಷ್ಟು ಲೆಖ್ಖಮಾಡಿ ಅವುಗಳನ್ನು ಆಯುಃ ಪ್ರಮಾಣ ಸೂಚಕವಾದ ಸಂವತ್ಸರಗಳೆಂದರಿಯಬೇಕು. ಅದು ವೇಗವಾಗಿ ನಡೆಯದೆ ಮಧ್ಯ ಯಾವಾಗ ನಿಂತಹಾಗೆ ತೋರುತ್ತೊ, ಆಯಾ ಸಂಖ್ಯಾಕ ವಾದ ಸಂವತ್ಸರಗಳಲ್ಲಿ ಗಂಡಕಾಲವೆಂದು ಊಹಿಸಬೇಕು. ಹಾಗೆ ನಡೆ ಯುತ್ತಾ ನಿಶ್ಶೇಷವಾಗಿ ನಿಂತು ಪೃಥ್ವೀಗತಿ ಕಂಡದ್ದಾದರೆ, ಆ ಸಂವತ್ಸರದಲ್ಲಿ ಮರಣವಾಗುತ್ತೆಂದು ತಿಳಿಯತಕ್ಕದ್ದು. ಹಾಗೆಯೇ ಪೂರ್ವೋಕ್ತವಾದಂಥಾ ಅನ್ಯವಿಷಯಗಳನ್ನೆಲ್ಲಾ ಸೂಕ್ಷ್ಮ ಬುದ್ಧಿಯಿಂದ ತಿಳಿದುಕೊಳ್ಳಬಹುದು.

ಮತ್ತು ರೋಗಿಯ ಶರೀರವನ್ನ ಎಂಟು ವಿಧವಾಗಿ ಪರೀಕ್ಷಿಸಬೇಕೆಂದು ಶಾಸ್ತ್ರವು ಹೇಳುತ್ತಲಿದೆ. ಅವು ಯಾವುವೆಂದರೆ—ನಾಡಿ, ಮೂತ್ರ, ಮಲ, ನಾಲಿಗೆ, ಸ್ವರ, ಸ್ಪರ್ಶ, ರೂಪ, ನೋಟ. ಈ ಎಂಟರ ದೆಶೆಯಿಂದಾಗಲೀ ಅವುಗಳಲ್ಲಿ ಕೆಲವುಗಳಿಂದಾಗಲಿ ಆ ರೋಗಿಯ ರೋಗದ ನ್ಯೂನಾಧಿಕ್ಯಗಳ ರೀತಿಯನ್ನು ತಿಳಿಯಬಹುದು. ಆ ಎಂಟರಲ್ಲಿ ನಾಡೀ ಪರೀಕ್ಷೆಯು ಸರ್ವೋ ತ್ಕೃಷ್ಟವಾಗಿರುತ್ತಷ್ಟೆ.

(ಪುಟ ೧೮–೨೨)

ನಾಡೀಲಕ್ಷಣ ಹ್ಯಾಗಂದರೆ —

ಶರೀರದಲ್ಲಿ ಗಾಳಿಯೂ, ರಕ್ತವೂ ಒಂದಕ್ಕೊಂದು ಸಂಬಂಧವಿಲ್ಲದ ಹಾಗೆ ಸಂಚರಿಸುತ್ತಲಿರುವವು. ರಂಧ್ರಯುಕ್ತವಾದ ನರದ ಕೊಳವೆಯೇ ನಾಡೀ ಎಂದು ಹೇಳಿಸಿಕೊಳ್ಳುತ್ತೆ.

ಇದಕ್ಕೆ ದೃಷ್ಟಾಂತ—ಕಮಲದ ಬಳ್ಳಿಯನ್ನು ಮುರಿದು ನೋಡಿದರೆ ಅಂತಸ್ತುಗಳುಳ್ಳ ರಂಧ್ರಗಳು ಇರುವವಲ್ಲದೆ ಆ ರಂಧ್ರಗಳು ಒಂದಕ್ಕೊಂದು ಸಂಬಂಧಿಸಿರುವದಿಲ್ಲ. ಇಂಥಾ ಕಮಲ ನಾಳದೋಪಾದಿಯಲ್ಲಿರುವ ನಾಡೀ ಕೊಳವೆಯಲ್ಲಿ ಗಾಳಿಯು, ರಕ್ತವು ಪ್ರತ್ಯೇಕ ಪ್ರತ್ಯೇಕ ರಂಧ್ರಗಳಲ್ಲಿ ಸೇರಿ, ಆ ಗಾಳಿಯು ಅತಿವೇಗದಿಂದ ತಿರುಗುವ ಕಾಲದಲ್ಲಿ ನೀರಿನಂತಿರುವ ರಕ್ತವನ್ನು ತಿರುಗಿಸುತ್ತೆ.

ಇದನ್ನು ಪರೀಕ್ಷಿಸುವ ಕ್ರಮ—ನೀರಿನ ಮೇಲೆ ಕೈ ಅಲ್ಲಾಡಿಸುತ್ತಿರುವ ಕಪ್ಪೆಯನ್ನು ತಂದು ಒಂದು ದೆಬ್ಬೆ ಮೇಲೆ ಆ ಕಪ್ಪೆಯನ್ನು ಇಟ್ಟು ಧಾರ ದಿಂದ ಕಟ್ಟಿ ಅದರ ಕೈಗಳನ್ನು ಅಗಲಿಸಿ ಸೀಳಿದ ಹಂಚೀಕಡ್ಡಿಯಿಂದ ಸಣ್ಣ ದಾರದಲ್ಲಿ ಕಟ್ಟಿ ದೀಪಕ್ಕೆ ಅಡ್ಡವಾಗಿ ಕಪ್ಪೆಯ ಕೈಗಳನ್ನು ನೋಡಿದರೆ

ಅತ್ಯಂತ ವೇಗದಿಂದ ರಕ್ತವು ಸಂಚರಿಸುವ ರೀತಿ ಕಾಣಿಸುತ್ತೆ. ಇದರಂತೆ ಮನುಷ್ಯರ ದೇಹದಲ್ಲಿ ಗಾಳಿಯು ರಕ್ತವನ್ನು ತಿರಿಗಿಸುತ್ತೆ.

ವೀಣೆಯ ಮೆಟ್ಟಿನ ಭೇದದಿಂದ ಸ್ವರಗಳು ಹುಟ್ಟಿ ರಾಗಭೇದಗಳು ಹ್ಯಾಗೆ ತೋರುವವೋ ಹಾಗೆ ಮನುಷ್ಯನ ಹಸ್ತದ ಹೆಬ್ಬೆರಳಿನ ಬುಡದಲ್ಲಿ ಪಾಜ್ಞವಾಗಿ ಮೂರು ಬೆರಳುಗಳನ್ನು ಇಟ್ಟು ಲಕ್ಷ್ಯಧಾರಣೆಯಿಂದ ವತ್ತಿ ನೋಡಿದರೆ ಯವಬೀಜದಂತೆ ಮೊದಲಿನ ಬೆರಳಿಗೆ ಸ್ಥಿರವಾಗಿಯೂ, ಅಡ್ಡವಾಗಿಯೂ ಸಹ ತೋರುವ ಗತಿಗಳೇ ವಾತ, ಪಿತ್ತ, ಶ್ಲೇಷ್ಮವೆಂಬ ಹೆಸರುಳ್ಳ ಮೂರು ಗತಿಗಳೆನಿಕೊಳ್ಳುವವು.

ಈ ಮೂರು ಗತಿಗಳಿಂದ ಪಂಚಭೂತಗಳೆಂಬ ಐದು ಗತಿಗಳು, ಸಪ್ತ ಗತಿಗಳು, ಮತ್ತು ಒಂಭತ್ತುಗತಿಗಳು ಸಹ ತೋರುತ್ತವೆ. ಆ ಒಂಭತ್ತು ಗತಿಗಳು ಸಂವತ್ಸರ, ಆಯುಷ್ಯ, ಗಂಡಕಾಲ, ಋತುಕಾಲ, ಗರ್ಭಕಾಲ, ರೋಗ, ಮನೋಭಾವ, ಗ್ರಹಣ, ಸಾಧ್ಯಾಸಾಧ್ಯ ಲಕ್ಷಣ, ಭೂತಭವಿಷ್ಯ ದ್ವರ್ತಮಾನ ಗತಿಸ್ಥಿತಿಗಳನ್ನು ತಿಳಿಸುತ್ತವೆ. ಇವು ಸಪ್ತಗ್ರಹ, ನವಗ್ರಹ ರೂಪವಾಗಿರುತ್ತವೆ. ಈ ಮೂರು ಗತಿಗಳೇ ಆದಿಯಾದ ಒಂಭತ್ತು ಗತಿಗಳ ರೂಪಗಳನ್ನು ಇದರ ಕೆಳಗೆ ಬರಿಯುವ ಚಿತ್ರದಿಂದ ತಿಳಿಯತಕ್ಕದ್ದು —

ನಾಡಿಗೆ ಸಹಾಯಭೂತವಾದ ಸಪ್ತಸ್ಥಾನ ಪರೀಕ್ಷೆಯನ್ನು ಹೇಳಿ ಇದೆಯಷ್ಟೆ. ಈಗ ಆದಿಭೂತವಾದ ನಾಡೀಗತಿಗಳನ್ನು ತಿಳಿಯಪಡಿಸುತ್ತೆ.

ಪುರುಷನ ಪ್ರಕೃತಿ ಬೇರೆಯಾಗಿ ಅಗ್ನಿಸ್ಥಾನದಲ್ಲಿ ಮೊದಲು ಯಾವ ಗತಿ ಬರುತ್ತದೋ ಅದರ ವೈಷಮ್ಯದಿಂದುಂಟಾಗಿರುವ ರೋಗವೆಂದು ತಿಳಿಯಬೇಕು.

೧. ವಾತಪ್ರಕೃತಿಯಾಗಿ ಅಗ್ನಿಸ್ಥಾನದಲ್ಲಿ ಮೊದಲು ವಾತಗತಿ ಕಂಡರೆ ಅದು ಸ್ವಾಭಾವಿಕಗತಿಯೆಂದು ತಿಳಿಯಬೇಕು. ಇದಲ್ಲದೆ ದೇಶಕಾಲಾದಿಗಳಿಂದ ಉಂಟಾದ ವೈಷಮ್ಯವನ್ನು ಆಲೋಚನೆಯಿಂದ ಗೊತ್ತುಮಾಡಿಕೊಳ್ಳಬೇಕು.

ಅಗ್ನಿಸ್ಥಾನದಲ್ಲಿ ಪ್ರಕೃತಿ ಬೇರೆಯುಳ್ಳವನಿಗೆ ವಾತಗತಿ ಮೊದಲು ಕಂಡರೆ ವಾತರೋಗವೆಂದು ತಿಳಿಯಬೇಕು. ಈ ರೋಗಕ್ಕೆ ಆಗುವ ಲಕ್ಷಣ—ರೋಮಾಂಚವಾಗುವದು, ನಡುಗುವದು, ಭ್ರಮೆ, ಪ್ರಲಾಪ, ಆಕಳಿಕೆಗಳು ತೋರುವವು; ತಲೆ, ನಡುವು, ಪೇದೊಡೆ, ಪಾರ್ಶ್ವ ಇವುಗಳಲ್ಲಿ ನೋವು; ಕಿರಿದೊಡೆಯಲ್ಲಿ ಹಗ್ಗದಿಂದ ಬಿಗಿದಂತೆ ಇರುವದು; ನೀರಡಿಕೆಯಾಗುವದು;

ಸಂಖ್ಯೆ	ಆಕಾರ	ಗತಿಗಳು	ಗ್ರಹಗಳು	
೧		ಪಿತ್ತಗತಿ	ಸೂರ್ಯ	ಇವು ಏಳೂ ಸಪ್ತಗ್ರಹಗಳು
೨		ಶ್ಲೇಷ್ಮಗತಿ	ಚಂದ್ರ	
೩		ಪೃಥ್ವೀಗತಿ	ಮಂಗಳ	
೪		ವಾತಗತಿ	ಬುಧ	
೫		ಆಕಾಶಗತಿ	ಗುರು	
೬		ಡೋಲಾಗತಿ	ಶುಕ್ರ	
೭		ಕುಂಡಲಿನೀಗತಿ	ಶನಿ	
೮		ವಕ್ರಚಕ್ರ	ರಾಹು	
೯		ಚಪಲಚಕ್ರ	ಕೇತು	

(ಇವು ಯರೆಡೂ ಕೂಡಿ ನವಗ್ರಹವೆನ್ನಿಸುತ್ತೆ)

೧		ಡೋಲಾಗತಿ	ಪಿತ್ತವಾತ
೨		ಕುಂಡಲಿನೀ	ಶೀತಪಾತ
೩		ವಕ್ರಚಕ್ರ	ಶೀತಪಾತ
೪		ಚಪಲಚಕ್ರ	ಪಿತ್ತಪಾತ

ನಾಡಿಗಳ ಗತಿಭೇದ



ನಾಡೀಸ್ಥಾನಗಳು

ಕಣ್ಣು, ಚರ್ಮ, ಮುಖ, ಮಲ, ಮೂತ್ರ ಇವುಗಳು ಕಪ್ಪಾಗಿರುವವು; ಬಾಯಿವಗರು, ಹಲ್ಲಿನಲ್ಲಿ ನೋವು, ಪುಡಿಕೆಮ್ಮು ಸಹ ಆಗುವದು.

೨. ಪಿತ್ತಪ್ರಕೃತಿಯಾಗಿ ಅಗ್ನಿಸ್ಥಾನದಲ್ಲಿ ಪಿತ್ತಗತಿಗಂಡರೆ ಅದು ಸ್ವಾಭಾವಿಕ ಗತಿ. ಇದಲ್ಲದೆ ದೇಶಕಾಲಾದಿಗಳಿಂದ ವೈಷಮ್ಯವನ್ನು ತಿಳಿಯಬೇಕು. ಪ್ರಕೃತಿ ಬೇರೆಯಾಗಿ ಅಗ್ನಿಸ್ಥಾನದಲ್ಲಿ ಪಿತ್ತಗತಿ ಮೊದಲು ಕಂಡರೆ ಪಿತ್ತರೋಗವೆಂದು ತಿಳಿಯಬೇಕು. ಅದಕ್ಕೆ ಉಂಟಾಗುವ ಲಕ್ಷಣಗಳು — ಮೈಯಲ್ಲಿ ತಾಪ, ನೀರಡಿಕೆ, ಹಂಮೈಸುವಿಕೆ, ಅರುಚಿ, ಭ್ರಮೆ, ಕಳವಳಗಳು ಹುಟ್ಟುವವು ; ಮೂಗು. ಕೊರಳು, ತುಟಿ, ಬಾಯಿ ಇವುಗಳಲ್ಲಿ ಹೊಪ್ಪಳೆ ಹುಟ್ಟುವವು ; ತಂಪು ಪದಾರ್ಥಗಳಲ್ಲಿ ಇಚ್ಛೆ ; ಮಲ, ಕಣ್ಣು, ಉಗರು, ಚರ್ಮ ಇವುಗಳಲ್ಲಿ ಹಳದೀಬಂಣ ಉಂಟಾಗುವದು ; ಹುಳಿತೇಗು, ಅತಿಸಾರ ಇವೆಲ್ಲಾ ಇರುವವು.

೩. ಶ್ಲೇಷ್ಮಪ್ರಕೃತಿಯಾಗಿ ಮೊದಲು ಅಗ್ನಿಸ್ಥಾನದಲ್ಲಿ ಶ್ಲೇಷ್ಮಗತಿ ಕಂಡರೆ ಅದು ಸ್ವಾಭಾವಿಕಗತಿ. ಇದಲ್ಲದೆ ದೇಶಕಾಲಾದಿಗಳಿಂದ ವೈಷಮ್ಯವನ್ನು ಗೊತ್ತುಮಾಡಿಕೊಳ್ಳಬೇಕು. ಇದಕ್ಕೆ ಉಂಟಾಗುವ ಲಕ್ಷಣಗಳು — ಉಬ್ಬಸ, ಕೆಂಮು, ನೆಗಡಿ, ಬಾಯಿಯಲ್ಲಿ ನೀರು ಬರುವದು, ಅರುಚಿ, ವಮನ, ನಿದ್ರೆ, ಮೈಭಾರ, ಎದೆಯಲ್ಲಿ ಚುಚ್ಚುವದು ಮತ್ತು ಧಪ್ಪವಾಗುವದು ; ಬಾಯಿಯಲ್ಲಿ ಸೀ, ಛಳಿ, ರೋಮಾಂಚ ಇವುಗಳು ತೋರುವವು ; ಮಲ, ಕಣ್ಣು, ಚರ್ಮ, ಉಗುರು ಇವುಗಳು ಬಿಳುಪಾಗಿ ಇರುವವು ; ಉಷ್ಣ ಪದಾರ್ಥಗಳಲ್ಲಿ ಇಚ್ಛೆ.

ದ್ವಂದ್ವಜ, ಸಂಕಲಿತ, ತ್ರಿದೋಷ ಇಂಥಾ ಪ್ರಕೃತಿಯಾಗಿ ಅಗ್ನಿಸ್ಥಾನದಲ್ಲಿ ಮೊದಲು ಆಯಾಗತಿಗಳು ಕಂಡರೆ ಅದು ಸ್ವಾಭಾವಿಕಗತಿಯೆಂದು ತಿಳಿಯಬೇಕು. ಇದಲ್ಲದೆ ವೈಷಮ್ಯಗಳನ್ನು ವಿವರಿಸುತ್ತೆ—

೪. ಪ್ರಕೃತಿ ಬೇರೆಯಾಗಿ ಅಗ್ನಿಸ್ಥಾನದಲ್ಲಿ ಮೊದಲು ವಾತಪಿತ್ತಗತಿ ಕಂಡರೆ ಅದು ವಾತಪಿತ್ತರೋಗವೆಂದು ತಿಳಿಯಬೇಕು. ಇದಕ್ಕೆ ಉಂಟಾಗುವ ಲಕ್ಷಣಗಳು — ನೀರಡಿಕೆ, ಮರುಗುವದು, ಕೊರಳು ಬಾಯಿ ಸಹ ಒಣಗುವದು, ರೋಮಾಂಚವಾಗುವದು, ಅನಿದ್ರೆ, ವಮನ, ಕೀಲು, ತಲೆ ಇವುಗಳಲ್ಲಿ ನೋವು, ಆಕಳಿಕೆ, ಹೊಟ್ಟೆಯುಬ್ಬರ ಸಹ ಆಗುವವು.

೫. ಪ್ರಕೃತಿ ಭೇದವಾಗಿ ಅಗ್ನಿಸ್ಥಾನದಲ್ಲಿ ಮೊದಲು ಶ್ಲೇಷ್ಮವಾತಗತಿ ಕಂಡರೆ ಅದು ಶ್ಲೇಷ್ಮವಾತರೋಗವೆಂದು ತಿಳಿಯಬೇಕು. ಇದಕ್ಕೆ ಆಗುವ

ಲಕ್ಷಣ—ಮತ್ತಾಗಿ ಮಲಗುವದು; ಸಂತಾಪ; ನೆತ್ತಿ, ಸಂಧಿಗಳಲ್ಲಿ ನೋವು; ಭಾರ, ನೆಗಡಿ, ಕೆಂಮ್ಮು, ಅರುಚಿ, ಶ್ವಾಸ, ನಿದ್ರೆ, ಬೆವರುಯಿಲ್ಲದಿರುವದು ಸಹ ಉಂಟಾಗುವವು.

೭. ಪ್ರಕೃತಿ ಬೇರೆಯಾಗಿ ಅಗ್ನಿಸ್ಥಾನದಲ್ಲಿ ಮೊದಲು ಪಿತ್ತಶ್ಲೇಷ್ಮ ಗತಿ ಕಂಡರೆ ಅದು ಪಿತ್ತಶ್ಲೇಷ್ಮ ರೋಗವೆಂದು ತಿಳಿಯಬೇಕು. ಈ ರೋಗಕ್ಕೆ ಆಗುವ ಲಕ್ಷಣ—ದೇಹದಲ್ಲಿ ಶೈತ್ಯ, ಜ್ವಾಲೆ, ಬೆವರು, ಜಡತ್ವಗಳು ತೋರುವವು; ನಾಲಿಗೆಯಲ್ಲಿ ಅರುಚಿ, ಕೆಮ್ಮು, ಬಾಯಾರಿಕೆ, ತೂಕಡಿಕೆ ಸಹ ಆಗುವವು.

೭. ಪ್ರಕೃತಿ ಬೇರೆಯಾಗಿ ಅಗ್ನಿಸ್ಥಾನದಲ್ಲಿ ವಿಷಮಗತಿ ಕಂಡರೆ ವಿಷಮರೋಗವೆಂದು ತಿಳಿಯಬೇಕು. ಇದರ ಲಕ್ಷಣ—ಸರ್ವ ಕಾಲದಲ್ಲೂ ಅಂತರ್ವೇಗ, ಅಸ್ಥಿಯೊಳಗೆ ನೋವು, ಹಗೆಯೊಳಗೆ ಮಾತಾಡಿದಂತೆ ಕೇಳುವದು, ಕಣ್ಣುಗಳು ಒಳಕ್ಕೆ ಯಳದುಕೊಳ್ಳುವದು, ನಾಲಿಗೆ ಒಳಕ್ಕೆ ಯಳಿಯುವದು; ಮತ್ತು ಬಹಿರ್ವೇಗಲಕ್ಷಣ—ಸರ್ವ ಕಾಲದಲ್ಲೂ ಒಂದೇ ರೀತಿಯಾಗಿ ರೋಗವು ಕಾಣಿಸುವದು; ದಿನದಿನಕ್ಕೆ ರೋಗಾಧಿಕ್ಯವಾಗುವದು; ಕೆಲವು ಕಾಲದಲ್ಲಿ ಪ್ರಕೃತಿ ಸರಿಯಾಗಿರುವದು; ಪುನಃ ಪೂರ್ವದಂತೆ ಕಾಣಿಸುವದು, ಈ ರೀತಿ ಆಗುತ್ತೆ.

೮. ಪ್ರಕೃತಿ ಭೇದವಾಗಿ ಅಗ್ನಿಸ್ಥಾನದಲ್ಲಿ ತ್ರಿದೋಷಗತಿ ಕಂಡರೆ ಅದು ತ್ರಿದೋಷ ರೋಗವೆಂದು ತಿಳಿಯಬೇಕು. ಇದರ ಲಕ್ಷಣ—ಅಂಗ, ಸಂಧಿ, ಅಸ್ಥಿ, ನೆತ್ತಿಗಳಲ್ಲಿ ನೋವು; ನೀರಡಿಕೆ ಸಹ ಒಂದು ಕಾಲದಲ್ಲಿ ತೋರಿ ಮತ್ತೊಂದು ಕಾಲದಲ್ಲಿ ನೀರಡಿಕೆ ಇಲ್ಲದೇ ಇರೋದು, ತೂಗಡಿಕೆ, ಅರುಚಿ, ಪ್ರಲಾಪ, ಗಂಟಲೊಳಗೆ ಕೆರೆಯುವಿಕೆ, ಕಿವಿಯಲ್ಲಿ ನೋವು, ಕಣ್ಣುಗಳು ಕೆಂಪಾಗಿರುವದು, ಮತ್ತು ಹಳದೀರಂಗು; ಗಂಟಲಲ್ಲಿ ರಕ್ತಮಿಶ್ರವಾಗಿ ಕಫ ಬೀಳುವ ರೀತಿ, ಕಫದಲ್ಲಿ ಹಳದೀ ವರ್ಣವು ಮತ್ತು ನಾನಾವರ್ಣವು; ಮೂರ್ಛೆ; ರಾತ್ರಿಯಲ್ಲಿ ನಿದ್ರಾಭಾವ; ನಾಲಿಗೆ ಬೆಂದಂತೆಯಿರುವಿಕೆ; ಬೆರಳಿನಿಂದ ಮುಟ್ಟಿನೋಡಲು ನಾಲಿಗೆಯಲ್ಲಿ ಕಠಿಣಭಾವ;ಮೈಯಲ್ಲಿ ಶಾಮವರ್ಣ, ಮೈ ವಡದ ಹಾಗೆ ಇರುವದು; ಬಾಯಿಯಲ್ಲಿ ಹುಗಳು; ಮುಖದಲ್ಲಿ ಕಾಂತಿ ಕಪ್ಪು; ದೌರ್ಬಲ್ಯ; ಶ್ವಾಸ-ಕಾಸ ಸಹ ತೋರುವವು.

ಈ ಎಂಟು ಬಗೆಯನ್ನು ತಿಳಿದು ರೋಗವನ್ನು ತಿಳಿಯುವ ಕ್ರಮ—ಮನುಷ್ಯನ ಹಸ್ತನಾಡಿಯ ಅಗ್ನಿಸ್ಥಾನದಲ್ಲಿ ಶ್ಲೇಷ್ಮಗತಿ ಹನ್ನೆರಡು, ಪಿತ್ತಗತಿ

ಹನ್ನೆರಡು, ವಾತಗತಿ ಮೂರು ಬಂದರೆ ಸ್ವಾಭಾವಿಕ ಗತಿಯೆಂದು ತಿಳಿಯ ತಕ್ಕದ್ದು. ಹನ್ನೆರಡಕ್ಕೆ ಹೆಚ್ಚಾಗಿ ಗತಿ ಬಂದರೆ ಉಷ್ಣರೋಗವೆಂತಲೂ, ಹನ್ನೆರಡಕ್ಕೆ ಕಡಮೆಯಾಗಿ ಗತಿ ಬಂದರೆ ಶೀತರೋಗವೆಂತಲೂ ತಿಳಿಯಬೇಕು.

ಮತ್ತು ಇನ್ನೊಂದು ವಿಧವೆಂತೆಂದರೆ—ಅಗ್ನಿಸ್ಥಾನದಲ್ಲಿ ಹನ್ನೆರಡಕ್ಕೆ ಕಡಮೆಯಾಗಿಯೂ, ಸೂಕ್ಷ್ಮವಾಗಿಯೂ, ಮಂದವಾಗಿಯೂ ಗತಿಗಳು ಕಂಡರೆ ಶೀತರೋಗವೆಂದು ತಿಳಿಯಬೇಕು. ಗತಿಗಳು ಹನ್ನೆರಡಕ್ಕೆ ಅಧಿಕ ವಾಗಿಯೂ, ವೇಗಯುಕ್ತವಾಗಿಯೂ, ಬಿಸಿಯಾಗಿಯೂ ಕಂಡರೆ ಉಷ್ಣ ರೋಗವೆಂದು ತಿಳಿಯಬೇಕು.

೯. ಈ ಮೇಲೆ ಹೇಳಿದ ರೋಗಗಳು ಅಲ್ಲದೇ ತೀಕ್ಷ್ಣಾಗ್ನಿಗೆ ಎಂಭತ್ತು ವಿಧ, ವಿಷಮಾಗ್ನಿಗೆ ನೂರ ಇಪ್ಪತ್ತು ವಿಧ, ಮಂದಾಗ್ನಿಗೆ ನೂರ ಅರವತ್ತು ವಿಧವಾದ ಮತ್ತು ಅನಂತರೋಗದ ಗತಿಗಳು ಕಾಣುತ್ತವೆಯಾಗಿ ಮೇಲೆ ಹೇಳಿದ ಎಂಟು ಪ್ರಕಾರವಾದ ವೈಷಮ್ಯದಿಂದುಂಟಾಗುವ ರೋಗಗಳ ಅಂತರ್ವೇಗ ಬಹಿರ್ವೇಗಗಳ ವಿಚಾರಗಳನ್ನು ಮಾಡುತ್ತಿರಬೇಕು. ಸಕಲ ರೋಗಗಳನ್ನು ರೂಪಲಕ್ಷಣದಿಂದ ತಿಳಿಯತಕ್ಕದ್ದಲ್ಲದೆ ಶರೀರವನ್ನು ಮುಟ್ಟಿ ನೋಡಿ ಯಾವ ಯಾವ ಸ್ಥಳಗಳಲ್ಲಿ ನೋವು ಇರುವದೋ, ಗ್ರಂಥಿ ನರಗಳ ಬಿಗತಯಿರುವ ಅವಯುವಗಳನ್ನೂ, ನರಗಳು ಸಡಲಿಯಿರುವದನ್ನೂ ಸಹ ನೋಡಿ ತಿಳಿದುಕೊಳ್ಳಬೇಕು. ಮತ್ತು ರೋಗಗಳ ಕಾರಣ, ದೋಷ ವೈಷಮ್ಯ, ಅದರ ಹೆಸರು, ಇವುಗಳನ್ನು ರೋಗಿಯಿಂದಲೂ, ಆತನ ಕಡೆ ಜನರಗಳಿಂದಲೂ ಮತ್ತು ಐದು ವಿಧವಾದ ಜ್ಞಾನದಿಂದಲೂ ತಿಳಿಯಬೇಕು.

ಮತ್ತು ಯಾವ ರೋಗವನ್ನಾದರೂ ಒಂದೇ ವಿಧವಾಗಿ ನೋಡಿ ನಿರ್ಣಯುವನ್ನು ಮಾಡಕೂಡದು, ಯಾತಕ್ಕೆಂದರೆ—ಒಬ್ಬ ಮನುಷ್ಯನಿಗೆ ಅನ್ನವು ಜೀರ್ಣಿಸದೇ ಇದ್ದರೆ ಅಗ್ನಿಮಂದವೆಂತಲೂ, ಮೈ ಅಧಿಕವಾಗಿ ಬಿಸಿ ಯಾಗಿದ್ದರೆ ಜ್ವರವೆಂತಲೂ, ಪ್ರವರ್ತಿ ಅಧಿಕವಾಗಿ ನಾನಾರಂಗು ಕಂಡರೆ ಅತಿಸಾರವೆಂತಲೂ, ಇನ್ನು ಅನೇಕ ವಿಧವಾದ ಹೆಸರುಗಳನ್ನು ಹೇಳುತ್ತಾರೆ ಯಾಗಿ ಈ ರೋಗಗಳನ್ನು, ನಾಡೀ ಪರೀಕ್ಷೆ ಬಿಟ್ಟು, ಮೇಲೆ ಹೇಳಿದ ಪ್ರಕಾರ ವಾಗಿಯೇ ನಿರ್ಣೈಸಲು ಅಶಕ್ಯವಾಗಿರುವದು. ಆದ್ದರಿಂದ ನಾಡಿಯೇ ಮುಖ್ಯ ಕಾರಣವಾಗಿರುವದು. ಮೇಲೆ ಹೇಳಿದ ಎಂಟು ವಿಧದ ಗತಿಗಳಲ್ಲಿ ಯಾತರಿಂದ ರೋಗ ಉಂಟಾಗಿರುತ್ತದೋ ಅದನ್ನು ತಿಳಿದು, ಅಷ್ಟಸ್ಥಾನ ಪರೀಕ್ಷೆ, ದೇಶಕಾಲಾದಿ ಲಕ್ಷಣ, ಸಾಧ್ಯಾಸಾಧ್ಯ ಲಕ್ಷಣಗಳನ್ನು ಸಹ ಚೆನ್ನಾಗಿ ವೈದ್ಯನೇ ವಿಚಾರಮಾಡಬೇಕು".

ಅನುಬಂಧ : ನಾಲ್ಕು

ಸಿದ್ಧ ವೈದ್ಯದಲ್ಲಿ ನಾಡಿ

ಸಿದ್ಧವೈದ್ಯವೆನ್ನುವುದು ದಕ್ಷಿಣ ಭಾರತದಲ್ಲಿ, ಅದರಲ್ಲೂ ತಮಿಳು ನಾಡಿನಲ್ಲಿ, ವಿಶೇಷವಾಗಿ ಬೆಳೆದು ಬಳಕೆಯಲ್ಲಿರುವ ಪದ್ಧತಿ. ಆಯುರ್ವೇದ ದಿಂದ ಬಹುಮಟ್ಟಿಗೆ ಪ್ರಭಾವಿತವಾಗಿದೆಯಾದರೂ, ಅದು ಆಯುರ್ವೇದ ಸ್ಪಷ್ಟವಾದ ರೂಪವನ್ನು ತಳೆಯುವ ಮೊದಲೇ ಸಿದ್ಧವಾಗಿದ್ದಿತು. ಅದಕ್ಕೆ ತಾಂತ್ರಿಕ ಹಿನ್ನೆಲೆ, ಜಾನಪದ ಚೌಕಟ್ಟು ಎರಡೂ ಇರುವುದು ಸ್ಪಷ್ಟವಾಗು ತ್ತದೆ. ಶಿವ, ಪಾರ್ವತಿ, ನಂದಿ, ಅಶ್ವಿನೀದೇವತೆಗಳು, ಧನ್ವಂತರಿ, ಅಗಸ್ತ್ಯನೇ ಮೊದಲಾದ ಹದಿನೆಂಟು ಮಂದಿ ಸಿದ್ಧರು ಈ ವೈದ್ಯ ಪರಂಪರೆಯ ಆದ್ಯರೆನಿಸಿಕೊಂಡಿದ್ದಾರೆ. ಅಗಸ್ತ್ಯರ್, ಬೋಗರ್, ತಿರು ಮೂಲರ್, ರೋಮಋಷಿ, ಯೂಹಿ ಮುನಿ ಮೊದಲಾದ ಸಿದ್ಧರು ರಚಿಸಿ ರುವ ತಮಿಳು ಕವಿತೆಗಳಲ್ಲಿ ಆರೋಗ್ಯ, ಆರೋಗ್ಯಸಾಧನ, ರೋಗ, ರೋಗ ನಿದಾನ, ಚಿಕಿತ್ಸೆ, ಚಿಕಿತ್ಸಾ ಸಾಮಗ್ರಿಗಳು, ಔಷಧ ನಿರ್ಮಾಣ ಮೊದಲಾದ ವಿವರಗಳೆಲ್ಲ ಬರುತ್ತವೆ.

ಈ ಕವಿತೆಗಳಲ್ಲಿ ನಾಡೀವಿಜ್ಞಾನ ಪ್ರಮುಖವಾಗಿಯೇ ಕಾಣಿಸಿಕೊಳ್ಳು ತ್ತದೆ. ಇದಕ್ಕೆ ತಾಂತ್ರಿಕ ಪ್ರಕ್ರಿಯೆಗಳೇ ಹಂದರವಾಗಿರುವುದನ್ನು ಗಮನಿಸ ಬಹುದು. ರೋಗವನ್ನು ಗುರುತಿಸಲು ಸಿದ್ಧವೈದ್ಯರು ಮುಖ್ಯವಾಗಿ ಬಳಸು ವುದು ನಾಡೀಪರೀಕ್ಷೆಯನ್ನೇ. ಕೈಯ ಮಣಿಕಟ್ಟಿನಲ್ಲೇ ಸಾಮಾನ್ಯವಾಗಿ ನಾಡೀಪರೀಕ್ಷೆಯನ್ನು ಮಾಡುತ್ತಾರಾದರೂ, ಮೊಳಕೈ, ಕತ್ತು, ಹಣೆಯ ಪಕ್ಕ, ಮಂಡಿ, ಕಾಲುಹಿಮ್ಮಡಿ, ಸಂಧಿ ಸ್ಥಳಗಳು, ಹೊಟ್ಟೆ, ಎದೆ, ಕಣ್ಣುಗಳ ನಡುವೆ ಇಲ್ಲೆಲ್ಲ ನಾಡೀಪರೀಕ್ಷೆಯನ್ನು ಮಾಡುವುದೂ ಉಂಟು. ಗಂಡಸರಿಗೆ ಬಲಭಾಗದಲ್ಲೂ ಹೆಂಗಸರಿಗೆ ಎಡಭಾಗದಲ್ಲೂ ನಾಡೀಪರೀಕ್ಷೆಯನ್ನು ಮಾಡು ವುದಕ್ಕೆ ಸಿದ್ಧವೈದ್ಯರು ಕೊಡುವ ಕಾರಣ ಇದು—ಗಂಡು, ಹೆಣ್ಣುಗಳು

ಸಂಭೋಗ ಮಾಡುವಾಗ, ಗಂಡಿನ ಉಸಿರಾಟ ಬಲಗಡೆಯೇ ಹೆಚ್ಚಾಗಿದ್ದು ಬಲಭಾಗದ ವೃಷಣದ ಪ್ರಭಾವ ಹೆಚ್ಚಾಗಿದ್ದರೆ, ಸಂಭೋಗದ ಫಲವಾಗಿ ಹುಟ್ಟುವ ಮಗು ಗಂಡಾಗುತ್ತದೆ. ಉಸಿರಾಟ ಎಡಗಡೆ ಹೆಚ್ಚಾಗಿದ್ದು, ಎಡಭಾಗದ ವೃಷಣದ ಪ್ರಭಾವ ಹೆಚ್ಚಾಗಿದ್ದರೆ ಹುಟ್ಟುವ ಮಗು ಹೆಣ್ಣಾಗುತ್ತದೆ. ಗಂಡುಮಗುವಿನಲ್ಲಿ ಬಲಭಾಗವೇ ಪ್ರಧಾನವಾಗಿರುವುದು ಈ ಕಾರಣದಿಂದಲೇ ; ಹೆಣ್ಣು ಮಗುವಿನಲ್ಲಿ ಎಡಭಾಗ ಹೀಗೆಯೇ ಪ್ರಧಾನವಾಗಿರುತ್ತದೆ.

ನಾಡಿಯೆಂದರೆ ಬರಿಯ ಧಮನಿ, ನಾಳ, ನರವೆಂದು ಅರ್ಥವಲ್ಲ. ನಾಡೀಪರೀಕ್ಷೆ ಮಾಡುವಾಗ, ಈ ನರಗಳ ಅಲುಗಾಟವನ್ನು ಮಾತ್ರ ಗಮನಿಸುವುದಿಲ್ಲ. ನಾಡೀಪರೀಕ್ಷೆಯಿಂದ ವಾತ, ಪಿತ್ತ, ಕಫಗಳೆಂಬ ಮೂರು ದೋಷಗಳ ಸ್ಥಿತಿ-ಗತಿಗಳು ತಿಳಿದುಬರುವುವೆಂದು ಸಿದ್ಧವೈದ್ಯರು ಒಪ್ಪುತ್ತಾರೆ. ಆದರೆ ಈ ಮೂರು ದೋಷಗಳೇ ನಾಡಿಗಳೆಂದು ಬಗೆಯಬಾರದು. ಮನುಷ್ಯನ ದೇಹದಲ್ಲಿರುವ ಎಲ್ಲ ಅಂಗಗಳಿಗೂ ಕ್ರಿಯೆಗಳಿಗೂ ಆಧಾರವಾದ ಪ್ರಾಣಶಕ್ತಿಯ ಸ್ವರೂಪವನ್ನು ನಾಡೀಪರೀಕ್ಷೆ ಗುರುತಿಸುತ್ತದೆ. ಈ ಪ್ರಾಣಶಕ್ತಿಯು ದೇಹದ ಎಲ್ಲ ನಾಡಿಗಳಲ್ಲಿಯೂ ಮಿಡಿಯುತ್ತಿರುತ್ತದೆ; ವೈದ್ಯರು ಪರೀಕ್ಷೆ ಮಾಡುವಾಗ ಮಿಡಿತವನ್ನು ಗಮನಿಸಿ ಪ್ರಾಣಶಕ್ತಿಯ ಹೆಚ್ಚು ಕಡಮೆ, ಪ್ರಕೃತಿ ವಿಕೃತಿಗಳನ್ನು ಊಹಿಸುತ್ತಾರೆ.

ತಾಯಿಯ ಗರ್ಭದಲ್ಲಿ ಮಗು ಮೈದಳೆಯುವಾಗಲೇ ಪ್ರಾಣಶಕ್ತಿಯು ಆ ಪಿಂಡದಲ್ಲಿ ಪ್ರವೇಶಿಸಿ ವಾತ, ಪಿತ್ತ, ಕಫಗಳೆಂಬ ಮೂರು ಪ್ರಕಾರಗಳಲ್ಲಿ ಕೆಲಸ ಮಾಡತೊಡಗುತ್ತದೆ. ಹೀಗೆ ಶರೀರದ ಮೊದಲ ಹಂತದಲ್ಲೇ ರೂಪಗೊಂಡ ಪ್ರಾಣಶಕ್ತಿಯು ಬದುಕಿನುದ್ದಕ್ಕೂ ಎಡೆಬಿಡದೆ ಹರಿಯುತ್ತ, ಮನುಷ್ಯನ ಆರೋಗ್ಯ, ರೋಗ, ಸಾಧ್ಯತೆ, ಚಿಕಿತ್ಸೆ, ಮೃತ್ಯು ಎಲ್ಲವನ್ನೂ ನಿರ್ಧರಿಸುತ್ತದೆ. ಅದು ಸುಷುಮ್ನಾನಾಡಿಯಲ್ಲೇ ಪ್ರಧಾನವಾಗಿ ಇರುತ್ತದೆ; ಇಡಾ, ಪಿಂಗಳಾ ನಾಡಿಗಳಲ್ಲೂ ಕೆಲಸಮಾಡುತ್ತದೆ. ದೇಹದಲ್ಲಿ ಅಗ್ನಿಮಂಡಲ, ಚಂದ್ರಮಂಡಲ, ಸೂರ್ಯಮಂಡಲಗಳೆಂದು ಈ ಮೂರು ನಾಡಿಗಳ ಕ್ಷೇತ್ರಗಳನ್ನು ವಿಂಗಡಿಸಿದ್ದಾರೆ; ಈ ಕ್ಷೇತ್ರಗಳಲ್ಲೆಲ್ಲ ಸಮನಾಗಿಯೇ ಕೆಲಸಮಾಡುವ ಈ ಪ್ರಧಾನನಾಡಿಯನ್ನು ಸಿದ್ಧವೈದ್ಯಪರಿಭಾಷೆಯಲ್ಲಿ 'ಗುರುನಾಡಿ' ಎಂದು ಕರೆಯುತ್ತಾರೆ. ಗುರುನಾಡಿಯು ಬುಗುರಿಯಂತೆ ಸತತವಾಗಿ ತಿರುಗುತ್ತಿರುವುದೆಂದೂ, ಬುಡುಬುಡಿಕೆ (ಉಡುಕ್ಕೈ)ಯ ಶಬ್ದ

ದಂತೆ ಮೈಯಲ್ಲೆಲ್ಲ (ಕಾಲ ಹೆಬ್ಬೆರಳಿಂದ ನೆತ್ತಿಯುವರೆಗೂ) ಹರಡಿಕೊಳ್ಳುವು ದೆಂದೂ ಹೇಳುತ್ತಾರೆ.

ಸಿದ್ಧರ ಕವಿತೆಗಳಲ್ಲಿ ಗುರುನಾಡಿಯು ಹಿರಿಮೆಯನ್ನು ಹಾಡಿದ್ದಾರೆ. ಈ ನಾಡಿಯು ಸಮರ್ಪಕವಾಗಿದ್ದರೆ ಮೈಯೂ ಮನಸ್ಸೂ ನೆಮ್ಮದಿಯಿಂದ ಇರು ತ್ತವೆ; ಯಾವ ರೋಗವನ್ನೂ ಇದು ತಡೆಗಟ್ಟುತ್ತದೆ; ಎಲ್ಲ ಕೆಲಸಗಳಿಗೂ ಸಾಮರ್ಥ್ಯವನ್ನೂ ಉತ್ಸಾಹವನ್ನೂ ಒದಗಿಸುತ್ತದೆ. ಜಗತ್ತಿನಲ್ಲೆಲ್ಲ ವ್ಯಾಪಕ ವಾಗಿ ಪ್ರಕೃತಿಯ ಎಲ್ಲ ಪ್ರಕಾರಗಳಲ್ಲಿಯೂ ಇದು ತೋರಿಕೊಳ್ಳುತ್ತದೆ. ಬದುಕಿಗೆ ಕಾರಣವೇ ಇದು. ಶರೀರದಲ್ಲಿ ಮೂಲಾಧಾರದಲ್ಲಿರುವ ಜೀವಾ ಗ್ನಿಯೇ ಇದರ ಮೂಲಸ್ಥಾನ. ಇದನ್ನು 'ಆತ್ಮನಾಡಿ', 'ಪ್ರಾಣನಾಡಿ' ಗಳೆಂದೂ ಕರೆಯುವರು.

ವಾತ, ಪಿತ್ತ, ಕಫಗಳ ಸ್ಥಿತಿಗತಿಗಳು ಈ ಗುರುನಾಡಿಯಲ್ಲಿ ಕಾಣಿಸಿ ಕೊಳ್ಳುತ್ತವೆ. ಮೂಲಾಧಾರದಲ್ಲಿ ಮೈದಳೆದು, ಇಡಾನಾಡಿಯಲ್ಲಿ ಹರಿ ಯುತ್ತ, ಎಪ್ಪತ್ತೆರಡು ಸಾವಿರ ನಾಡಿಗಳಲ್ಲೂ ಸಂಚರಿಸುತ್ತ, ಎಚ್ಚರಕ್ಕೂ, ದೇಹದ ಮತ್ತು ಅವಯವಗಳ ಚಲನೆಗೂ ಕ್ರಿಯೆಗಳಿಗೂ, ಮಲ ಮೂತ್ರ ಶುಕ್ರ ಸ್ವೇದಗಳ ವಿಸರ್ಜನೆಗೂ ಕಾರಣವಾಗಿ ಅಪಾನವಾಯುವೇ ಆಧಾರ ವಾಗಿ ಬದುಕಿಗೆ ಮುಖ್ಯವೆನಿಸಿದ ವಾತದೊಂದಿಗೆ ಗುರುನಾಡಿ ಬೆರೆತಾಗ ಅದನ್ನು ವಾತನಾಡಿಯೆಂದು ವ್ಯವಹರಿಸುತ್ತಾರೆ. ಪಿಂಗಳಾನಾಡಿಯಲ್ಲಿ ಹರಿ ಯುತ್ತ, ಪ್ರಾಣವಾಯುವೇ ಆಧಾರವಾಗಿ, ಮೂಲಾಧಾರದಲ್ಲಿರುವ ಜೀವಾ ಗ್ನಿಯ ಗೆಳೆತನವನ್ನು ಗಳಿಸಿಕೊಂಡು, ಹೃದಯಸ್ಥಾನದಲ್ಲಿ ಪ್ರಧಾನವಾಗಿ ಇದ್ದುಕೊಂಡು ಕೆಲಸಮಾಡುವುದು ಪಿತ್ತ. ಇದರೊಂದಿಗೆ ಗುರುನಾಡಿ ಬೆರೆ ತಾಗ ಪಿತ್ತನಾಡಿಯೆನಿಸಿಕೊಳ್ಳುತ್ತದೆ. ಹಾಗೆಯೇ, ಸುಷುಮ್ನಾನಾಡಿಯಲ್ಲಿ ಹರಿಯುತ್ತ, ಸಮಾನವಾಯುವೇ ಆಧಾರವಾಗಿರುವ ಕಫದೊಂದಿಗೆ ಗುರು ನಾಡಿ ಬೆರೆತಾಗ ಕಫನಾಡಿಯೆನಿಸಿಕೊಳ್ಳುತ್ತದೆ.

ವಾತ, ಪಿತ್ತ, ಕಫಗಳೆಂಬ ಮೂರು ದೋಷಗಳು ದೇಹದ ರಚನೆಗೂ ವ್ಯಾಪಾರಗಳಿಗೂ ಮೂಲಭೂತವಾದುವು; ರಸ, ರಕ್ತ ಮೊದಲಾದ ಸಪ್ತ ಧಾತುಗಳಿಗೂ ಇವೇ ಆಧಾರ. ಸಮುದ್ರದಲ್ಲಿ ಅಲೆಗಳು ನಿರಂತರವಾಗಿ ಏರಿಳಿಯುತ್ತಿರುವಂತೆ, ದೇಹದಲ್ಲಿ ಈ ಮೂರು ದೋಷಗಳು ಕೆಲಸಮಾಡು ತ್ತಿರುತ್ತವೆ. ಇವುಗಳಲ್ಲಿ ಒಂದೊಂದರ ಸ್ಥಿತಿಯನ್ನೂ ಗುರುನಾಡಿಯಲ್ಲಿ ಕಂಡುಕೊಳ್ಳುವುದು ಸಾಧ್ಯ. ಹಾಗೆ ಉಳಿದ ಎರಡರಿಂದ ಒಂದನ್ನು ಬೇರೆ

ಯಾಗಿರುವಂತೆ, ಬಟ್ಟೆಯ ಮೇಲೆ ಚಿತ್ರವಿದ್ದಂತೆ, ಗುರುನಾಡಿಯಲ್ಲಿ ಕಂಡು ಕೊಂಡಾಗ ಆ ನಾಡಿಯ ಹೆಸರು ಗುರುನಾಡಿಗೇ ಒದಗುತ್ತದೆ. ಮೂರೂ ದೋಷಗಳಿಗೂ ತೋರಿಕೊಳ್ಳಲು ಒಂದೇ ಎಡೆ, ಅದೇ ಗುರುನಾಡಿ.

ಮೂರು ದೋಷಗಳಿಗೂ ಅವುಗಳಿಗೆ ತಕ್ಕ ವ್ಯಾಪಾರಗಳಿದ್ದರೂ, ಅವುಗಳಲ್ಲಿ ಪಿತ್ತ ಪ್ರಧಾನವಾದುದು. ಮೂಲಾಧಾರದಲ್ಲಿರುವ ಜೀವಾಗ್ನಿಗೆ ಇದು ಗೆಳೆಯನಂತೆ; ಪಂಚಭೂತಗಳಲ್ಲಿ ಅಗ್ನಿಯೇ ರಾಜನಂತೆ. ಮನಸ್ಸು ನೆಮ್ಮದಿಯಿಂದಿದ್ದು ಭಾವಜೀವನ ತೃಪ್ತಿಕರವಾಗಿರುವುದಕ್ಕೆ ಈ ಅಗ್ನಿ ಸಮನಾಗಿರುವುದೇ ಕಾರಣ. ಅಗ್ನಿಯಲ್ಲಿ ವಿಕಾರವಾದರೆ ಅದು ಮನೋವಿಕಾರಗಳಲ್ಲಿ ತೋರಿಕೊಳ್ಳುತ್ತದೆ. ಉಳಿದ ಭೂತಗಳು ಹೇಗಿವೆಯೆಂಬುದನ್ನು ಅಗ್ನಿಯು ತಿಳಿಸಿಕೊಡಬಲ್ಲುದು. ಆದುದರಿಂದ ಪಿತ್ತವನ್ನು ನೋಡಿ, ಮಾನಸಿಕ ಆರೋಗ್ಯದ ನೆಲೆಯನ್ನು ನಿರ್ಧರಿಸುವುದು ಸಾಧ್ಯವಾಗುತ್ತದೆ. ಸಿದ್ಧವೈದ್ಯರು ಪಿತ್ತದ ವಿಕಾರಗಳನ್ನು ಗುರುನಾಡಿಯಲ್ಲಿ ಗಮನಿಸಿದಾಗ 'ಭೂತನಾಡಿ'ಯೆಂದು ವ್ಯವಹರಿಸುತ್ತಾರೆ. ದೇಹಕ್ಕೂ ಮನಸ್ಸಿಗೂ ಇರುವ ಸಂಬಂಧವನ್ನು ಭೂತನಾಡಿ ಎತ್ತಿ ತೋರಿಸುತ್ತದೆ.

ನಾಡೀಪರೀಕ್ಷೆಯ ಕ್ರಮ ಆಯುರ್ವೇದದಲ್ಲಿರುವಂತೆಯೇ. ತೋರುಬೆರಳಿನಿಂದ ವಾತ, ನಡುಬೆರಳಿನಿಂದ ಪಿತ್ತ, ಅನಾಮಿಕೆ ಬೆರಳಿನಿಂದ ಕಫಗಳನ್ನು ಗುರುತಿಸುತ್ತಾರೆ. ಗಂಡಸರಲ್ಲಿ ಆರೋಗ್ಯಸ್ಥಿತಿಯ ವಾತವು ನವಿಲಿನ, ಹಂಸದ, ಹುಂಜದ ನಡೆಯನ್ನು ಹೋಲುತ್ತದೆ; ಪಿತ್ತವು ಆಮೆಯ, ಜಿಗುಣೆಯ ನಡೆಯಂತೆ; ಕಫವು ಹಾವು ಹರಿದಂತೆ, ಕಪ್ಪೆ ಕುಪ್ಪಳಿಸಿದಂತೆ. ಹೆಂಗಸರಲ್ಲಿ ವಾತ ನಾಗರಹಾವಿನ ನಡೆಯಂತೆ, ಪಿತ್ತ ಕಪ್ಪೆ ಕುಪ್ಪಳಿಸಿದಂತೆ, ಕಫ ಹಂಸದ ಮುಂದಗಮನದಂತೆ ಗೋಚರಿಸುತ್ತದೆ.

ಮನುಷ್ಯನು ಆರೋಗ್ಯವಾಗಿರುವಾಗ ವಾತ, ಪಿತ್ತ, ಕಫನಾಡಿಗಳು $1 : \frac{1}{2} : \frac{1}{4}$ ಈ ಪ್ರಮಾಣದಲ್ಲಿರುವುದೆಂದು ಕಲ್ಪನೆ. ಇದಕ್ಕೆ ಮಾತ್ರಾ (ತಮಿಳಿನಲ್ಲಿ ಮಾತ್ತಿರೈ) ಎಂದು ಹೆಸರು. ವಾತದ ಬಲ, ಅದರ ಅಭಿವ್ಯಕ್ತಿ ಸಾಮರ್ಥ್ಯ ಒಂದು ಮಾತ್ರೆಯ ಪ್ರಮಾಣದಲ್ಲಿದ್ದರೆ, ಪಿತ್ತಕ್ಕೆ ಅದರ ಅರ್ಧದಷ್ಟು ಬಲ, ಅಭಿವ್ಯಕ್ತಿ ಸಾಮರ್ಥ್ಯಗಳೆಂದೂ, ಪಿತ್ತಕ್ಕೆ ಅರ್ಧದಷ್ಟು ಕಫದ ಬಲ, ಅಭಿವ್ಯಕ್ತಿ ಸಾಮರ್ಥ್ಯಗಳಿರುವುವೆಂದೂ ಇದರ ಅರ್ಥ.

ಎಲ್ಲ ಕಾಲಗಳಲ್ಲಿಯೂ ಸಂದರ್ಭಗಳಲ್ಲಿಯೂ ನಾಡಿಗಳನ್ನು ಸುಲಭವಾಗಿ ಅಥವಾ ಖಚಿತವಾಗಿ ಗುರುತಿಸುವುದು ಸಾಧ್ಯವಿಲ್ಲ. ಕೆಲವು ಸಂದರ್ಭ

ಗಳಲ್ಲಿ ನಾಡಿಗಳು ಸಿಗುವುದಿಲ್ಲ. ಸಂಭೋಗವಮಾಡಿದ ಕೂಡಲೆ, ವ್ಯಾಯಾಮ ದಿಂದ ದಣಿದಿರುವಾಗ, ಓಡಿಬಂದಿರುವಾಗ, ಆಯಾಸವಾದಾಗ, ಹಾಡಿ ಕುಣಿದು ಅಥವಾ ಓದಿ ಬಳಲಿರುವಾಗ; ಉಪವಾಸವಿರುವಾಗ ಅಥವಾ ಹೊಟ್ಟೆ ತುಂಬ ಊಟವಮಾಡಿದೊಡನೆ; ಮತ್ತೇರಿಸುವ ಪದಾರ್ಥಗಳನ್ನು ಸೇವಿಸಿರುವಾಗ; ವಿಷವು ಮೈಯಲ್ಲಿರುವಾಗ; ಅಸ್ಥಿಗತಜ್ವರ ಕಾಯುತ್ತಿರು ವಾಗ, ಮೇಹರೋಗ ಅಥವಾ ಕುಷ್ಠ ಉಲ್ಬಣವಾಗಿರುವಾಗ; ಎಣ್ಣೆನೀರು ಹಾಕಿಕೊಂಡೊಡನೆ; ಹೆಂಗಸರು ಋತುಮತಿಯರಾಗಿರುವಾಗ; ತೀವ್ರವಾದ ಶೋಕ ಅಥವಾ ಭಯ ಕಾಡುತ್ತಿರುವಾಗ; ಕೈ ಮುರಿದಾಗ; ಹೆಣವನ್ನು ಮುಟ್ಟಿದೊಡನೆ; ಪ್ರಾಣಾಯಾಮ ಮಾಡಿದೊಡನೆ ನಾಡೀಪರೀಕ್ಷೆ ಮಾಡಿದರೆ ಪ್ರಯೋಜನವಿರದು.

ನಾಡೀಪರೀಕ್ಷೆಗೆ ಪ್ರಶಸ್ತವಾದ ಕಾಲವೆಂದರೆ ಚಿತ್ತಿರೈ ಮತ್ತು ವೈಕಾಸಿ ಎಂಬ ತಮಿಳು ಮಾಸಗಳಲ್ಲಿ (ಏಪ್ರಿಲ್ ೧೫ ರಿಂದ ಜೂನ್ ೧೫ರ ವರೆಗೆ) ಮುಂಜಾನೆ; ಆಣಿ, ಆಡಿ (ಜೂನ್ ೧೫ ರಿಂದ ಆಗಸ್ಟ್ ೧೫ರ ವರೆಗೆ), ಅಪ್ಪಿಶಿ, ಕಾರ್ತಿಕೈಮಾಸಗಳಲ್ಲಿ (ಅಕ್ಟೋಬರ್ ೧೫ ರಿಂದ ಡಿಸೆಂಬರ್ ೧೫ರ ವರೆಗೆ) ನಡುಹಗಲಿನ ವೇಳೆ; ಮಾರ್ಗಳಿ, ತಾಯ್ ಮತ್ತು ಮಾಶಿ ಮಾಸಗಳಲ್ಲಿ (ಡಿಸೆಂಬರ್ ೧೫ ರಿಂದ ಮಾರ್ಚ್ ೧೫ರ ವರೆಗೆ) ಸಂಜೆ; ಪಂಗುಣಿ (ಮಾರ್ಚ್ ೧೫ ರಿಂದ ಏಪ್ರಿಲ್ ೧೫ರ ವರೆಗೆ), ಆವಣಿ (ಆಗಸ್ಟ್ ೧೫ ರಿಂದ ಸೆಪ್ಟೆಂಬರ್ ೧೫ರ ವರೆಗೆ), ಪುರಟ್ಟಾಶಿ (ಸೆಪ್ಟೆಂಬರ್ ೧೫ ರಿಂದ ಅಕ್ಟೋಬರ್ ೧೫ರ ವರೆಗೆ) ಮಾಸಗಳಲ್ಲಿ ನಡುರಾತ್ರಿ, ಈ ತಿಂಗಳುಗಳ ಈ ಕಾಲಗಳಲ್ಲಿ ನಾಡಿಗಳು ಚೆನ್ನಾಗಿ ತೋರಿಕೊಳ್ಳುತ್ತವೆಂದು ಸಿದ್ಧವೈದ್ಯರ ಅನುಭವ.

ಗುರುನಾಡಿ, ಭೂತನಾಡಿಗಳ ಕಲ್ಪನೆಯಲ್ಲದೆ ಹೆಂಗಸರ ಗರ್ಭನಾಡಿ ಯನ್ನೂ ಗುರುತಿಸುವ ಕ್ರಮವಿದೆ. ಆಯುರ್ವೇದದಲ್ಲಿರುವಂತೆ ಮೃತ್ಯುನಾಡಿ ಯನ್ನೂ ಸಿದ್ಧವೈದ್ಯರು ಗಮನಿಸಿದ್ದಾರೆ. ನಾಡೀಪರೀಕ್ಷೆಯನ್ನೇ ಮುಖ್ಯ ವಾಗಿ ಅನುಸರಿಸಿದರೂ, ಈ ವೈದ್ಯಪದ್ಧತಿಯಲ್ಲಿ ಪಂಚೇಂದ್ರಿಯ ಪರೀಕ್ಷೆ, ಮಲಮೂತ್ರಗಳ ವರ್ಣಪರೀಕ್ಷೆ ಇವುಗಳ ನೆರವನ್ನೂ ಪಡೆಯುತ್ತಾರೆ.

ಅನುಬಂಧ : ಐದು

ಯುನಾನೀ ವೈದ್ಯದಲ್ಲಿ ನಾಡೀಪರೀಕ್ಷೆ

ನಾಡೀವ್ಯವಸ್ಥೆಯನ್ನು ಯುನಾನೀವೈದ್ಯವು ನಬ್ಜ್ ಎಂದು ಕರೆಯುತ್ತದೆ. ಈ ಮಾತಿಗೆ 'ಸಿರೆಗಳ ಸೂಕ್ಷ್ಮಮಿಡಿತ' ಎಂದರ್ಥ. ದೇಹದಲ್ಲಿ ಸಿರೆಗಳ ಸಂಘಟನೆ ಬೇರೆಬೇರೆ ಬಗೆಯಾಗಿ ಆಗುತ್ತದೆ. ಎಲ್ಲ ಮನುಷ್ಯರಲ್ಲೂ ಒಂದೇ ವ್ಯವಸ್ಥೆಯೆಂದು ಹೇಳಬರುವುದಿಲ್ಲ. ಪ್ರಕೃತಿ, ಅವಸ್ಥೆ, ದೇಶ, ಕಾಲ, ಮೊದಲಾದ ವಿವರಗಳನ್ನನುಸರಿಸಿ ವಿವಿಧವಾಗಿರುತ್ತದೆ. ನಾಡಿಯ ಗತಿಯನ್ನು ಗುರುತಿಸಿದರೆ ವ್ಯಕ್ತಿಯ ಆರೋಗ್ಯ ಅಥವಾ ರೋಗವನ್ನು ತಿಳಿದುಕೊಳ್ಳಬಹುದು. ಆರೋಗ್ಯವಾಗಿರುವವನ ನಾಡಿಯ ಸ್ವಭಾವ, ಗತಿಗಳು ವೈದ್ಯನಿಗೆ ತಿಳಿದಿದ್ದರೆ ಅದೇ ಮನುಷ್ಯನು ರೋಗಿಯಾದಾಗ ನಾಡೀಪರೀಕ್ಷೆ ಮಾಡಿ ರೋಗ ಇಂಥದೇ ಎಂದು ಖಚಿತವಾಗಿ ಹೇಳಲು ಬರುತ್ತದೆ.

ಪ್ರಾಣಶಕ್ತಿಯನ್ನು ಈ ವೈದ್ಯದಲ್ಲಿ 'ರೂಹ್' ಎಂದು ಕರೆದು ಅದು ಇಬ್ಬಗೆಯಾಗಿ ದೇಹದಲ್ಲಿ ಕೆಲಸಮಾಡುತ್ತ ವ್ಯಕ್ತಿಯ ಸುಖಕ್ಕೆ ಕಾರಣವಾಗುತ್ತದೆ ಎನ್ನುತ್ತಾರೆ. ಹೃದಯದಲ್ಲಿರುವ ಪ್ರಾಣಶಕ್ತಿ 'ಹಯವಾನೀ' ಎನಿಸಿಕೊಳ್ಳುತ್ತದೆ; ಶಿರಸ್ಸಿನಲ್ಲಿರುವುದು 'ನಫಸಾನಿ.' ಹಯವಾನಿಯೊಂದಿಗೆ ನಿಕಟವಾದ ನೆಂಟನ್ನು ಪಡೆದುಕೊಂಡ ನಾಡಿಯನ್ನು 'ಶುರಿಯಾನ್' ಎಂದೂ, ನಫಸಾನಿಯೊಂದಿಗೆ ನೆಂಟಿರುವ ನಾಡಿಯನ್ನು 'ಅಸವ್' ಎಂದೂ ಕರೆಯುತ್ತಾರೆ. ಶುರಿಯಾನ್ ಮುಖ್ಯವಾಗಿ ಹೃದಯದಲ್ಲೇ ಇರುವುದಾದರೂ, ದೇಹದ ಎಲ್ಲ ಭಾಗಗಳಲ್ಲೂ ಅದರ ಪ್ರತಿಧ್ವನಿಯಿರುತ್ತದೆ. ಅಸವ್ ತಲೆಯ ಒಳಭಾಗದಲ್ಲಿದ್ದುಕೊಂಡು ದೇಹದ ಎಲ್ಲ ಚಟುವಟಿಕೆಗಳಿಗೂ ಕಾರಣವಾಗುತ್ತದೆ.

ಈ ಇಬ್ಬಗೆಯ ಪ್ರಾಣಶಕ್ತಿಗಳಲ್ಲಿ ಹೃದಯದಲ್ಲಿರುವ ಶುರಿಯಾನ್ ಪ್ರಧಾನವಾದುದು; ರಾಜನ ಸಿಂಹಾಸನವಿದ್ದಂತೆ ನಾಡೀವ್ಯವಸ್ಥೆಯಲ್ಲಿ ಹೃದಯ. ಹೃದ್ಗತನಾಡಿಯ ಸಂಚಾರವನ್ನು ದೇಹದ ಹಲವು ಕಡೆ ಗುರುತಿ

ಸಬಹುದಾದರೂ, ಅದು ಸ್ಪಷ್ಟವಾಗಿ ತೋರಿಕೊಳ್ಳುವುದು ಕೈಯ ಮಣಿ ಕಟ್ಟಿನಲ್ಲಿಯೇ. ಉಳಿದೆಡೆ ಮಾಂಸಖಂಡಗಳಲ್ಲಿ ಅದು ಅಡಗಿಕೊಂಡು ಚೆನ್ನಾಗಿ ತೋರಿಕೊಳ್ಳುವುದಿಲ್ಲ. ಆದುದರಿಂದ ಯುನಾನೀವೈದ್ಯರು ನಾಡೀ ಪರೀಕ್ಷೆಯನ್ನು ಕೈಯ ಮಣಿಕಟ್ಟಿನಲ್ಲೇ ಮಾಡುವರು.

ಆಯುರ್ವೇದದಲ್ಲಿರುವ ಮೂರು ದೋಷಗಳ ಕಲ್ಪನೆ ಯುನಾನೀ ವೈದ್ಯದಲ್ಲಿಯೂ ಇದೆ. 'ಸೌದಾ' (ವಾತ) ಎನ್ನುವುದು ಶರೀರದಲ್ಲಿ ಪೃಥ್ವೀ ತತ್ತ್ವ; ಅದರ ಸ್ವಭಾವ ರೂಕ್ಷ, ಶೀತಳ. 'ಸಫ್ರಾ' (ಪಿತ್ತ) ಎನ್ನುವುದು ಅಗ್ನಿತತ್ತ್ವ; ಅದರ ಸ್ವಭಾವ ರೂಕ್ಷ, ಉಷ್ಣ. 'ಬಲ್‌ಗಮ್' (ಕಫ) ಎನ್ನುವುದು ಜಲತತ್ತ್ವ; ಅದರ ಸ್ವಭಾವ ಸ್ನಿಗ್ಧ, ಶೀತಳ. ಯುನಾನೀ ವೈದ್ಯದಲ್ಲಿ ಈ ಮೂರರ ಜೊತೆಗೆ ಇನ್ನೊಂದು ದೋಷವನ್ನೂ ಎಣಿಸು ತ್ತಾರೆ. 'ಖೂನ್' (ರಕ್ತ) ಎಂಬುದು ಶರೀರದಲ್ಲಿ ವಾಯುತತ್ತ್ವ; ಅದರ ಸ್ವಭಾವ ಸ್ನಿಗ್ಧ, ಉಷ್ಣ. ದೋಷಗಳಲ್ಲಿ ನಾಲ್ಕನೆಯದಾದ ರಕ್ತವೇ ಪ್ರಧಾ ನವಾದುದು. ದೋಷಗಳು ನಾಲ್ಕಾದುದರಿಂದ ಯುನಾನೀವೈದ್ಯರು ತಮ್ಮ ಬಲಗೈಯ ನಾಲ್ಕು ಬೆರಳುಗಳನ್ನು (ಹೆಬ್ಬೆರಳನ್ನು ಬಿಟ್ಟು) ಉಪಯೋಗಿಸಿ ನಾಡೀಪರೀಕ್ಷೆಯನ್ನು ಮಾಡುತ್ತಾರೆ. ನಾಡಿಯು ದೀರ್ಘವೂ ಸ್ಥೂಲವೂ ಆಗಿ ದ್ದರೆ, ಅದರಲ್ಲಿ ಉಷ್ಣಗುಣ ಹೆಚ್ಚೆಂದೂ, ಅದು ರಕ್ತವನ್ನು (ಎಂದರೆ 'ಖೂನ್') ತೋರಿಸುವುದೆಂದೂ ಅರ್ಥ. ನಾಡಿಯು ದೀರ್ಘವೂ ಕೃಶವೂ ಆಗಿದ್ದರೆ, ಉಷ್ಣ ಮತ್ತು ಶುಷ್ಕ ಎರಡೂ ಗುಣಗಳು ಹೆಚ್ಚೆಂದೂ, ಅದು ಪಿತ್ತವನ್ನು (ಎಂದರೆ 'ಸಫ್ರಾ') ತೋರಿಸುವುದೆಂದೂ ಅರ್ಥ. ನಾಡಿಯು ಹ್ರಸ್ವವೂ ಸ್ಥೂಲವೂ ಆಗಿದ್ದರೆ ಅದರಲ್ಲಿ ಶೀತಳ ಮತ್ತು ಆರ್ದ್ರ ಗುಣಗಳು ಹೆಚ್ಚೆಂದೂ, ಅದು ಕಫವನ್ನು ('ಬಲ್‌ಗಮ್') ತೋರಿಸುವುದೆಂದೂ ಅರ್ಥ. ನಾಡಿಯು ಹ್ರಸ್ವ ಮತ್ತು ಕೃಶ ಆಗಿದ್ದರೆ, ಅದರಲ್ಲಿ ಶೀತಳ ಮತ್ತು ಶುಷ್ಕ ಗುಣಗಳು ಹೆಚ್ಚೆಂದೂ, ಅದು ವಾತವನ್ನು ('ಸೌದಾ') ತೋರಿಸುವುದೆಂದೂ ಅರ್ಥ.

ನಾಡೀಗತಿಯಲ್ಲಿ ಎರಡು ಬಗೆಗಳನ್ನು ಹೇಳುತ್ತಾರೆ. ನಾಡಿಯು ಹೊರಬಂದು ಬೆರಳುಗಳಿಗೆ ಬಡಿಯುವಂತಿದ್ದರೆ ಅದು 'ಇಮ್ಬಿಸಾತ್' (ಬಾಹ್ಯಗತಿ); ನಾಡಿಯು ಬೆರಳಿಗೆ ತೋರಿಕೊಂಡು ಒಡನೆಯೇ ಒಳಗೆ ಹೋಗುವಂತಿದ್ದರೆ ಅದು 'ಇನ್‌ಕಿಬಾಜ್' (ಆಭ್ಯಂತರಗತಿ).

ನಾಡೀಪರೀಕ್ಷೆಮಾಡುವಾಗ ವೈದ್ಯನಾಗಲೀ ರೋಗಿಯಾಗಲೀ ಕೈಗಳಲ್ಲಿ

ಯಾವ ಪದಾರ್ಥವನ್ನೂ ಹಿಡಿದಿರಬಾರದು. ಕೈಗಳ ಮೇಲೆ ಭಾರ ಹಾಕಿರಬಾರದು, ಕೈಗಳಿಗೆ ಗಟ್ಟಿಯಾಗಿ ದಾರವನ್ನಾಗಲೀ ಪಟ್ಟಿಯನ್ನಾಗಲೀ ಕಟ್ಟಿಕೊಂಡಿರಬಾರದು. ವೈದ್ಯನು ನಾಡಿಯ ಉದ್ದ, ಮೊಟಕು, ಅಗಲ, ದಪ್ಪ, ತೆಳುವು, ಆಳ, ಹರವು, ಹೊರಗೆ ಹೆಚ್ಚು ಏರುವುದು, ಒಳಗೆ ತೀರ ಕೆಳಗೆ ಇಳಿಯುವುದು, ಮೇಲೇರುವುದರಲ್ಲೂ ಕೆಳಗಿಳಿಯುವುದರಲ್ಲೂ ಸಮಾನತೆ ಈ ಹತ್ತು ಪ್ರಕಾರಗಳನ್ನು ಗಮನಿಸುತ್ತಾನೆ.

'ಹಯವಾನೀ' ಎನ್ನುವ ಹೃದಯಸ್ಥ ಪ್ರಾಣಶಕ್ತಿಯು ಹರವಿಕೊಂಡರೆ, ಹೊರಗಿಂದ ಬರುವ ಗಾಳಿ ತೆಳುವಾಗಿ ಮನಸ್ಸಿಗೆ ನೆಮ್ಮದಿಯಾಗುತ್ತದೆ. ದೇಹದಲ್ಲಿರುವ ಉಷ್ಣವಾದ ಗಾಳಿಯನ್ನು ದೂರಮಾಡಲು ಹೃದಯ ಸಂಕುಚಿತವಾಗುತ್ತದೆ. ಹೀಗೆ ಹೃದಯದ ವಿಸ್ತಾರ, ಸಂಕೋಚಗಳಿಂದ ದೇಹದ ಎಲ್ಲ ಕೆಲಸಗಳೂ ನಡೆಯುತ್ತವೆ. ಈ ವಿಸ್ತಾರ-ಸಂಕೋಚಗಳನ್ನು ವೈದ್ಯನು ಗಮನಿಸುವುದರಿಂದ, ಅವನಿಗೆ ರೋಗದ ಕಾರಣ, ಸ್ಥಿತಿ, ತೀವ್ರತೆಗಳ ಅರಿವಾಗುತ್ತದೆ. ಈ ವಿಸ್ತಾರ-ಸಂಕೋಚಗಳೇ ಮೇಲೆ ಹೇಳಿದ ಹತ್ತು ಪ್ರಕಾರಗಳಲ್ಲಿ ತೋರಿಕೊಳ್ಳುವುದು. ನಾಡಿಯು ತುಂಬ ಉದ್ದವಾಗಿರುವಂತೆ ಕಂಡರೆ ಉಷ್ಣ ಹೆಚ್ಚೆಂದು ತಿಳಿಯಬೇಕು; ರೋಗದ ಹೆಚ್ಚಳವನ್ನು ಇದು ಸೂಚಿಸುತ್ತದೆ. ನಾಡಿಯ ಉದ್ದ ಕಡಮೆಯಾಗಿ ಕಂಡರೆ, ಉಷ್ಣವೂ ಕಡಮೆ; ರೋಗದ ಹೆಚ್ಚಳವೂ ಕಡಮೆ. ನಾಡಿಯ ಉದ್ದ ಸಮವಾಗಿರುವಂತೆ ಕಂಡರೆ, ಪ್ರಕೃತಿಯಲ್ಲಿ ಉಷ್ಣತೆ ಸರಿಯಾಗಿದೆಯೆಂದರ್ಥ; ಅದು ರೋಗವಿಲ್ಲದ ಸ್ಥಿತಿ. ನಾಡಿಯು ತುಂಬ ಅಗಲವಾಗಿದ್ದಂತೆ ಕಂಡರೆ, ಶೀತ ಹೆಚ್ಚೆಂದು ಅರ್ಥ. ಹೀಗೆಯೇ ಇತರ ಪ್ರಕಾರಗಳನ್ನೂ ತಿಳಿಯಬೇಕು.

ಜಿಂಕೆಯ ಮರಿಯಂತೆ ನಾಡಿ ಹಾರುತ್ತಿದ್ದರೆ ಅದಕ್ಕೆ 'ಗಿಜಾಲೀ' ಎಂದು ಹೆಸರು; ಪಿತ್ತ ಕೆರಳಿದುದರಿಂದ ವಿಕಾರವಾಗಿರುವುದನ್ನು ಸೂಚಿಸುತ್ತದೆ. ನೀರಿನ ಅಲೆಗಳಂತೆ ನಾಡಿ ನಡೆಯುತ್ತಿದ್ದರೆ ಅದು 'ಮೋಜೀ'ನಾಡಿ ('ಮೋಜ್' ಎಂದರೆ ನೀರಿನ ಅಲೆ); ದೇಹದಲ್ಲಿರುವ ವಾಯುವಿನಲ್ಲಿ ಉಷ್ಣ ಹೆಚ್ಚಾಗಿರುವುದನ್ನು, ಅಥವಾ ಶರೀರ ದುರ್ಬಲವಾಗಿರುವುದನ್ನು ಇದು ಸೂಚಿಸುತ್ತದೆ. ನಾಡಿಯು ಹುಳುವಿನಂತೆ ಮೆಲ್ಲಗೆ ನಡೆಯುತ್ತಿದ್ದರೆ ಅದು 'ದೂದೀ' ನಾಡಿ ('ದೂದ್' ಎಂದರೆ ಹುಳು, ಕ್ರಿಮಿ); ಇದು ಕಫದ ಸಂಚಯವನ್ನೂ, ಆಮದೋಷವನ್ನೂ ಸೂಚಿಸುತ್ತದೆ. ಕರಿ ಗೊದ್ದದಂತೆ,

ನವಿಲಿನಂತೆ ನಾಡಿ ನಡೆದರೆ ಅದು 'ನುಮಲೀ' ನಾಡಿ; ಇಂಥ ನಾಡಿಯುಳ್ಳವನು ಬೇಗ ಸಾಯುವನೆಂದು ಸೂಚನೆ.

ನಾಡಿಯು ಕಟ್ಟಿಗೆಯ ಮೇಲೆ ಉಳಿಯು ಹರಿಯುವಂತೆ ಕೈಬೆರಳುಗಳಿಗೆ ಕಾಣಿಸಿಕೊಂಡು ಮರೆಯಾಗುತ್ತಿದ್ದರೆ ಅದು 'ಮಿನ್ಶಾರೀ'; ಬಾಹ್ಯಾಂತಃ ಶೋಥವನ್ನು ಸೂಚಿಸುತ್ತದೆ. ನಾಡಿಯು ಇಲಿಯ ಬಾಲದಂತೆ ನಡೆಯುತ್ತಿದ್ದರೆ ಅದು 'ಜನ್‌ವುಲ್‌ಫಾರ್'; ಪಿತ್ತ ಮತ್ತು ಕಫಗಳ ಪ್ರಕೋಪವನ್ನು ಸೂಚಿಸುತ್ತದೆ. ನಾಡಿಯು ಸಲಾಕೆಯಂತೆ ಎರಡೂ ತುದಿಗಳಲ್ಲಿ ಸಣ್ಣಗಿದ್ದು ನಡುವೆ ದಪ್ಪಗಿದ್ದು, ನಿಧಾನವಾಗಿ ನಡೆಯುತ್ತಿದ್ದರೆ ಅದು 'ಮತಲೀ'; ದೌರ್ಬಲ್ಯವನ್ನು ಸೂಚಿಸುತ್ತದೆ. ನಾಡಿಯು ನಿಂತು ನಿಂತು ನಡೆಯುತ್ತಿದ್ದರೆ, ನಡುವಣ ಬೆರಳಿಗೆ ಎರಡು ಬಾರಿ ತಾಕಿದರೆ ಅದು 'ಜುಲಫಿಕರತ್' ನಾಡಿ; ಪಿತ್ತ-ಕಫಗಳು ದಗ್ಧ ಸ್ಥಿತಿಯಲ್ಲಿರುವುದನ್ನು ಸೂಚಿಸುತ್ತದೆ, ಸಂಕಲ್ಪ ಬಲಹೀನವಾಗಿರುವುದನ್ನೂ ಸೂಚಿಸುತ್ತದೆ; ಸಾಮಾನ್ಯವಾಗಿ ಶೋಕದಿಂದ ಬಳಲಿರುವಾಗ ಈ ನಾಡಿ ತೋರಿಕೊಳ್ಳುತ್ತದೆ. ನಾಡಿಯು ಮಿಡಿಯುತ್ತ ಕೋಷ್ಠ ಒರಟಾಗಿರುವುದನ್ನೂ ಮಲಬದ್ಧತೆಯನ್ನೂ ಸೂಚಿಸಿದರೆ ಅದನ್ನು 'ಮುರ್ತಇದ್' ಎಂದು ಕರೆಯುತ್ತಾರೆ.

ನಾಡಿಯು ವೇಗವಾಗಿ ಅಲುಗಾಡುತ್ತಿದ್ದರೆ 'ಮುರ್ತ್ಇಶ್' ನಾಡಿ (ಪರ್ಶಿಯನ್ ಭಾಷೆಯಲ್ಲಿ ಕಂಪಕ್ಕೆ 'ಇರ್ತ್ಶಾ' ಎನ್ನುತ್ತಾರೆ); ಇದು ಪಿತ್ತ ಮತ್ತು ವಾತಗಳ ಮಿಶ್ರಿತವಿಕಾರವನ್ನು ಸೂಚಿಸುತ್ತದೆ.

ನಾಡಿಯಲ್ಲಿ ರಕ್ತ ತುಂಬಿಕೊಂಡಿದ್ದರೆ ಅದು 'ಮುಮ್ತಲೀ' ನಾಡಿ (ಪರ್ಶಿಯನ್ ಭಾಷೆಯಲ್ಲಿ 'ಮುಮ್ತಲಾ' ಎಂದರೆ ತುಂಬಿಕೊಳ್ಳುವುದು, ಪರಿಪೂರ್ಣತೆ). ನಾಡಿ ಕಫ ಅಥವಾ ತಮೋಗುಣ ಹೆಚ್ಚಾಗಿ ಕೆಳಮುಖವಾದರೆ ಅದು 'ಮುನ್‌ಖಫಿಜ್'. ನಾಡಿಯು ಪಿತ್ತ ಪ್ರಕೋಪದಿಂದಾಗಿ ಮೇಲೆ ಕುಪ್ಪಳಿಸಿ ಬರುತ್ತಿದ್ದರೆ ಅದು 'ಸಾಹಕ್‌ಬುಲಂದ್' ಎನಿಸಿಕೊಳ್ಳುವುದು. ನಾಡಿಯು ನಾಲ್ಕು ಅಂಗುಲಗಳನ್ನೂ ಮೀರಿ ಉದ್ದವಾಗಿದ್ದರೆ ಅದು 'ದರಾಜ್'. ನಾಡಿಯ ಪರಿಮಾಣ ನ್ಯೂನವಾಗಿದ್ದರೆ 'ಕಸೀರ್'. ನಾಡಿಯು ಅಧೋಗಾಮಿನಿಯಾದರೆ 'ಅಮಿಾಕ್', (ಲಂಬ) ಆಯತವಾಗಿದ್ದರೆ 'ಆರೀಜ್'.

ದೋಷಗಳ ಸ್ಥಿತಿಗತಿಗಳನ್ನು ಅನುಸರಿಸಿ ನಾಡಿಯು ಬಲವಾಗಿಯೋ

ದುರ್ಬಲವಾಗಿಯೋ ಇರುತ್ತದೆ. ದೋಷಗಳ ಏರುಪೇರಿಲ್ಲದೆ ಸ್ವಸ್ಥವಾಗಿರುವ ಮನುಷ್ಯನ ನಾಡಿಯನ್ನು 'ವಾಕಿಯುಲ್‌ವಸ್ತ್' ಎನ್ನುತ್ತಾರೆ.

ಕೈಬೆರಳುಗಳನ್ನು ತಾನಾಗಿ ಬಂದು ಬಡಿಯುವ 'ಬಾಹ್ಯಗತಿ' (ಇಮ್ ವಿಸಾತ್) ನಾಡಿಗಳಲ್ಲಿ ದೀರ್ಘಾಕಾರ ('ತವೀಲ್') ಸ್ಥೂಲಾಕಾರ ('ಅರೀಜ್') ಮತ್ತು 'ಬಹಿರ್ಗತಿಯ ಆಕಾರ' ('ಉಮುಕ್') ಎಂಬ ಮೂರು ಪ್ರಕಾರಗಳಿವೆ. ಯಾವ ನಾಡಿಯು ನಾಲ್ಕು ಅಂಗಲಗಳಿಗಿಂತ ಹೆಚ್ಚೂ ಇಲ್ಲದೆ, ಕಡಮೆಯೂ ಇಲ್ಲದೆ ಸಮನಾಗಿರುವುದೋ ಅದು ಆ ವ್ಯಕ್ತಿಯಲ್ಲಿ ಶೀತವೂ ಉಷ್ಣವೂ ಸಮನಾಗಿರುವುದೆಂದು ಸೂಚಿಸುತ್ತದೆ. ಇದಕ್ಕೆ 'ಮುಅದಿಲ್' (ಸಮಾನ) ಎನ್ನುತ್ತಾರೆ. ನಾಡಿಯ ಉದ್ದ ನಾಲ್ಕು ಅಂಗುಲಗಳಿಗೆ ಕಡಮೆಯಿದ್ದರೆ, ವ್ಯಕ್ತಿಯಲ್ಲಿ ಶೀತದ ಆಧಿಕ್ಯಯಿದೆಯೆಂದು ತಿಳಿಯಬೇಕು. ಇದಕ್ಕೆ 'ಕಸೀರ್' (ಹ್ರಸ್ವ) ಎನ್ನುತ್ತಾರೆ. ನಾಡಿಯ ಉದ್ದ ನಾಲ್ಕು ಅಂಗುಲಗಳಿಗೆ ಹೆಚ್ಚು ಇದ್ದರೆ, ಅದು ವ್ಯಕ್ತಿಯಲ್ಲಿ ಉಷ್ಣದ ಆಧಿಕ್ಯವನ್ನು ತೋರಿಸುತ್ತದೆ. ಇದು 'ತವೀಲ್' (ದೀರ್ಘ) ಎನಿಸಿಕೊಳ್ಳುತ್ತದೆ. ಇವು ಮೂರೂ ದೀರ್ಘಾಕಾರದ ನಾಡಿಯ ಉಪಪ್ರಕಾರಗಳು.

ಸ್ಥೂಲಾಕಾರದ ನಾಡಿಯಲ್ಲೂ ಮೂರು ಉಪಪ್ರಕಾರಗಳು. ನಾಡಿಯು ತೋರು ಬೆರಳಿನಿಂದ ಹಿಡಿದು ಕಿರುಬೆರಳವರೆಗೆ ಹರಡಿಕೊಂಡಿರುವಂತೆ ಕಾಣುತ್ತಿದ್ದರೆ ಅದು 'ಅರೀಜ್'. ಅದು ಆರ್ದ್ರವಾಗಿಯೂ ಇದ್ದು ರಕ್ತದ ಮತ್ತು ಕಫದ ಗತಿಗಳನ್ನು ಸೂಚಿಸುತ್ತದೆ. ಹಾಗಲ್ಲದೆ ನಾಡಿಯು ತೆಳುವಾಗಿ (ಕೃಶವಾಗಿ) ಇರುವಂತಿದ್ದರೆ, ರೂಕ್ಷ (ಶುಷ್ಕ) ವಾಗಿದ್ದರೆ 'ಜ್ಯೈಯುಕ್ ವಾಜಿಕ್' ಎನಿಸಿಕೊಳ್ಳುತ್ತದೆ. ಪಿತ್ತ ವಾತಗಳು ಪ್ರಕುಪಿತವಾಗಿದ್ದಾಗ ಈ ನಾಡಿ ಕಾಣಿಸಿಕೊಳ್ಳುವುದು. ನಾಡಿಯು ಸ್ಥೂಲವೂ ಅಲ್ಲದೆ ಕೃಶವೂ ಅಲ್ಲದೆ ಸಮಾನವಾಗಿದ್ದರೆ ಅದು 'ಮುಅದಿಲ್'.

ಹಾಗೆಯೇ ಬಹಿರ್ಗತಿಯ ಆಕಾರದ ನಾಡಿಯಲ್ಲೂ ಮೂರು ಉಪಪ್ರಕಾರಗಳು. ನಾಡಿಯು ಮೇಲೇರಿ ಬಂದು ಪರೀಕ್ಷಕನಾದ ವೈದ್ಯನ ಬೆರಳುಗಳನ್ನು ಬಡಿಯುವಂತಿದ್ದರೆ ಅದು 'ಸುಶರಿಫ್' (ಬಹಿರ್ಗತ) ನಾಡಿ; ಉಷ್ಣವು ಹೆಚ್ಚೆಂದು ತೋರಿಸುತ್ತದೆ. ನಾಡಿಯು ನಿದಾನವಾಗಿ ಮೇಲೆ ಬಂದು ವೈದ್ಯನ ಬೆರಳನ್ನು ಸೋಕುವಂತಾದರೆ ಮತ್ತೆ ಹಿಂದೆಗೆಯುವಂತಾದರೆ 'ಮುನ್‌ಖಫಿಜ್' (ಅಂತರ್ಗತ); ಅದರಿಂದ ಉಷ್ಣ ಕಡಮೆಯೆಂದೂ, ಶೀತದ ಸೂಚನೆಯೆಂದೂ ತಿಳಿಯಬೇಕು. ನಾಡಿಯು ಅಷ್ಟು ಮೇಲೇರಿಯೂ

ಬರದೆ, ಹಿಂದೆಗೆಯದೆಯೂ ಇದ್ದರೆ ಅದು 'ಮುಅದಿಲ್'; ದೇಹದಲ್ಲಿ ಉಷ್ಣತೆ ಸಮನಾಗಿದೆಯೆಂದು ಇದು ಸೂಚಿಸುತ್ತದೆ.

ನಾಡೀ ಪರೀಕ್ಷೆಯಲ್ಲಿ ನಾಡಿಯ ಹಲವು ವಿವರಗಳನ್ನು ಗಮನಿಸುತ್ತಾರೆ. ಮೊದಲನೆಯದು, ನಾಡಿಯು ಬಲವಾಗಿದೆಯೋ ಇಲ್ಲವೋ ಎಂಬುದು. ನಾಡಿಯು ವೈದ್ಯನ ಬೆರಳಿನ ಮಾಂಸದ ಮೇಲೆ ಜೋರಾಗಿ ಬಡಿದರೆ ರೋಗಿಯ ಹೃದಯ ಬಲಶಾಲಿಯಾಗಿದೆಯೆಂದೂ, ನಾಡಿಯು ವೈದ್ಯನ ಬೆರಳಿಗೆ ಸೋಕಿ ಮತ್ತೆ ಕಾಣದಾದರೆ ಹೃದಯ ದುರ್ಬಲವಾಗಿದೆಯೆಂದೂ, ಅಷ್ಟು ಬಲವಾಗಿಯೂ ಅಲ್ಲದೆ ದುರ್ಬಲವಾಗಿಯೂ ಅಲ್ಲದೆ ಬಡಿದರೆ ಸಮಾನವಾದುದೆಂದೂ ತಿಳಿಯಬೇಕು.

ಎರಡನೆಯ ವಿವರ ನಾಡಿಯ ಗತಿಯನ್ನು ಕುರಿತದ್ದು. ನಾಡಿಯು ವೇಗವಾಗಿ ಬಂದು ಹೋಗಿ ಮಾಡುತ್ತಿದ್ದರೆ, ಶರೀರದಲ್ಲಿ ಉಷ್ಣ ಅಧಿಕವಾಗಿದೆಯೆಂದೂ, ನಿದಾನವಾಗಿ ನಡೆಯುತ್ತಿದ್ದರೆ ಶೀತ ಹೆಚ್ಚಿದೆಯೆಂದೂ, ಅಷ್ಟು ವೇಗವಾಗಿಯಾಗಲೀ ನಿದಾನವಾಗಿಯಾಗಲೀ ಅಲ್ಲದೆ ಸಮಗತಿಯಲ್ಲಿ ನಡೆಯುತ್ತಿದ್ದರೆ ಶರೀರದಲ್ಲಿ ಶೀತೋಷ್ಣಗಳು ಸಮವಾಗಿವೆಯೆಂದು ತಿಳಿಯಬೇಕು.

ಮೂರನೆಯ ವಿವರ ನಾಡಿಯ ಆಕೃತಿಯನ್ನು ಕುರಿತದ್ದು. ನಾಡಿಯನ್ನು ಬೆರಳಿನಿಂದ ಒತ್ತಿದರೆ ಸಹಜವಾಗಿ ಹಾಗೆಯೇ ಒಳಕ್ಕೆ ಹೋದರೆ ಅದು 'ತರಸ್ನಿಗ್ಧ' ನಾಡಿ ; ಪರ್ಶಿಯನ್ ಭಾಷೆಯಲ್ಲಿ ಇದನ್ನು 'ಲೀನ್' ಎನ್ನುತ್ತಾರೆ; ಮೃದುನಾಡಿ ಎಂದರ್ಥ. ನಾಡಿಯನ್ನು ಬೆರಳಿಂದ ಒತ್ತಿದರೆ ಅದು ಒಳಗೆ ಹೋಗದಂತೆ ಇದ್ದರೆ 'ಶುಷ್ಕ' ಅಥವಾ 'ಕಠಿಣ' ನಾಡಿ; ಪರ್ಶಿಯನ್‌ನಲ್ಲಿ 'ಸಲ್ಟ್' ಎನ್ನುತ್ತಾರೆ. ಒತ್ತಿದಾಗ ಅಷ್ಟು ಗಟ್ಟಿಯಾಗಿಯೂ ಇಲ್ಲದೆ ಮೃದುವಾಗಿಯೂ ಇಲ್ಲದೆ ಇರುವಾಗ ನಾಡಿ ಪರ್ಶಿಯನ್‌ನಲ್ಲಿ 'ಮೊಅದ್ದಿಲ್' (ಮೋತ್‌ದಿಲ್) ಎನಿಸಿಕೊಳ್ಳುತ್ತದೆ; ಅದು 'ಸಮ'ನಾಡಿ.

ನಾಲ್ಕನೆಯ ವಿವರ ನಾಡಿಯ ಪ್ರಮಾಣ. ನಾಡಿಯು ದಪ್ಪನಾಗಿದ್ದು, ಬೇಗಬೇಗ ಬಡಿದುಕೊಳ್ಳುತ್ತಿದ್ದರೆ ಅದು ರಕ್ತದಿಂದ ತುಂಬಿದೆಯೆಂದರ್ಥ; ಅದನ್ನು 'ಮುಮ್‌ತಿಲಾ' ಎನ್ನುತ್ತಾರೆ; ಶರೀರದ ನಾಡಿಗಳಲ್ಲಿ ಪ್ರಾಣಶಕ್ತಿ ತುಂಬಿಕೊಂಡಿರುವ ಸೂಚನೆ. ನಾಡಿಯು ಟೊಳ್ಳಾಗಿದ್ದು ತೆಳ್ಳಗಿದ್ದು, ನಿದಾನವಾಗಿ ನಡೆಯುತ್ತಿದ್ದರೆ, ಅದು 'ಖಾಲೀ' ನಾಡಿ; ರಕ್ತ ಸಾಕಷ್ಟು

ಇಲ್ಲವೆಂದು ಸೂಚನೆ. ಹೀಗೆ ನಾಡಿಯು ಅತಿ ದಪ್ಪವಾಗಲೀ ಅತಿ ತೆಳ್ಳಗಾಗಲೀ ಇರದೆ ಇದ್ದರೆ 'ಸಮ'ನಾಡಿ (ಮೊಅದ್ದಿಲ್).

ಐದನೆಯ ವಿವರ ಸ್ಪರ್ಶ. ನಾಡಿಯನ್ನು ಮುಟ್ಟಿದಾಗ ಬಿಸಿಯಾಗಿ ತೋರಿದರೆ ರಕ್ತಜ್ವರ ಇದೆಯೆಂದರ್ಥ; ಶರೀರದಲ್ಲಿ ಉಷ್ಣ ಹೆಚ್ಚೆಂದಾದರೂ ಆಗಬಹುದು. ನಾಡಿಯು ತಣ್ಣಗಿದ್ದರೆ ರಕ್ತದಲ್ಲಿ ಶೀತವಿದೆಯೆಂದೂ, ಶರೀರದಲ್ಲಿ ಶೀತ ಹೆಚ್ಚೆಂದೂ ಅರ್ಥ. ನಾಡಿಯು ಬೆಚ್ಚಗಾಗಲೀ ತಣ್ಣಗಾಗಲೀ ತೋರದಿದ್ದರೆ 'ಸಮ'ನಾಡಿ (ಮೊಅದ್ದಿಲ್).

ಆರನೆಯ ವಿವರ ರೋಗದ ಸಾಧ್ಯಾಸಾಧ್ಯತೆಯನ್ನು ಕುರಿತದ್ದು. ನಾಡಿಯು ಕಡಮೆಯೆಂದರೆ ಮೂವತ್ತೈದು ಬಾರಿ ಮಿಡಿದು ನಿಂತರೆ ಅದು ಸಾಧ್ಯನಾಡಿ ('ಉಸ್ತವಾ') ಎಂದು ತಿಳಿಯಬೇಕು (ಪೂರ್ವಸದೃಶ). ನಾಡಿಯು ಮೂವತ್ತೈದು ಬಾರಿ ಮಿಡಿಯುವಾಗ ನಡುವೆ ಹಲವು ಬಾರಿ ನಿಂತು ನಿಂತು ನಡೆದರೆ ಅದು ಅಸಾಧ್ಯನಾಡಿ ('ಇಖ್ತಿಲಾಫ್'); ವಿಪರೀತ ನಾಡಿಯೆನ್ನುವರು. ಮಿಡಿಯುವಾಗ ಹಲವು ಬಾರಿ ನಿಲ್ಲದೆ, ನಿಂತಾಗ ಒಡನೆಯೇ ವೇಗವಾಗಿ ನಡೆಯುವಂತಿದ್ದರೆ ಅದು 'ಸಮ'ನಾಡಿ (ಮೊಅದ್ದಿಲ್).

ಕಡೆಯ ವಿವರ ನಾಡಿಯ ಸ್ಥಿತಿಯನ್ನು ಕುರಿತದ್ದು. ನಾಡಿಯು ವೈದ್ಯನ ಬೆರಳನ್ನು ಮುಟ್ಟಿ ಒಡನೆಯೇ ಕಾಣದಾದರೆ ಅದು 'ದುರ್ಬಲಸ್ಥಿತಿ' ನಾಡಿ ('ಮುತ್‌ವಾತರ್'). ನಾಡಿಯು ವೈದ್ಯನ ಬೆರಳನ್ನು ಮುಟ್ಟಿ, ಕೆಲಕಾಲ ಕಾಣುತ್ತಲೇ ಇದ್ದರೆ ಅದು 'ಸಬಲಸ್ಥಿತಿನಾಡಿ' ('ಮುತ್ ಪಾವತ್'). ಈ ಎರಡೂ ಇಲ್ಲದೆ ಸಮಾನವಾಗಿ ಬೆರಳನ್ನು ಮುಟ್ಟಿ ಕಾಣಿಸಿಕೊಂಡರೆ ಅದು 'ಸಮಸ್ಥಿತಿನಾಡಿ' (ಮೊಅದ್ದಿಲ್).

ಮೇಲೆ ಕಾಣಿಸಿರುವ ಭಾಗ 'ಬೃಹನ್ನಿಘಂಟುರತ್ನಾಕರ'ದಿಂದ ಎತ್ತಿಕೊಂಡಿರುವುದು. ಇದನ್ನು ದತ್ತರಾಮ ಪಾಠಕರೆಂಬುವರು ಸಂವತ್ ೧೯೪೫ರಲ್ಲಿ (ಶಕ ೧೮೧೦) ಸಿದ್ಧಪಡಿಸಿ ಪ್ರಕಟಿಸಿದ 'ನಾಡೀದರ್ಪಣ' ಎಂಬ ಗ್ರಂಥದಲ್ಲಿ ಕೊಟ್ಟಿದ್ದಾರೆ. ಮೂಲ ಸಂಸ್ಕೃತ ಶ್ಲೋಕಗಳಿಗೆ ಹಿಂದೀಭಾಷೆಯ ಟೀಕೆಯೂ ಇದೆ (ಗಂಗಾ ವಿಷ್ಣು ಖೇಮರಾಜರಿಂದ ಮುಂಬಯಿಯ ನಿರ್ಣಯ ಸಾಗರ ಯಂತ್ರಾಲಯದಲ್ಲಿ ಅಚ್ಚಾದುದು, ಪುಟಗಳು ೪೭ ರಿಂದ ೫೪ರವರೆಗೆ). ಓದುಗರಿಗೆ ಅನುಕೂಲವಾಗುವಂತೆ ಕೆಲವು ಕೋಷ್ಟಕಗಳನ್ನೂ ಕೊಟ್ಟಿದ್ದಾರೆ.

ಇಲ್ಲವೆಂದು ಸೂಚನೆ. ಹೀಗೆ ನಾಡಿಯು ಅತಿ ದಪ್ಪವಾಗಲೀ ಅತಿ ತೆಳ್ಳಗಾಗಲೀ ಇರದೆ ಇದ್ದರೆ 'ಸಮ'ನಾಡಿ (ಮೊಅದ್ದಿಲ್).

ಐದನೆಯ ವಿವರ ಸ್ಪರ್ಶ. ನಾಡಿಯುನ್ನು ಮುಟ್ಟಿದಾಗ ಬಿಸಿಯಾಗಿ ತೋರಿದರೆ ರಕ್ತಜ್ವರ ಇದೆಯೆಂದರ್ಥ; ಶರೀರದಲ್ಲಿ ಉಷ್ಣ ಹೆಚ್ಚೆಂದಾದರೂ ಆಗಬಹುದು. ನಾಡಿಯು ತಣ್ಣಗಿದ್ದರೆ ರಕ್ತದಲ್ಲಿ ಶೀತವಿದೆಯೆಂದೂ, ಶರೀರದಲ್ಲಿ ಶೀತ ಹೆಚ್ಚೆಂದೂ ಅರ್ಥ. ನಾಡಿಯು ಬೆಚ್ಚಗಾಗಲೀ ತಣ್ಣಗಾಗಲೀ ತೋರದಿದ್ದರೆ 'ಸಮ'ನಾಡಿ (ಮೊಅದ್ದಿಲ್).

ಆರನೆಯ ವಿವರ ರೋಗದ ಸಾಧ್ಯಾಸಾಧ್ಯತೆಯುನ್ನು ಕುರಿತದ್ದು. ನಾಡಿಯು ಕಡಮೆಯೆಂದರೆ ಮೂವತ್ತೈದು ಬಾರಿ ಮಿಡಿದು ನಿಂತರೆ ಅದು ಸಾಧ್ಯನಾಡಿ ('ಉಸ್ತುವಾ') ಎಂದು ತಿಳಿಯಬೇಕು (ಪೂರ್ವಸದೃಶ). ನಾಡಿಯು ಮೂವತ್ತೈದು ಬಾರಿ ಮಿಡಿಯುವಾಗ ನಡುವೆ ಹಲವು ಬಾರಿ ನಿಂತು ನಿಂತು ನಡೆದರೆ ಅದು ಅಸಾಧ್ಯನಾಡಿ ('ಇಖ್ತಿಲಾಫ್'); ವಿಪರೀತ ನಾಡಿಯೆನ್ನುವರು. ಮಿಡಿಯುವಾಗ ಹಲವು ಬಾರಿ ನಿಲ್ಲದೆ, ನಿಂತಾಗ ಒಡನೆಯೇ ವೇಗವಾಗಿ ನಡೆಯುವಂತಿದ್ದರೆ ಅದು 'ಸಮ'ನಾಡಿ (ಮೊಅದ್ದಿಲ್).

ಕಡೆಯ ವಿವರ ನಾಡಿಯ ಸ್ಥಿತಿಯುನ್ನು ಕುರಿತದ್ದು. ನಾಡಿಯು ವೈದ್ಯನ ಬೆರಳನ್ನು ಮುಟ್ಟಿ ಒಡನೆಯೇ ಕಾಣದಾದರೆ ಅದು 'ದುರ್ಬಲಸ್ಥಿತಿ' ನಾಡಿ ('ಮುತ್‌ವಾತರ್'). ನಾಡಿಯು ವೈದ್ಯನ ಬೆರಳನ್ನು ಮುಟ್ಟಿ, ಕೆಲಕಾಲ ಕಾಣುತ್ತಲೇ ಇದ್ದರೆ ಅದು 'ಸಬಲಸ್ಥಿತಿನಾಡಿ' ('ಮುತ್‌ಪಾವತ್'). ಈ ಎರಡೂ ಇಲ್ಲದೆ ಸಮಾನವಾಗಿ ಬೆರಳನ್ನು ಮುಟ್ಟಿ ಕಾಣಿಸಿಕೊಂಡರೆ ಅದು 'ಸಮಸ್ಥಿತಿನಾಡಿ' (ಮೊಅದ್ದಿಲ್).

ಮೇಲೆ ಕಾಣಿಸಿರುವ ಭಾಗ 'ಬೃಹನ್ನಿಘಂಟುರತ್ನಾಕರ'ದಿಂದ ಎತ್ತಿಕೊಂಡಿರುವುದು. ಇದನ್ನು ದತ್ತರಾಮ ಪಾಠಕರೆಂಬುವರು ಸಂವತ್ ೧೯೪೫ರಲ್ಲಿ (ಶಕ ೧೮೧೧) ಸಿದ್ಧಪಡಿಸಿ ಪ್ರಕಟಿಸಿದ 'ನಾಡೀದರ್ಪಣ' ಎಂಬ ಗ್ರಂಥದಲ್ಲಿ ಕೊಟ್ಟಿದ್ದಾರೆ. ಮೂಲ ಸಂಸ್ಕೃತ ಶ್ಲೋಕಗಳಿಗೆ ಹಿಂದೀಭಾಷೆಯ ಟೀಕೆಯೂ ಇದೆ (ಗಂಗಾ ವಿಷ್ಣು ಖೇಮರಾಜರಿಂದ ಮುಂಬಯಿಯ ನಿರ್ಣಯ ಸಾಗರ ಯಂತ್ರಾಲಯದಲ್ಲಿ ಅಚ್ಚಾದುದು, ಪುಟಗಳು ೪೬ ರಿಂದ ೫೪ರವರೆಗೆ). ಓದುಗರಿಗೆ ಅನುಕೂಲವಾಗುವಂತೆ ಕೆಲವು ಕೋಷ್ಟಕಗಳನ್ನೂ ಕೊಟ್ಟಿದ್ದಾರೆ.